ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 39 ಸೆಪ್ಟೆಂಬರ್ 26, 2004 ಬೆಲೆ ರೂ. 3.00



ಅರಣ್ಯ ಭೂಮಿಯ ಹಕ್ಕಿಗಾಗಿ.....



ಧರಂ ಸರ್ಕಾರದ ಮೇಲೆ 'ವಿಶ್ವಬ್ಯಾಂಕ್' ಗರಂ !

ಮಹಾರಾಷ್ಟ್ರದತ್ತ ಖಾಕೀ ಪಡೆಗಳ 'ತ್ರಿಶೂಲ' ಯಾತ್ರೆ



ವೀರ ಸಾವರ್ಕರ್ ಎಷ್ಟು ವೀರ?

- ಆಸ್ಪತ್ರೆಗೇ ಅಂಟಿತು ಕ್ಷಯ ರೋಗ
- ಚಿಲಿ ಸರ್ವಾಧಿಕಾರಿ ಪಿನೋಚೆಗೆ ಶಿಕ್ಷೆ
- ಅಂಗನವಾಡಿ ಕಾರ್ಯಕರ್ತೆಯರ ಹಗಲು ರಾತ್ರಿ ಧರಣಿ
- ಜನಸ್ಪಂದನವಿಲ್ಲದೇ ಮುಗಿದ ತಿರಂಗ ಯಾತ್ರೆ

ಮೇರಿ ದೇವಾಸಿಯಾ - ಒಂದು ಸ್ಮರಣೆ

ಕೆ.ರಾಮಯ್ಯ ಹೆಗ್ಡೆ

ರಾಜ್ಯ ಸರಕಾರಿ ನೌಕರರ ಯವುದೇ ಹೋರಾಟದ ಸಂದರ್ಭದಲ್ಲಿ ನಮಗೆ ನೆನಪಿಗೆ ಬರುವುದು. ಸುಮಾರು 40-50 ವರ್ಷಗಳ ಹಿಂದೆ ನಮ್ಮ ರಾಜ್ಯದಲ್ಲಿ ಸರಕಾರಿ ನೌಕರರ ಚಳುವಳಿಯನ್ನು ಕಟ್ಟಿ ನಿರಂತರ ಹೋರಾಟಗಳನ್ನು ನಡೆಸಿದ ಸಮರಶೀಲ ನಾಯಕಿ ಮೇರಿ ದೇವಾಸಿಯಾರವರು. ಇವರು ಅಂದಿನ ದಿನಗಳಲ್ಲಿ ರಾಜ್ಯ ಸರಕಾರಿ ನೌಕರರ ಮುಂಚೂಣಿ ನಾಯಕರಾಗಿದ್ದರು ಮಾತ್ರವಲ್ಲದೆ ಇತರ ಕಾರ್ಮಿಕ ಸಂಘಟನೆಗಳ ಜೊತೆ ನಿಕಟ ಸಂಪರ್ಕವನ್ನು ಹೊಂದಿದ್ದು ಕಾರ್ಮಿಕ ಚಳುವಳಿಯಲ್ಲಿಯೂ ಚಿರಪರಿಚಿತರಾಗಿದ್ದರು. ಹೋರಾಟಗಳ ಮೂಲಕ ಜನತೆಯ ಮನೆಮಾತಾಗಿದ್ದರು.



ಸಮರ್ಥ ಸಂಘಟಕಿ - ಅಮೋಘ ಸೇವೆ

1927ರಲ್ಲಿ ಕೇರಳ ರಾಜ್ಯದ ಬಡ ರೈತ ಕುಟುಂಬದಲ್ಲಿ ಜನಿಸಿದ ಮೇರಿ ದೇವಾಸಿಯಾರವರು, ಎಸ್ಎಸ್ಎಲ್ಸಿ ಶಿಕ್ಷಣವನ್ನು ಕೇರಳದಲ್ಲಿ ಮುಗಿಸಿ, ವಾರಣಾಸಿಯಲ್ಲಿ ಇಂಟರ್ ಮೀಡಿಯಟ್ ಶಿಕ್ಷಣವನ್ನು ಪಡೆದು, ಬೆಂಗಳೂರಿಗೆ ಬಂದು 1951ರಲ್ಲಿ ಸರಕಾರಿ ಸಚಿವಲಯದಲ್ಲಿ ಕಿರಿಯ ಸಹಾಯಕರಾಗಿ ಕೆಲಸಕ್ಕೆ ಸೇರಿದರು. ಯಾವುದೇ ಉತ್ತಮ ಸೇವಾ ಸೌಲಭ್ಯಗಳಿಲ್ಲದ ನೌಕರರ ಸಂಕಷ್ಟ ಪರಿಸ್ಥಿತಿಗಳನ್ನು ಗಮನಿಸಿದ ದೇವಾಸಿಯಾರವರು ಸಂಘಟನೆ ಮತ್ತು ಹೋರಾಟಗಳ ಮೂಲಕ ಮಾತ್ರ ನೌಕರರ ಕ್ಷೇಮಾಭಿವೃದ್ಧಿ ಸಾಧನವೆಂದು ಮನಗಂಡು 1920 ರಲ್ಲಿ ಸ್ಥಾಪನೆಯಾಗಿದ್ದ 'ದಿ ಮೈಸೂರು ಸ್ಟೇಟ್ ನಾನ್‌ಗಜೆಟೆಡ್ ಆಫೀಸರ್ಸ್ ಅಸೋಸಿಯೇಷನ್' (ಈಗಿನ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ)ದಲ್ಲಿ ಸದಸ್ಯರಾದರು. ನಂತರ ಹಂತ ಹಂತವಾಗಿ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಜಂಟಿ ಕಾರ್ಯದರ್ಶಿಯಾಗಿ, 1961 ರಿಂದ 1963ರ ವರೆಗೆ ಪ್ರಧಾನ ಕಾರ್ಯದರ್ಶಿಯಾಗಿ 1963 ರಿಂದ 1967ರ ಅಧ್ಯಕ್ಷರಾಗಿ, ನೌಕರರ ಶ್ರೇಯೋಭಿವೃದ್ಧಿ ಗಾಗಿ ನಿರಂತರವಾಗಿ ಸಂಘಟನೆ ಮತ್ತು ಹೋರಾಟಗಳನ್ನು ನಡೆಸುತ್ತಾ ಅಮೋಘ ಸೇವೆಯನ್ನು ಸಲ್ಲಿಸಿದರು.

1920 ರಷ್ಟು ಹಿಂದೆ ಸ್ಥಾಪನೆಗೊಂಡಿದ್ದ ಎನ್‌ಜಿಬಿ ಸಂಘವು ಬೆಳಕಿಗೆ ಬಂದುದು ಮೇರಿ ದೇವಾಸಿಯಾರವರ ಹೋರಾಟದ ದಿನಗಳಲ್ಲಿ. ಆ ಕಾಲದಲ್ಲಿ ಮೈಸೂರು ರಾಜ್ಯದ ಸರ್ಕಾರಿ ನೌಕರರ ಸೇವಾಸ್ಥಿತಿಗಳು ತೀರಾ ದುಸ್ಥಿತಿಯಲ್ಲಿದ್ದವು. ವೈಜ್ಞಾನಿಕ ತಳಹದಿಯಲ್ಲಿ ವೇತನಶ್ರೇಣಿ, ಗ್ರಾಹಕರ ಬೆಲೆ ಸೂಚ್ಯಂಕವನ್ನಾಧರಿಸಿ ತುಟ್ಟಿಭತ್ಯೆ ಮತ್ತಿತರ ಸೌಲಭ್ಯಗಳನ್ನು ನೀಡುತ್ತಿರಲಿಲ್ಲ. ವೇತನ ತಾರತಮ್ಯ, ಅಸಮಾನತೆಗಳು ನಿವಾರಣೆಯಾಗಿರಲಿಲ್ಲ. ಆಗ ನಾಲ್ಕನೇ ದರ್ಜೆ ನೌಕರರ ವೇತನ ಕೇವಲ ರೂ. 20-25 ಆಗಿದ್ದು ದರ್ಜೆ ನೌಕರರ ವೇತನ ಕೇವಲ ರೂ. 20-25 ಆಗಿದ್ದು, ವಾರ್ಷಿಕ ವೇತನ ಬಡ್ತಿ ಒಂದು ರೂಪಾಯಿ ಮಾತ್ರ ಇತ್ತು. ಈ ಎಲ್ಲಾ ಅಸಮಾನತೆಗಳನ್ನು ಹೋಗಲಾಡಿಸಲು ಮತ್ತು ನೌಕರರ ಸೇವಾಸ್ಥಿತಿಗಳನ್ನು ಉತ್ತಮಪಡಿಸಲು ಸಂಘಟನೆ ಮತ್ತು ಹೋರಾಟಗಳಿಂದ ಮಾತ್ರ ಸಾಧ್ಯವೆಂದು ಮನಗಂಡ ಮೇರಿ ದೇವಾಸಿಯಾ ರಾಜ್ಯಾದ್ಯಂತ ಎಲ್ಲಾ ಜಿಲ್ಲೆ, ತಾಲ್ಲೂಕುಗಳಿಗೆ ಪ್ರವಾಸ ಮಾಡಿ ನೌಕರರನ್ನು ಸಂಘಟಿಸಿದರು. ಸಂಘಟನೆಯ ಆಧಾರದ ಮೇಲೆ ನೌಕರರ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟರು. ಆದರೆ ಅಂದಿನ ಸರ್ಕಾರ ಬೇಡಿಕೆಗಳನ್ನು ಈಡೇರಿಸಲು ನಿರಾಕರಿಸಿದಾಗ ಹೋರಾಟದ ಮಾರ್ಗ ಅನಿವಾರ್ಯವಾಯಿತು.

ದಬ್ಬಾಳಿಕೆಗೆ ಜಗ್ಗದ ನಾಯಕಿ

ರಾಜ್ಯಾದ್ಯಂತ ನೌಕರರು ಸಂಘಟಿತರಾದರು. ತಮ್ಮ ಬೇಡಿಕೆಗಳನ್ನು ಪಡೆಯಲು ಕಂಕಣಬದ್ಧರಾದರು. ಎಲ್ಲೆಡೆ ಬಹಿರಂಗ ಸಭೆಗಳು, ಮೆರವಣಿಗೆಗಳು ನಡೆದವು. ಮುಖಂಡರಿಂದ ಭಾಷಣಗಳ ಸುರಿಮಳೆ, ನೌಕರರಿಂದ ಘೋಷಣೆಗಳು ಮೊಳಗಿದವು. ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದ ಬಳಿ ಬೃಹತ್ ಮೆರವಣಿಗೆ, ಮೇರಿ ದೇವಾಸಿಯಾ ಸೇರಿದಂತೆ ಹಲವು ನೌಕರ ಮುಖಂಡರ ಮೇಲೆ ಲಾಠಿ ಪ್ರಹಾರಗಳು ನಡೆದವು. ಆದರೆ ನೌಕರರು ದೃತಿಗೆಡಲಿಲ್ಲ. ಮೇರಿ ದೇವಾಸಿಯಾರವರ ಸಮರ್ಥ ನಾಯಕತ್ವದಲ್ಲಿ ನೌಕರರು ಸಂಘಟಿತರಾಗಿದ್ದರು.

1965 ರಲ್ಲಿ ಮಾನ್ಯ ಶ್ರೀ ಎಸ್.ನಿಜಲಿಂಗಪ್ಪನವರ ನೇತೃತ್ವದ ಸರ್ಕಾರ ಮಂಜೂರು ಮಾಡಿದ ರೂ. 5/- ತುಟ್ಟಿಭತ್ಯೆಯನ್ನು ತಿರಸ್ಕರಿಸಲು ಸಂಘ ತೀರ್ಮಾನಿಸಿದಂತೆ, ಎಲ್ಲಾ ನೌಕರರು ಈ ತುಟ್ಟಿಭತ್ಯೆ ಹಣವನ್ನು ಮನಿ ಆರ್ಡರ್ ಮೂಲಕ ಸರ್ಕಾರಕ್ಕೆ ಹಿಂತಿರುಗಿಸಿ ಇತಿಹಾಸ ನಿರ್ಮಿಸಿದರು. ಮುಷ್ಕರ ಘೋಷಣೆಯಾಯಿತು. ಸರ್ಕಾರ ದಮನಕಾರಿ ನೀತಿಯನ್ನು ಅನುಸರಿಸಿತು. ಮೇರಿ ದೇವಾಸಿಯಾರವರು ವೇಷ ಬದಲಾಯಿಸಿ, ಭೂಗತರಾಗಿ ಮುಷ್ಕರವನ್ನು ಸಂಘಟಿಸಿದರು. 1965 ರ ಜನವರಿಯಲ್ಲಿ ನಡೆದ ಮುಷ್ಕರ ಯಶಸ್ವಿಯಾಯಿತು. ಮೇರಿ ದೇವಾಸಿಯಾ ಮತ್ತಿತರ ಮುಖಂಡರನ್ನು ಬಂಧಿಸಿ ಜೈಲಿನಲ್ಲಿಡಲಾಯಿತು. ಅಲ್ಲದೆ ಜಂಟಿ ಹೋರಾಟ ಸಮಿತಿಯ ಎಸ್.ವೆಂಕಟರಾಮ್, ಶಾಂತವೇರಿ ಗೋಪಾಲಗೌಡ, ಎಂ.ಎಸ್.ಕೃಷ್ಣನ್, ಎನ್.ಎಲ್.ಉಪಾಧ್ಯಾಯ ಮತ್ತಿತರ ಕಾರ್ಮಿಕ ಮುಖಂಡರ ಮೇಲೆ ದಬ್ಬಾಳಿಕೆ ನಡೆಸಲಾಯಿತು. 1967 ರ ಜನವರಿ 5 ಮತ್ತು ಜನವರಿ 24 ಮತ್ತು 25 ಹೀಗೆ ಎರಡು ಬಾರಿ ಯಶಸ್ವಿ ಮುಷ್ಕರಗಳನ್ನು ನಡೆಸಿ ನೌಕರರು ತಮ್ಮ ಐಕ್ಯತೆಯನ್ನು ಪ್ರದರ್ಶಿಸಿದರು. ಹೋರಾಟದ ಸಂದರ್ಭದಲ್ಲಿ 'SAAGA OF STRUGGLE' ಎಂಬ ಪುಸ್ತಕವನ್ನು ಪ್ರಕಟಿಸಲಾಯಿತು.

ನೌಕರರ ವೇತನ ಶ್ರೇಣಿಗಳ ತಾರತಮ್ಯ, ತುಟ್ಟಿಭತ್ಯೆ ಹೆಚ್ಚಳ ಮತ್ತಿತರ ಸವಲತ್ತುಗಳನ್ನು ಈಡೇರಿಸುವಂತೆ ಸರಕಾರಕ್ಕೆ ಮನವಿ ಪತ್ರಗಳನ್ನು ಸಲ್ಲಿಸಿದರೂ ಪ್ರಯೋಜನವಾಗಲಿಲ್ಲ. ಹೋರಾಟ ಅನಿವಾರ್ಯವಾಯಿತು. ಮೇರಿ ದೇವಾಸಿಯಾ ನೇತೃತ್ವದಲ್ಲಿ ಎಲ್ಲಾ ತಾಲ್ಲೂಕುಗಳಲ್ಲೂ ಸಭೆ, ಮೆರವಣಿಗೆಗಳನ್ನು ಸಂಘಟಿಸಲಾಯಿತು. ಘೋಷಣೆ ಗಳು ಮೊಳಗಿದವು. ರಾಜ್ಯಾದ್ಯಂತ ನೌಕರರು ಮುಷ್ಕರಕ್ಕೆ ಸಜ್ಜಾದರು. ಬೆಂಗಳೂರಿನಲ್ಲಿ ನಡೆದ ಬೃಹತ್ ಮೆರವಣಿಗೆಕಾರರ ಮೇಲೆ ಲಾಠಿ ಪ್ರಹಾರಗಳು ನಡೆದವು. ನೌಕರರು ಹಿಂಜರಿಯಲಿಲ್ಲ. ಮುಷ್ಕರಗಳು ಯಶಸ್ವಿಯಾಗಿ ನಡೆದವು. ಮೇರಿ ದೇವಾಸಿಯಾ ಮತ್ತಿತರ ನೌಕರ ಮುಂದಾಳುಗಳನ್ನೇ ಬಂಧಿಸಿ ಜೈಲಿನಲ್ಲಿಡಲಾಯಿತು. ಮುಷ್ಕರವನ್ನು ಬೆಂಬಲಿಸಿದ ಕಾರ್ಮಿಕ ಮುಖಂಡರುಗಳಾದ ಎಸ್.ವೆಂಕಟರಾಮ್, ಶಾಂತವೇರಿ ಗೋಪಾಲಗೌಡ, ಎಂ.ಎಸ್.ಕೃಷ್ಣನ್, ಎನ್.ಎಲ್.ಉಪಾಧ್ಯಾಯರುಗಳ ಮೇಲೆ ದಬ್ಬಾಳಿಕೆ ನಡೆಸಿ ಜೈಲು ಶಿಕ್ಷೆ ನೀಡಲಾಯಿತು.

ಸರ್ಕಾರದ ನೀತಿಗಳನ್ನು ಪ್ರಶ್ನಿಸಿದರು ಎಂದು ನೆಪವೊಡ್ಡಿ 1965 ಮೇ 1 ರಂದು ಸರಕಾರವು ಮೇರಿ ದೇವಾಸಿಯಾರನ್ನು ಸೇವೆಯಿಂದ ವಜಾ ಮಾಡಿತು. ನೌಕರರ ಮುಖಂಡರ ಮೇಲೆ ಮೊಕದ್ದಮೆಗಳನ್ನು ಹಾಕಲಾಯಿತು. ವಜಾದ ವಿರುದ್ಧ ಸಂಘವು ರಾಜ್ಯ ಉಚ್ಚನ್ಯಾಯಾಲಯದಲ್ಲಿ ಮನವಿ ಸಲ್ಲಿಸಲಾಯಿತು. ಇದರಲ್ಲಿ ಮೇರಿ ದೇವಾಸಿಯಾರವರಿಗೆ ಜಯ ಲಭಿಸಿತು. ಆದರೆ ಸರಕಾರವು ದೇಶದ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿತು. 1981ರಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪು ಮೇರಿ ದೇವಾಸಿಯಾರವರ ಪರವಾಗಿ ಬಂತು. ಆದರೆ ಅಷ್ಟೊತ್ತಿಗಾಗಲೇ ಪಂಚಾಯತ್ ಚುನಾವಣೆಯಲ್ಲಿ ಆಯ್ಕೆಯಾಗಿದ್ದ ಮೇರಿ ದೇವಾಸಿಯಾ ಮತ್ತೆ ಸರಕಾರಿ ಸೇವೆಗೆ ಹಿಂತಿರುಗಲಿಲ್ಲ. ಸೇವೆಯಿಂದ ವಜಾಗೊಂಡ ಅವರು 'I speak' ಎಂಬ ಪತ್ರಿಕೆ ಪ್ರಕಟಿಸಿದರು. ಸರ್ಕಾರ ಅದನ್ನೂ ನಿಷೇಧಿಸಿತು. ಮೇರಿ ದೇವಾಸಿಯವರು ಸಂಘದ ಅಂದಿನ ನಾಯಕರಾಗಿದ್ದ ಬಿ.ಚನ್ನಬಸಪ್ಪ, ನಾಗೇಶ ರಾವ್, ಮೊಹಮ್ಮದ್ ಮುಸ್ತಾಫ ಮುಂತಾದವರ ಮಾರ್ಗದರ್ಶನದಲ್ಲಿ ಸಂಘದ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಇವರ ಹೋರಾಟದ ದಿನಗಳಲ್ಲಿ ಮನಮೋಹನ್, ಪಿ.ಎಸ್.ಶ್ರೀಪತಿ, ಸಿ.ಎಂ.ಪುಟ್ಟಸ್ವಾಮಿ, ಎಂ.ಎಸ್.ವೆಂಕಟರಮಣ, ಎಸ್.ಚನ್ನಬಸವಯ್ಯ, ಆರಾಧ್ಯ, ಲಕ್ಷ್ಮೀನರಸಿಂಹಯ್ಯ ಮುಂತಾದ ನೌಕರ ಮುಖಂಡರು ದೇವಾಸಿಯವರ ಒಡನಾಡಿಗಳಾಗಿದ್ದರು.

ಮೇರಿ ದೇವಾಸಿಯಾರವರು ಓರ್ವ ರಾಷ್ಟ್ರಮಟ್ಟದ ನಾಯಕಿಯಾಗಿದ್ದರು. 1960 ರಲ್ಲಿ ರಾಷ್ಟ್ರಮಟ್ಟದಲ್ಲಿ ಸ್ಥಾಪನೆಯಾದ 'ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟ'ದ ಸಂಸ್ಥಾಪಕ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಆಂಧ್ರಪ್ರದೇಶದ ಶ್ರೀರಾಮುಲು, ಕೇರಳದ ಇ.ಪದ್ಮನಾಭನ್, ಪಶ್ಚಿಮ ಬಂಗಾಳದ ಅರವಿಂದ ಘೋಷ್, ಪಂಜಾಬ್‌ನ ಆರ್.ಎಸ್.ಧಿಲ್ಲಾನ್ ಮುಂತಾದವರು ಒಕ್ಕೂಟದ ಇತರ ಪ್ರಮುಖ ಮುಖಂಡರಾಗಿದ್ದರು.

ಕಿತ್ತೂರು ಚೆನ್ನಮ್ಮ ಎನಿಸಿಕೊಂಡ ನಾಯಕಿ

ಎನ್.ಜಿ.ಒ. ಸಂಘದ ಚಟುವಟಿಕೆಗಳನ್ನು ನೌಕರರ ಮಧ್ಯೆ ಪ್ರಚುರಪಡಿಸಲು ಮೇರಿ ದೇವಾಸಿಯಾರವರ ಸಂಪಾದಕತ್ವದಲ್ಲಿ 'ಮೈಸೂರು ಎನ್.ಜಿ.ಒ' ಪತ್ರಿಕೆಯನ್ನು ಪ್ರಕಟಿಸಲಾಗಿತ್ತು. ಮೇರಿ ದೇವಾಸಿಯಾರವರು ಸ್ವತಃ ಸೈಕಲಿನಲ್ಲಿ ವಿವಿದ ಇಲಾಖೆಗಳ ನೌಕರರಿಗೆ ಪತ್ರಿಕೆ ವಿತರಣೆ ಮಾಡುತ್ತಾ ನೌಕರರ ಮಧ್ಯೆ ನೇರ ಸಂಪರ್ಕಹೊಂದಿದ್ದರು. ಹೋರಾಟದ ದಿನಗಳಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಎಂದೇ ಕರೆಯಲ್ಪಡುತ್ತಿದ್ದ ಮೇರಿ ದೇವಾಸಿಯಾ ನೌಕರರು, ಶಿಕ್ಷಕರು ಮಾತ್ರವಲ್ಲದೆ ರಾಜ್ಯದ ಜನರ ಮಧ್ಯೆ ಮನೆಮಾತಾಗಿದ್ದರು.

ಅವಿವಾಹಿತರಾಗಿದ್ದ ಮೇರಿ ದೇವಾಸಿಯಾರವರು ಸರಳ ಜೀವಿಯಾಗಿದ್ದು **ಕೇವಲ 15 ವರ್ಷಗಳ ತಮ್ಮ ಸೇವಾ ಅವಧಿಯಲ್ಲಿ ನೌಕರರ ಸಂಘಟನೆಗೆ ಮತ್ತು ಚಳುವಳಿಗೆ ಭದ್ರ ಬುನಾದಿಯನ್ನೇ ಹಾಕಿದ್ದರು.** ಮೇರಿ ದೇವಾಸಿಯರವರ ನೇತೃತ್ವದಲ್ಲಿ ನಡೆದ ಹೋರಾಟಗಳ ಫಲವಾಗಿಯೇ ಇಂದು ಕರ್ನಾಟಕದ ರಾಜ್ಯ ಸರಕಾರಿ ನೌಕರರು ಸ್ವಲ್ಪ ಮಟ್ಟಿಗಾದರೂ ಉತ್ತಮವಾದ ವೇತನ ಶ್ರೇಣಿ ಮತ್ತಿತರ ಸೇವಾ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಯಿತು.

ಸೇವೆಯಿಂದ ವಜಾಗೊಂಡ ನಂತರ ಮೇರಿ ದೇವಾಸಿಯಾರವರು ಬೆಂಗಳೂರಿನ ಹೊರವಲಯದ ವೈಟ್‌ಫೀಲ್ಡ್‌ನಲ್ಲಿ ಆಂಗ್ಲೋ ಇಂಡಿಯನ್ ಮಹಿಳೆಯೊಬ್ಬರ ಆಶ್ರಯದಲ್ಲಿ ನೆಲೆಸಿದರು. ಅವಿವಾಹಿತ ತಂಗಿಯೊಬ್ಬರು ಇವರ ಜೊತೆಗಿದ್ದರು. ಅಲ್ಲಿನ ಜನರ ಅನುಕೂಲಕ್ಕಾಗಿ ಒಂದು ಸಹಕಾರ ಸಂಘವನ್ನು ಸ್ಥಾಪಿಸಿ ಪಡಿತರ ವಸ್ತುಗಳನ್ನು ವಿತರಿಸುತ್ತಾ ಜನಸೇವೆ ಮಾಡಿದರು. ತೀವ್ರ ಅಸ್ತಮಾ ಖಾಯಿಲೆಯಿಂದ ಬಳಲುತ್ತಿದ್ದ ಮೇರಿ ದೇವಾಸಿಯಾರವರು ಇವರು ಆರ್ಥಿಕವಾಗಿಯೂ ತುಂಬಾ ತೊಂದರೆಗಳನ್ನು ಅನುಭವಿಸಿದರು. ಇವರು 1993 ಸೆಪ್ಟೆಂಬರ್ 13 ರಂದು ಬೆಂಗಳೂರಿನ ಸಿಂಧಿ ಆಸ್ಪತ್ರೆಯಲ್ಲಿ ತಮ್ಮ 66ನೇ ವಯಸ್ಸಿನಲ್ಲಿ ನಿಧನರಾದರು. ನಿಧನದ ಸುದ್ದಿ ತಿಳಿದ ನೌಕರರು ಹಾಗೂ ಕಾರ್ಮಿಕ ಮುಖಂಡರು ವೈಟ್‌ಫೀಲ್ಡ್‌ಗೆ ತೆರಳಿ ಈ ಹಿರಿಯ ನಾಯಕಿಗೆ ಅಂತಿಮ ನಮನ ಸಲ್ಲಿಸಿದರು.

ಮೇರಿ ದೇವಾಸಿಯಾ ಸ್ಮರಣೆ ದಿನಾಚರಣೆ

ಅಖಿಲ ಕರ್ನಾಟಕ ರಾಜ್ಯ ಸರಕಾರಿ ನೌಕರರ ಒಕ್ಕೂಟದ ಆಶ್ರಯದಲ್ಲಿ ಸೆಪ್ಟೆಂಬರ್ 13ರಂದು ಸಂಜೆ ಬೆಂಗಳೂರಿನ ಒಕ್ಕೂಟದ ಕಛೇರಿಯಲ್ಲಿ ಮೇರಿ ದೇವಾಸಿಯಾರವರ '11ನೇ ವಾರ್ಷಿಕ ಸ್ಮರಣೆ ದಿನ' ವನ್ನು ಆಚರಿಸಲಾಯಿತು.

ಹೋರಾಟದ ದಿನಗಳಲ್ಲಿ ಮೇರಿ ದೇವಾಸಿಯಾರದರ ಒಡನಾಡಿಗಳಾಗಿದ್ದ ಪಿ.ಎಸ್.ಶ್ರೀಪತಿ ಮತ್ತು ಎಸ್.ವೆಂಕಟರಮಣ ಇವರುಗಳು ಮುಖ್ಯ ಅತಿತಿಗಳಾಗಿ ಭಾಗವಹಿಸಿದ್ದು, ದೇವಾಸಿಯಾರವರು ನೌಕರರ ಸಂಘಟನೆಯನ್ನು ಕಟ್ಟಲು ಪಟ್ಟ ಶ್ರಮ ಹಾಗೂ ಹೋರಾಟದ ಸಂದರ್ಭಗಳಲ್ಲಿ ಅನುಭವಿಸಿದ ಕಷ್ಟ ಕಾರ್ಪಣ್ಯಗಳನ್ನು ವಿವರಿಸುತ್ತಾ ಹೋರಾಟದ ಪರಂಪರೆಯನ್ನು ಉಳಿಸಿಕೊಂಡು, ಸಂಘಟನೆಯನ್ನು ಬಲಪಡಿಸಿ ನೌಕರರಿಗೆ ಕರೆ ನೀಡಿದರು. ಜಂಟಿ ಚುನಾವಣಾ ಆಯುಕ್ತರಾದ ಹೆಚ್.ಸಿ. ನಾಗೇಂದ್ರರವರು ಮಾತನಾಡಿ, ವೈಯಕ್ತಿಕ ಸ್ವಾರ್ಥಕ್ಕಾಗಿ ಮತ್ತು ಸ್ವಂತ ಲಾಭಕ್ಕಾಗಿ ಅಪೇಕ್ಷೆ ಪಡುವವರು ಖಂಡಿತವಾಗಿಯೂ ನೌಕರರ ಸಂಘಟನೆಗೆ ಬರಬಾರದು, ಬದಲಾಗಿ ತ್ಯಾಗ ಮನೋಭಾವವುಳ್ಳವರು ಮಾತ್ರ ಸಂಘ ಸಂಸ್ಥೆಗಳಲ್ಲಿ ಇರಬೇಕು ಎಂದು ಕಿವಿಮಾತು ಹೇಳಿದರು. ಒಕ್ಕೂಟದ ಉಪಾಧ್ಯಕ್ಷೆ ರಮಾದೇವಿಯವರು ಮಾತನಾಡಿ, ನೌಕರರ ಸಂಘಟನೆಗಳಲ್ಲಿ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ನೀಡಬೇಕು; ಒಕ್ಕೂಟದಲ್ಲಿ ಮಹಿಳಾ ಉಪಸಮಿತಿಯನ್ನು ರಚಿಸುವುದರ ಮೂಲಕ ಮಹಿಳೆಯರು ಸಂಘಟನೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸಬೇಕು; ಆಗ ಮಾತ್ರ ನೂರಾರು ಮೇರಿ ದೇವಾಸಿಯಾರುಗಳನ್ನು ನಾವು ಗುರುತಿಸಿದಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಒಕ್ಕೂಟದ ರಾಜ್ಯಾಧ್ಯಕ್ಷರಾದ ಯು.ಡಿ.ನರಸಿಂಹಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಬಿ.ಎಸ್‌ಸಚ್ಚಿದಾನಂದ ಮೂರ್ತಿ ಸ್ವಾಗತ ಬಯಸಿದರು. ಹಿರಿಯ ಉಪಾಧ್ಯಕ್ಷರಾದ ಮಹದೇವಯ್ಯ ಮಠಪತಿ ಎಸ್.ರೇಣುಕಾರಾಧ್ಯರು ಕಾರ್ಯಕ್ರಮವನ್ನು ನಿರೂಪಿಸಿದರು. ಸಿಐಟಿಯು ರಾಜ್ಯ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್‌ರವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಖಾವಿ ಅಜೆಂಡಾ ಯಾತ್ರೆಗೆ ಸಿಗದ ಜನಸ್ಪಂದನ

ತಿರಂಗಯಾತ್ರೆ ಎಂದು ಹೊರಟ ಉಮಾಭಾರತಿ ಸಭೆಗಳಲ್ಲಿ ಬ್ರಿಟಿಷರ ವಿರುದ್ಧ ಹಿಂದು-ಮುಸ್ಲಿಂ ಕ್ರೈಸ್ತರಂತಹ ಎಲ್ಲಾ ಧರ್ಮೀಯರು ಒಂದಾಗಿ ಹೋರಾಡಿದ RIN ಬಂಡಾಯದ ವೀರ ಚರಿತ್ರೆಯನ್ನು ಹೇಳಲಿಲ್ಲ. ಬದಲಾಗಿ ಕೇವಲ ಸೋನಿಯಾ, ಕಾಂಗ್ರೆಸ್ ಬಗ್ಗೆ ಎಗ್ಗಿಲ್ಲದೇ ಮಾತನಾಡಿ ತ್ರಿವರ್ಣ ಝಂಡಾದ ನಿಜ ರಾಜಕೀಯ ಅಜೆಂಡಾ ಏನೆಂದು ಹೇಳಿಕೊಂಡರು. ಇಂತಹ ಅ'ಜೆಂಡಾ' ಯಾತ್ರೆಗೆ ಜನಸ್ಪಂದನ ಸಿಗಲೇ ಇಲ್ಲ....



ಸುದ್ದಿ ಮಾಧ್ಯಮಗಳಲ್ಲಿ ಮತ್ತು ಬಿಜೆಪಿ ನಾಯಕರ ಬಾಯಲ್ಲಿ ನಿತ್ಯ 'ಉಮಾಯಣ' ನಿಂತಿದೆ. ಕನ್ನಡದ ಪತ್ರಿಕೆಗಳು ಮತ್ತು ಟಿ.ವಿ. ಚಾನೆಲ್‌ಗಳು ಮಾನ ಮರ್ಯಾದೆ, ನೀತಿ ನಿಯತ್ತು ಬಿಟ್ಟು ಪ್ರಚಾರಿಸಿದರೂ ಉಮಾ ತಿರಂಗ ಯಾತ್ರೆಗೆ ರಾಜ್ಯದ ಜನ ನೀಡಿದ ಕಿಮ್ಮತ್ತಿಲ್ಲದ ಬಲೆಯಿಂದ ಅವರೆಲ್ಲ ಬುದ್ಧಿ ಕಲಿಯುತ್ತಾರಾ ಎಂಬ ಅನುಮಾನ! ಹುಬ್ಬಳ್ಳಿಯಿಂದ ಹೊರಟ ತಿರಂಗ ಯಾತ್ರೆಯ ನಾಟಕ ತಂಡಕ್ಕೆ ಬೀದರ್ ದಾಟುವವರೆಗೂ ಜನಸ್ಪಂದನ ಅಷ್ಟಕಷ್ಟೇ ಎಂಬುದು ಹೆಜ್ಜೆಹೆಜ್ಜೆಗೂ ಬಯಲಾಗುತ್ತಾ ಹೋಯಿತು. ಯಾತ್ರೆ ಉದ್ಘಾಟನೆಗೊಂಡ ಹುಬ್ಬಳ್ಳಿಯಲ್ಲಿ ಜನ ಎರಡು-ಮೂರು ಸಾವಿರವಿದ್ದರು ಎಂದು ಮಾಧ್ಯಮಗಳೇ ಹೇಳಬೇಕಾಯ್ತು. ಅದೂ ನಿಗದಿತ ವೇಳೆಗಿಂತ ಗಂಟೆಗಟ್ಟಲೇ ತಡವಾಗಿ! ಇರಲಿ, ಈ ವಿಳಂಬ ಮಾರ್ಗದುದ್ದಕ್ಕೂ ಇದ್ದು ಅಶಿಸ್ತು ಎದ್ದುಕಂಡಿತು ಎಂಬುದು ಬೇರೆ ಸಂಗತಿ. ಹುಬ್ಬಳ್ಳಿಯಿಂದ ಹೊರಟ ನಂತರವೂ ಎಂ.ಪಿ. ಸ್ಥಾನ ಗೆದ್ದಿರುವ, ಕೋಮು ದ್ವೇಷ ಉಕ್ಕಿಸಿರುವ ವಿಜಾಪುರದಂತಹ ಕಡೆಗಳಲ್ಲಿ ಯೂ ಜನ ಬಹಿರಂಗ ಸಭೆಗೆ ಬಂದದ್ದು ಅಷ್ಟಕಷ್ಟೇ. ಗುಲ್ಬರ್ಗಾದಲ್ಲಿ 10 ತಾಲ್ಲೂಕಿನಿಂದ ಜನರನ್ನು ಕರೆದಿದ್ದರು. ಆದರೂ ಗುಲ್ಬರ್ಗಾ-ಬೀದರ್‌ಗಳಲ್ಲಿಯೂ ಜನ ಸೇರಿದ್ದು ಕಡಿಮೆ. ಈ ಯಾತ್ರೆಯ ಬಹಿರಂಗ ಸಭೆಗೆ ಜನಸಾಗರವೇ ಹರಿಯಲಿದೆಯೆಂಬ ಬಿಜೆಪಿ ಲೆಕ್ಕಾಚಾರ ತಲೆಕೆಳಗಾಗಿದೆ. ಹೋಗಲಿ... ರಾಜಧಾನಿ ಬೆಂಗಳೂರಿನಲ್ಲಿ ವಾರಗಳ ಕಾಲ ಟೆಂಟ್ ಹೊಡೆದು ಉಮಾ ಬಿಡುಗಡೆಗೆ ಬೀದಿ ರಂಪಾಟ ಮಾಡಿದಾಗಲೂ ಜನಸ್ಪಂದನ ಕಡಿಮೆ. ಒಂದೆರೆಡು ದಿನಗಳಲ್ಲಿ ಜನರನ್ನು ಸೇರಿಸಿದ್ದು ಬಿಟ್ಟರೆ, ಉಳಿದಂತೆ ಹೊರರಾಜ್ಯಗಳಿಂದ ಒಂದಿಷ್ಟು ಜನ ಹಾಗೂ ಭಂಗಿ ಬಾಬಾಗಳು ಬಂದಿದ್ದು, ರಾಷ್ಟ್ರ ನಾಯಕರು ಭಾಗವಹಿಸಿದಷ್ಟೇ ಸುದ್ದಿಯ ಸೆಳತಕ್ಕೆ ಸಾಕಾಯಿತು. ವಿಶೇಷವೆಂದರೆ ಈ ತ್ರಿವರ್ಣಧ್ವಜದ ಇತಿಹಾಸದ ಬಗ್ಗೆಯಾಗಲೀ, ರಾಯಲ್ ಇಂಡಿಯನ್ ನೇವಿಯ ಯಂತಹ ಸೈನ್ಯದಲ್ಲಿದ್ದ ಹಿಂದೂ-ಮುಸ್ಲಿಂ ಕ್ರೈಸ್ತ ಸೈನಿಕರು ಒಂದಾಗಿ ಬಂಡಾಯ ಹೂಡಿದ ಬಗ್ಗೆ ಮಾತನಾಡಲಿಲ್ಲ. ಬದಲಾಗಿ ಸೋನಿಯಾಗಾಂಧಿ ಕಾಂಗ್ರೆಸ್ ಮೇಲೆ ಟೀಕಾ ಪ್ರಹಾರ ಮಾತ್ರ ಹರಿಸಲಾಯಿತು.

ಕರ್ನಾಟಕದಲ್ಲಿ ಬಿಜೆಪಿ 79 ಶಾಸಕರನ್ನು ಹೊಂದಿದ್ದರೂ ಜನಸ್ಪಂದನವಿಲ್ಲದೇ ಹೀಗ್ಯಾಕೆ? ಜನರ ನಿತ್ಯದ ಸಮಸ್ಯೆಗಳ ಬಗ್ಗೆ ತಲೆಕೆಡಿಸಿಕೊಳ್ಳದ ಬಿಜೆಪಿಯು ಪ್ರಶ್ನೆಯಲ್ಲದ ಪ್ರಶ್ನೆ ಹಿಡಿದು, ವಿವಾದತಿರುಚಿ, ಭಾವೋದ್ವೇಗದ ಲಾಭ ಗಿಟ್ಟಿಸಲು ಹೊರಟರೆ ಜನ ಒಪ್ಪುವುದಿಲ್ಲ, ಮೂರ್ಖರಾಗ ಬಯಸುವುದಿಲ್ಲ ಎಂಬುದು ಜನರ ಮೌನ ಪ್ರತಿಕ್ರಿಯೆ. ರಾಜ್ಯದಲ್ಲಿ ಶಾಸಕರು, ಸಂಸದರು ಸ್ಥಳೀಯವಾದ ಹಲವು ಕಾರಣಗಳಿಂದ ಬಿಜೆಪಿಯಿಂದ ಗೆದಿದ್ದಾರೆ. ಅಂದ ಮಾತ್ರಕ್ಕೆ ಇಡೀ ಬಿಜೆಪಿ ರಾಜಕಾರಣಕ್ಕೆ ನೀಡಿದ ಅನುಮೋದನೆಯೂ ಅಲ್ಲ... ಕರ್ನಾಟಕ ಜನವಿಡೀ ಕೋಮುವಾದಿಗಳ ಪರವಹಿಸಿಯೂ ಇಲ್ಲ... ಆದ್ದರಿಂದಲೇ 'ಮತೀಯವಾದ' ಹಬ್ಬಿಸಲು ಏನೆಲ್ಲಾ ತಂತ್ರಕ್ಕೆ ಬಿಜೆಪಿ ಇಳಿದಿದೆ. ಆದರೆ ಅದಕ್ಕೆ ಜನರ ಸಹಮತವಿಲ್ಲ ಎಂಬುದು 'ಉಮಾ ಯಾತ್ರೆ' ತೋರಿಸಿದೆ ಮಹಾರಾಷ್ಟ್ರ ಹಾಗೂ ಬೀದರ್ ಲೋಕಸಭೆಯ ಉಪ ಚುನಾವಣೆ ಹಿನ್ನೆಲೆಯಲ್ಲಿ ಇದು ನಡೆದಿದ್ದರೂ ಬಿಜೆಪಿ - ಕೂಟವನ್ನು ತುರಂಗ ವಾಸಕ್ಕೆ ಕಳುಹಿಸಿರುವುದು ನಿಜ. ಕಾಂಗ್ರೆಸ್‌ನ 'ಜಾತ್ಯತೀತ' ಸರ್ಕಾರ ಉಮಾ ಭಾರತಿಯ ಮೊಕದ್ದಮೆ ವಾಪಾಸು ತೆಗೆಯದಿದ್ದರೆ ಜೈಲು ವಾಸವೇ ಗತಿಯಾಗುತ್ತಿತ್ತು. ಇಲ್ಲವೇ ಮುಖಭಂಗ ಅನುಭವಿಸಿ ಜಾಮೀನಿಗೆ ಮೊರೆ ಹೋಗ ಬೇಕಾಗುತ್ತಿತ್ತು. ಕೋಮುವಾದಿಗಳನ್ನು ಮೂಲೆಗುಂಪಾಗಿಸುವುದು ಕಾಂಗ್ರೆಸ್‌ಗೂಬೇಕಿಲ್ಲ. 'ನೀನಸಗಿದ್ದರೆ ನಾನಿನಗೆ' ಎಂಬ ನೀತಿಯಲ್ಲವೇ ಕಾಂಗ್ರೆಸ್ಸದು.

ಈ ವಾರ ಕರ್ನಾಟಕ
ಒಂದು ನೋಟ
— ಎಸ್.ವೈ.ಗುರುಶಾಂತ್

ಮೈತ್ರಿಕೂಟದ ಸರ್ಕಾರ ಮೇಲೆ ವಿಶ್ವಬ್ಯಾಂಕ್ ಪ್ರಹಾರ

ಬೆಂಗಳೂರಿಗೆ ಬಂದ ವಿಶ್ವಬ್ಯಾಂಕ್ ನಿರ್ದೇಶಕ ತಮ್ಮ ಸೂಚನೆಯಂತೆ ಸುಧಾರಣೆಗಳ ಜಾರಿ ಆಗಿಲ್ಲ ಎಂದು ತಕರಾರು ಎತ್ತಿ, ದಬಾಯಿಸಿದ್ದಾರೆ. ಮುಖ್ಯವಾಗಿ ವಿದ್ಯುತ್ ಕ್ಷೇತ್ರದ ಖಾಸಗೀಕರಣದ ಪ್ರಕ್ರಿಯೆ ತೀವ್ರಗೊಳಿಸಿ ಎಂದು ಬಹಿರಂಗ ಮಾತನಾಡಿರುವುದು ಸರ್ಕಾರದ ನೀತಿ ನಿರ್ದೇಶನಗಳಲ್ಲಿ ವಿಶ್ವಬ್ಯಾಂಕಿನ ಐಎಂಎಫ್ ಗಳಂತಹ ವಿದೇಶಿ ಹಣಕಾಸು ಸಂಸ್ಥೆಗಳ ನೇರ ಹಸ್ತಕ್ಷೇಪವನ್ನು ಎತ್ತಿ ತೋರಿಸಿದೆ. ಹಿಂದೆಲ್ಲಾ ಜನರ ಪ್ರತಿಭಟನೆಗೆ ಹೆದರಿದ ಕೃಷ್ಣ ಸರ್ಕಾರ ಇಂತಹ ಕ್ರಮ ತೀವ್ರಗೊಳಿಸಲು ಕೊಂಚ ವಿಳಂಬಿಸಿತು. ಈ ಮೈತ್ರಿಕೂಟದ ಸರ್ಕಾರವೇನು ಮಾಡಲಿದೆ?

ಮೊನ್ನೆ ಸೆಪ್ಟೆಂಬರ್ 14 ರಂದು ವಿಶ್ವಬ್ಯಾಂಕ್ ದೇಶದ ನಿರ್ದೇಶಕ ಮೈಖೇಲ್ ಕಾರ್ಟರ್ ಬೆಂಗಳೂರಿಗೆ ಬಂದಿದ್ದರು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಉಪಮುಖ್ಯಮಂತ್ರಿ ಯವರನ್ನು ಪಕ್ಕದಲ್ಲೇ ಕೂರಿಸಿಕೊಂಡು 'ನಿಮ್ಮ ಹಣಕಾಸಿನ ನಿರ್ವಹಣೆ ಸರಿಯಿಲ್ಲ, ಸುಧಾರಣೆ ವೇಗ ಸಾಲದು, ಸಾಲ ನೀಡುವುದು, ಧನ ಸಹಾಯ ಮಾಡುವುದು ಕಷ್ಟ' ಎಂದೆಲ್ಲಾ ಝಾಡಿಸಿದ್ದರು. ಹೇಗೆ ಸರ್ಕಾರದ ಹಣ-ಖರ್ಚು-ವೆಚ್ಚ ನಿಭಾಯಿಸಬೇಕು ಎಂದು ಪಾಠ ಹೇಳಿದರು. ಅದನ್ನು ಸರ್ಕಾರದ ಮುಖ್ಯಸ್ಥರು ಕೇಳಿಸಿಕೊಂಡರು. ಇನ್ನೂ ಮುಂದುವರೆದು ವಿಶ್ವಬ್ಯಾಂಕ್‌ನ ಕಾರ್ಟರ್ ಕಮ್ಯುನಿಸ್ಟರ ಮೇಲೆ ಕಿಡಿಕಾರಿದರು, ಅಭಿವೃದ್ಧಿಗೆ ಅವರೇ ಅಡ್ಡಿಗಲ್ಲು ಎಂದೆಲ್ಲಾ ಅರಚಾಡಿದರು. ಈ 'ಅಭಿವೃದ್ಧಿ'ಯೆಂಬುದು ವಿಶ್ವಬ್ಯಾಂಕ್‌ನ - ಬಹುರಾಷ್ಟ್ರೀಯ ಕಂಪನಿಗಳ ಅಭಿವೃದ್ಧಿ ಎಂಬುದನ್ನು ಮಾತ್ರ ಮರೆಯಲ್ಲಿಟ್ಟರು.

ಈ ಮಹಾಶಯರು ಬಂದದ್ದು, ಸರ್ಕಾರದ ಹಣಕಾಸು ನಿರ್ವಹಣೆ ಪರಿಶೀಲಿಸಲು, 'ಸುಧಾರಣೆಗಳ' ಜಾರಿ ಹೇಗಿದೆ ಎಂದು ಪರೀಕ್ಷಿಸಲು.... "ಸರ್ಕಾರ ಬಜೆಟ್ ಕೊರತೆ ಕಡಿಮೆಗೊಳಿಸಲು ಉಳಿತಾಯ (!) ಬಜೆಟ್ ಮಂಡಿಸಿ ಯತ್ನಿಸಿದೆ ನಿಜ, ಆದರೆ ಸಾಲದು.. ಇನ್ನೂ ಆಗಬೇಕು. ಅರ್ಥ ನಿರ್ವಹಣೆ ಸರಿಯಾಗಬೇಕು", ಎಂದರು.

ಇತ್ತೀಚೆಗಷ್ಟೇ ಕಳೆದ ವಿಧಾನಸಭೆಯಲ್ಲಿ ಹಣಕಾಸು ಸಚಿವರೂ ಆಗಿರುವ ಸಿದ್ಧರಾಮಯ್ಯ ಸವರು ಬಜೆಟ್‌ನಲ್ಲಿ ಬಡವರ ಬಗ್ಗೆ ಮಾತನಾಡಿದ್ದರೂ, ಆರ್ಥಿಕ ನಿರ್ವಹಣೆಯ ವಾಸ್ತವಕ್ಕೆ ಬಂದಾಗ ಭಿನ್ನವಾಗಿಯೇ ಕಂಡರು. ಬಿಜೆಪಿ ಇಲ್ಲಸಲ್ಲದ ವಿಷಯಗಳಲ್ಲಿ ಬೇಕೆಂದೇ ಗದ್ದಲ ಎಬ್ಬಿಸಿ ಎಗರಾಡುತ್ತಿರುವಾಗಲೇ ಅಧಿವೇಶನದ ಕೊನೆ ದಿನ ಚರ್ಚೆಯೇ ಇಲ್ಲದೆ ಅಂಗೀಕರಿಸಿಕೊಂಡ ಮಧ್ಯಾವಧಿ ಆರ್ಥಿಕ ಯೋಜನೆಯ ಕ್ರಮಗಳು ಇದೇ ವಿಶ್ವಬ್ಯಾಂಕ್‌ನ ಹುಕುಂನಂತೆ ಇದ್ದದ್ದು, ಈಗ ನಿರ್ದೇಶಕ ಬಂದದ್ದು ಕಾಕತಾಳೀಯವಲ್ಲ. ಶಿಕ್ಷಣ, ಸಾರಿಗೆ, ಆರೋಗ್ಯ, ಸಮಾಜ ಕಲ್ಯಾಣ, ವಿದ್ಯುತ್ ರಂಗಕ್ಕೆ ನೀಡಲಾಗುವ ಸಬ್ಸಿಡಿಯಲ್ಲಿ ಶೇ 15 ರಷ್ಟು ಕಡಿತಗೊಳಿಸುವುದು ಹಾಗೂ ಆಡಳಿತ ಕಡಿಮೆಗೊಳಿಸಲು ಶೇ 85 ರಷ್ಟು ಖಾಲಿ ಹುದ್ದೆ ರದ್ದು ಹಾಗೂ ನೇಮಕಾತಿಗೆ ನಿರ್ಬಂಧ ವಿಧಿಸಿದ್ದು ಇದೇ ಹಾದಿಯಲ್ಲಿಯೇ. ಇವುಗಳು ಸಾಲದು ಎಂದೇ ವಿಶ್ವಬ್ಯಾಂಕ್ ನಿರ್ದೇಶಕ ಭಾವಿಸಿದಂತಿದೆ. ಇನ್ನಷ್ಟು ಕಡಿತ ಆಗಲೇಬೇಕು ಎಂಬುದು ಅವರ ದಬಾವಣೆ. ವಿಶೇಷವೆಂದರೆ ಈ ಸಲದ ಒತ್ತು ಇರುವುದು ವಿದ್ಯುತ್ ಕ್ಷೇತ್ರದಲ್ಲಿ ವಿಶ್ವಬ್ಯಾಂಕ್‌ನ ನಿರ್ದೇಶನದಂತೆ 'ಸುಧಾರಣೆ'ಗಳು ಖಾಸಗೀಕರಣ ಪ್ರಕ್ರಿಯೆ ನಡೆದಿಲ್ಲ ಎಂಬುದೇ ಆಗಿದೆ. ಅದನ್ನು ಸ್ಪಷ್ಟ ಸ್ಪಷ್ಟ ಮಾತುಗಳಲ್ಲೇ ಹೇಳಿದ್ದಾರೆ. ವಿದ್ಯುತ್ ದುಬಾರೀಕರಣ ಮಾಡದೇ ಇರುವುದರಿಂದ ಹಾಗೂ ಮೂಲ ಸಂರಚನಾ ಹೊಂದಾಣಿಕೆ ತೀವ್ರ ಜಾರಿಯಾಗದಿರುವುದರಿಂದ ಬ್ಯಾಂಕ್ ನೀಡಬೇಕಾದ ಸಾಲವನ್ನು ನೀಡದೇ ತಡ ಹಿಡಿದಿದೆ ಎಂಬುದು. ಸಬ್ಸಿಡಿ ನಿಲ್ಲಿಸಿ ಎಂಬ ಆಜ್ಞೆ ಬೇರೆ ಅಂದರೆ ಅವರ ತಾಳಕ್ಕೆ ಕುಣಿಯದಿದ್ದರೆ ಹಣ ನೀಡದೇ ಸತಾಯಿಸುವ ಬೆದರಿಕೆ-ಒತ್ತಡ! ಬಜೆಟ್ ಹೇಗಿರಬೇಕೆಂದೂ ಅವರದ್ದೇ ನಿರ್ದೇಶನ. ಅಂದರೆ ಜನತೆಯ ಪ್ರತಿಭಟನೆ-ಸಂಕಷ್ಟಗಳನ್ನು ಲೆಕ್ಕಿಸದೇ ಪ್ರಹಾರ ಎಸಗಲು ಚುನಾಯಿತ ಸರ್ಕಾರಕ್ಕೆ ವಿಶ್ವಬ್ಯಾಂಕಿನ ಧಣಿಗಳ ನಿರ್ದೇಶನ.

ಈಗ ಕಾಂಗ್ರೆಸ್ ಮತ್ತು ಜಾತ್ಯತೀತ ಜನತಾದಳದ ಮೈತ್ರಿ ಸರ್ಕಾರದ ಮುಂದಿರುವ ಆಯ್ಕೆ : ಜನತೆಯ ಜನಾದೇಶ ಲಕ್ಷಿಸಿ, ಬ್ಯಾಂಕ್‌ನ ನಿರ್ದೇಶನಗಳನ್ನು ಜಾರಿಗೊಳಿಸದೇ ಇರುವುದು - ಇಲ್ಲವೇ ಸಾಲ ಪಡೆದು ಹಬ್ಬ ಮಾಡಲು ತನ್ನಜನಗಳ ಮೇಲೆ ಸಂಕಷ್ಟದ ಹೊರೆ ಹೇರಿ, ಪ್ರತಿಭಟಿಸಿದರೆ ದಮನಿಸುವುದು. ಈ ಸರ್ಕಾರ ಏನು ಮಾಡುತ್ತದೆ ನೋಡೋಣ. ಜನವಿರೋಧಿ ಯಾದರೆ ಉಗ್ರ ಪ್ರತಿಭಟನೆಯಂತೂ ಖಚಿತ.

ಗಡಿ ವಿವಾದದ ಸೃಷ್ಟಿ - ಬಳಕೆ

ಮಹಾರಾಷ್ಟ್ರದ ವಿಧಾನಸಭಾ ಚುನಾವಣೆ ಹತ್ತಿರ ಬರುತ್ತಿರುವಂತೆ ಗಡಿ ವಿವಾದ ಹೊಸ ಸ್ವರೂಪ ಪಡೆಯಬಹುದು. ಎರಡೂ ರಾಜ್ಯಗಳಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರವಿದ್ದರೂ ಮಾತುಕತೆಗಿಳಿಯದೇ ಕೋರ್ಟ್ ಮೆಟ್ಟಿಲು ಹತ್ತಿರುವುದರ ಹಿಂದೆ ಸಂಕುಚಿತ ರಾಜಕೀಯ ಉದ್ದೇಶವಿದೆಯೇ?

ಕರ್ನಾಟಕ - ಮಹಾರಾಷ್ಟ್ರದ ಗಡಿ ವಿವಾದವನ್ನು ಮತ್ತೆ ಕೆದಕಲಾಗಿದೆ. ಕರ್ನಾಟಕದ ಬೆಳಗಾಂ, ಕಾರವಾರ, ಗುಲ್ಬರ್ಗಾ, ಬೀದರ್ ಜಿಲ್ಲೆಗಳ ಕೆಲವು ತಾಲ್ಲೂಕು ಗ್ರಾಮಗಳು (ಒಟ್ಟು 814) ತನಗೆ ಸಿಗಬೇಕೆಂದು ಮಹಾರಾಷ್ಟ್ರ ಸರ್ಕಾರ ಸುಪ್ರೀಂಕೋರ್ಟ್‌ಗೆ ಹೋಗಿದೆ. ಕರ್ನಾಟಕ ಸರ್ಕಾರಕ್ಕೆ ಕೋರ್ಟ್ ನೋಟೀಸ್ ನೀಡಿದ್ದು ವಾದ ಹೂಡಲು ಸಜ್ಜಾಗುತ್ತಿದೆ.

ವಿಚಿತ್ರವೆಂದರೆ ಮಹಾರಾಷ್ಟ್ರದಲ್ಲಿಯೂ ಕರ್ನಾಟಕದಲ್ಲಿಯೂ ಕಾಂಗ್ರೆಸ್ ನೇತೃತ್ವದ ಸರ್ಕಾರವೇ ಇದೆ. (ಕೋರ್ಟ್‌ಗೆ ಹಿಂದೆ ಅರ್ಜಿ ಹಾಕುವಾಗಲೂ). ಇಂತಹ ವಿವಾದಗಳನ್ನು ಪರಸ್ಪರ ಕುರಿತು, ಚರ್ಚಿಸಿ, ಬಗೆಹರಿಸಿಕೊಳ್ಳುವುದು ಸರಿಯಾದ ಕ್ರಮ. ಆದರೆ ಇದೆಲ್ಲಾ ಬಿಟ್ಟು ಕೋರ್ಟ್ ಹೋಗುವುದು ಏಂದರೆ? ಗಡಿ ಪ್ರಶ್ನೆಗಳನ್ನು ಬೇಕೆಂದೇ ಉಲ್ಬಣಗೊಳಿಸಿ ಜನರ ನಡುವೆ ಅನಗತ್ಯ ಗೊಂದಲ, ಒಡಕು ಮೂಡಿಸುವುದು ಎಂದೇ ಅರ್ಥ. ಇಂತಹ ವಿಭಜನ ರಾಜಕಾರಣಕ್ಕೆ ಮಹಾರಾಷ್ಟ್ರ ಇಳಿದಿರುವುದು ಸರಿಯಲ್ಲ. ಕರ್ನಾಟಕ ಹಾಗೂ ನೆರೆ ಹೊರೆಯ ರಾಜ್ಯಗಳ ಗಡಿ ಸಮಸ್ಯೆಗಳ ಬಗ್ಗೆ, ಹಲವಾರು ಸಮಿತಿಗಳು ವರದಿಗಳಿವೆ. ಮಹಾರಾಷ್ಟ್ರದ ಗಡಿ ವಿವಾದಕ್ಕೂ ಇದೆ. ಹಿಂದೆ ಗಡಿ ನಿರ್ಧರಿಸುವಾಗ ಹಲವು ಸಮಸ್ಯೆಗಳು ಹಾಗೆ ಉಳಿದಿವೆ. ನಿಜ, ಇದು ಕೇವಲ ಕರ್ನಾಟಕ - ಮಹಾರಾಷ್ಟ್ರಕ್ಕೆ ಸೀಮಿತವಲ್ಲ. ಹಲವಾರು ರಾಜ್ಯಗಳೂ ಇಂತಹ ಸಮಸ್ಯೆ ಎದುರಿಸುತ್ತಿವೆ. ಆದ್ದರಿಂದ ಇಂತಹ ಪ್ರಶ್ನೆಗಳನ್ನು ದೇಶ ಮಟ್ಟದಲ್ಲೇ ಸಮಗ್ರವಾಗಿ ಪರಿಶೀಲಿಸಿ ಇತ್ಯರ್ಥಗೊಳಿಸಬೇಕು. ಅದಕ್ಕೆ ಅಂತಹ ನೀತಿಯೂ ಬೇಕು. ಮುಖ್ಯವಾಗಿ ಗಡಿನಾಡ ಜನರ ಬವಣೆಗಳ ಬಗ್ಗೆ ಚಿಂತಿಸಬೇಕು, ಪರಿಹಾರ ಕ್ರಮ ವಹಿಸಬೇಕು. ಇಂತಹ ವೈಜ್ಞಾನಿಕ ಕ್ರಮಗಳು ಆಳುವ ಸರ್ಕಾರಗಳಿಗೆ ಬೇಕಿಲ್ಲ. ಇಂತಹ ಅನಗತ್ಯ ಗೊಂದಲಗಳಲ್ಲೇ ಜನರನ್ನು ಮುಳುಗಿಸಲು ಬಯಸುತ್ತವೆ. ಮಹಾರಾಷ್ಟ್ರದ ಚುನಾವಣೆಗಳಿರುವುದರಿಂದ ಈ ಪ್ರಶ್ನೆ ಇನ್ನೂ ಗೊಂದಲಗೊಳಿಸಲೂ ಬಳಸಲು ಯತ್ನಿಸಬಹುದು. ಇಂತಹ ತಂತ್ರಗಳಿಗೆ ಜನತೆ ಬಲಿಯಾಗಿ ವಿಭಜಿತರಾಗಬಾರದು. ಆದ್ದರಿಂದ ಎರಡೂ ಕಡೆಗಳಲ್ಲಿ ಉದ್ರೇಕ ಹುಟ್ಟುಹಾಕುವ ಪ್ರಯತ್ನ ನಡೆಸಕೂಡದು.

ಮಾನವೀಯತೆಯ ಬೆಳಕಿನೆಡೆಗೆ ಸಾಗೋಣ

ಮೈಸೂರಿನಲ್ಲಿ ಸಂಘ ಪರಿವಾರದ ಉಮಾಭಾರತಿಯ ತಿರಂಗ ಯಾತ್ರೆಗೆ ವಿರೋಧ

ಕೋಮುವಾದದ ಕತ್ತಲೆಯಿಂದ ಮಾನವೀಯತೆಯ ಬೆಳಕಿನೆಡೆಗೆ ಸಾಗುವ ಆಶಯ 12.09.2004ರಂದು ಮೈಸೂರಿನಲ್ಲಿ ನಡೆದ ಸಂಘ ಪರಿವಾರದ ತಿರಂಗ ಯಾತ್ರೆ ವಿರೋಧಿ ಮೆರವಣಿಗೆಯ ತಿರುಳು.

ಅಂದು ಸಂಜೆ ಆರು ಘಂಟೆಗೆ ಮೈಸೂರು ಅರಮನೆಯ ಉತ್ತರ ದ್ವಾರದ ಬಳಿ ಪ್ರಗತಿಪರ ಸಂಘಟನೆಗಳ ಮುಖ್ಯಸ್ಥರು ಮತ್ತು ನಮ್ಮ ಪಕ್ಷದ ಕಾರ್ಯಕರ್ತರು ಸೇರಿದ್ದರು. ಗಗನ ಕವಿದ ಕಾರ್ಮೋಡ ಅವರ ದೃಢ ನಿಶ್ಚಯಕ್ಕೆ ತಣ್ಣೀರೆರಚಲಾಗಲಿಲ್ಲ. ಅರಮನೆಯ ಬಳಿಯಿಂದ ಸಿಪಿಐ(ಎಂ) ಪಕ್ಷದ ಕಛೇರಿ, ಅಂಬೇಡ್ಕರ್ ಪ್ರತಿಮೆ, ಗಡಿಯಾರ ಗೋಪುರ ಹಾದು ಮೆರವಣಿಗೆ ಗಾಂಧಿ ಚೌಕ ಸೇರಿತು.

ಮೋಂಬತ್ತಿ ಹಿಡಿದು ಉಮಾಭಾರತಿಗೆ ಧಿಕ್ಕಾರ, ಕೋಮುವಾದಿ ಸಂಘ ಪರಿವಾರಕ್ಕೆ ಧಿಕ್ಕಾರ, ತಿರಂಗ ಯಾತ್ರೆಯ ದೇಶ ಒಡೆಯುವ ತಂತ್ರಕ್ಕೆ ಧಿಕ್ಕಾರ; ಮಾನವೀಯತೆ ಜಿಂದಾಬಾದ್ ಮುಂತಾದ ಘೋಷಣೆಗಳನ್ನು ಕೂಗುತ್ತಾ ಗಾಂಧಿ ಪ್ರತಿಮೆಯ ಸುತ್ತ ನೆರೆದವರನ್ನು ನೋಡಲು ಗಾಂಧಿ ಚೌಕದ ಸುತ್ತ ಜನ ಜಂಗುಳಿ.

ನೆರೆದವರನ್ನು ಉದ್ದೇಶಿಸಿ ಮೈಸೂರಿನ ವಿಚಾರವಾದಿ, ಪ್ರೊ. ಕೆ. ರಾಮದಾಸ್, ಸಿಪಿಐ(ಎಂ) ಪಕ್ಷದ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ ಬಸವರಾಜ್, ಖ್ಯಾತ ರಂಗಕರ್ಮಿ ಜನಾರ್ಧನ್ (ಜನ್ನಿ), ಡಿಎಸ್‌ಎಸ್ ರಾಜ್ಯ ಸಂಚಾಲಕ ಹರಿಹರಾನಂದ ಸ್ವಾಮಿ ಮಾತನಾಡಿದರು.

ದೇಶವನ್ನು ಸಮಾಜವನ್ನು ವಿಭಜಿಸಿ, ರಾಷ್ಟ್ರ ಧ್ವಜವನ್ನು ದುರುಪಯೋಗಪಡಿಸಿಕೊಂಡು, ತಮ್ಮ ರಾಜಕೀಯ ಬೇಳೆಯನ್ನು ಬೇಯಿಸಿಕೊಳ್ಳುತ್ತಿರುವ ಸಂಘ ಪರಿವಾರವನ್ನು, ಉಮಾಭಾರತಿಯವರನ್ನು ಎಲ್ಲಾ ಮುಖಂಡರು ಕಟುವಾಗಿ ಟೀಕಿಸಿದರು. ಜಾಗತೀಕರಣ, ಕೋಮುವಾದ ಹೇಗೆ ಒಂದೇ ನಾಣ್ಯದ ಎರಡು ಮುಖಗಳು ಎಂದು ಸಂಗಾತಿ ಬಸವರಾಜ್ ವಿವರಿಸಿದರು.

ಕವಿ ಸಿದ್ದಲಿಂಗಯ್ಯನವರ 'ಯಾರಿಗೆ ಬಂತು ಎಲ್ಲಿಗೆ ಬಂತು 47ರ ಸ್ವಾತಂತ್ರ್ಯ ಗೀತೆಯನ್ನು, 'ಕೋಮುವಾದಿಗಳ ಕೋಣೆಗೆ ಬಂತು ಎಂದು ಕವಿತೆಯನ್ನು ಬದಲಿಸಿ ಜನ್ನಿ ಹಾಡಿದಾಗ ನೆರೆದ ಜನ ದನಿಗೂಡಿಸಿದ್ದು ಹೃದಯ ಸ್ಪರ್ಶಿಯಾಗಿತ್ತು.

ಹೆಚ್ಚುತ್ತಿರುವ ಸಂಘ ಪರಿವಾರದ ಆಟಾಟೋಪಗಳ ವಿರುದ್ಧದ ಇಂತಹ ಕಾರ್ಯಕ್ರಮಗಳು ಇನ್ನೂ ಹೆಚ್ಚು ಸಂಘಟನಾತ್ಮಕವಾಗಿದ್ದರೆ ಹೆಚ್ಚು ಜನರನ್ನು ತಲುಪಬಹುದು ಎಂದು ಅಲ್ಲಿ ನೆರೆದ ಎಲ್ಲ ಗೆಳೆಯರ ಅನಿಸಿಕೆ.



ಕರಾಳ ಕತ್ತಲೆ ಓಡಿಸಲು ಬೆಳಕಿನ ಪುಟ್ಟ ಹಣತೆಗಳು

ಸಮಾಧಾನದ ಸಂಗತಿಯೆಂದರೆ ಈ ಕಾರ್ಯಕ್ರಮದ ಫೋಟೋವರದಿ ಜಿಲ್ಲಾ ಮತ್ತು ರಾಜ್ಯ ದೈನಿಕ ಗಳಲ್ಲಿ ಬಂದು ಜನರ ಗಮನ ಸೆಳೆದದ್ದು.

ಲ. ಜಗನ್ನಾಥ್, ಮೈಸೂರು

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಎಸ್‌ಎಫ್‌ಐ ಬಳ್ಳಾರಿ ಜಿಲ್ಲಾ ಸಮಿತಿಯಿಂದ ಉಚಿತ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಬಳ್ಳಾರಿ ಜಿಲ್ಲಾ ಸಮಿತಿಯಿಂದ ಬಳ್ಳಾರಿ ನಗರದ ಪ್ರತಿಷ್ಠಿತ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಬಳ್ಳಾರಿ ಕ್ಷೇತ್ರ ಶಿಕ್ಷಣ ಅಧಿಕಾರಿಗಳಾದ (ಪೂರ್ವ ವಲಯ) ರವಿಶಂಕರ್ ರೆಡ್ಡಿ ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.



ಈ ಕಾರ್ಯಕ್ರಮದಲ್ಲಿ ಬಾಲಕೀಯರ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಾದ ಜಿ.ಮೋಹನ್‌ರಾವ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ರಾಮಣ್ಣ ರಾಮಂಜಿನೇಯ್ಯ ಹಾಗೂ ಎಸ್‌ಎಫ್‌ಐ ನ ರಾಜ್ಯಸಮಿತಿ ಸದಸ್ಯರಾದ ಕೆ.ಎಂ.ಮಂಜುನಾಥ್ ಭಾಗವಹಿಸಿದ್ದರು.

ಉದ್ಘಾಟನೆ ಭಾಷಣ ಮಾಡಿದ ರವಿಶಂಕರ್ ರೆಡ್ಡಿಯವರು 3 ದಶಕಗಳಿಂದಲೂ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ವಿದ್ಯಾರ್ಥಿ ಸಂಘಟನೆಯು ವಿದ್ಯಾರ್ಥಿಗಳು ಶಾಲಾ-ಕಾಲೇಜ್‌ಗಳ ಮೂಲಭೂತ ಸೌಲಭ್ಯಕ್ಕಾಗಿ ಮನೆ ಪಾಠ ಹಾವಳಿ, ಬಿಸಿಊಟ ಅವ್ಯವಸ್ಥೆ ವಿರುದ್ಧ ಹಾಗೂ ಶ್ರೀಮಂತರ ಮಕ್ಕಳು ಹಣಕೊಟ್ಟು ಖಾಸಗಿ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಬಳ್ಳಾರಿ ನಗರದ ಹಾಗೂ ಗ್ರಾಮೀಣ ಪ್ರದೇಶಗಳಿಂದ ಬಡ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳು ಪಡೆಯಲೆಂದು ಕೈಗೊಂಡಿರುವ ಕಾರ್ಯವನ್ನು ಶ್ಲಾಘಿಸಿದರು.

ಅಧ್ಯಕ್ಷರ ಭಾಷಣ : ಈ ಮೋಹನ್‌ರಾವ್ ಅವರು ಮಾತನಾಡಿ ಕಳೆದ ವರ್ಷ 2002-03 ಶೇ.40 ವಿದ್ಯಾರ್ಥಿಗಳು ಪಾಸಾಗಿದ್ದರು 2003-04 ರಲ್ಲಿ ಶೇ.80 ಪಾಸಾಗಿದ್ದಾರೆ. ಅದೇ ರೀತಿಯಾಗಿ ಈ ವರ್ಷ ಮಾರ್ಚ್‌ನಲ್ಲಿ ನಡೆಯುವ ವಾರ್ಷಿಕ ಪರೀಕ್ಷೆಗಳಲ್ಲಿ 2004-05 ರಲ್ಲಿ ಶೇ.90 ಕ್ಕೂ ಹೆಚ್ಚು ನಮ್ಮ ಶಾಲೆಯಲ್ಲಿ ಅಂಕಗಳು ಪಡೆಯಲೆಂದು ಆಶಿಸುತ್ತ (ಎಸ್‌ಎಫ್‌ಐ)ನ ಉಚಿತ ತರಬೇತಿ ಶಿಬಿರವನ್ನು ವಿದ್ಯಾರ್ಥಿಗಳು ಸದುಪಯೋಗ ಪಡೆಯಬೇಕೆಂದು ಅವರು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಸರ್ಕಾರಿ ಬಾಲಕೀಯರ ಪ್ರೌಢಶಾಲೆಯ 300 ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಪ್ರಸ್ತಾವಿಕ ಭಾಷಣವನ್ನು ಎಸ್.ಎಫ್.ಐ.ನ ರಾಜ್ಯಸಮಿತಿ ಸದಸ್ಯರಾದ ಕೆ.ಎಂ.ಮಂಜುನಾಥ, ಸಾಗತ ಭಾಷಣ ವನ್ನು ಎಸ್‌ಎಫ್‌ಐನ ಮುಖಂಡರಾದ ಮಹಮ್ಮದ್‌ರವರು ಸ್ವಾಗತವನ್ನು ಕೋರಿದರು.

ತಾಲೂಕಿನ ಕಾರ್ಯದರ್ಶಿ ಆಲಂಭಾಷ ನಿರೂಪಣೆ ಮಾಡಿದರು.

ವಂದನಾರ್ಪಣೆ: ಎಸ್‌ಎಫ್‌ಐನ ಜಿಲ್ಲಾ ಮುಖಂಡರಾದ ಕಾಂ.ಮಂಜುಳಪ್ಪರಾಂಪುರ ವಂದನಾರ್ಪಣೆ ಮಾಡಿದರು.

ಈ ಕಾರ್ಯಕ್ರಮದಲ್ಲಿ ಎಸ್‌ಎಫ್‌ಐನ ಮುಖಂಡರುಗಳಾದ ರಾಮುಡು ಅಂಜಿನಯ್ಯ, ಹುಲಿರಾಜ್‌ಕೋಡಾಲ್, ಎಸ್.ಅನಂತಪ್ರಸಾದ್ ಇನ್ನು ಮುಂತಾದವರು ಭಾಗವಹಿಸಿದರು.

ವರದಿ : ಮಂಜುಳಪ್ಪರಾಂಪುರ.ಎಂ

ದೇವದುರ್ಗದಲ್ಲಿ ಅಕ್ಷರ ದಾಸೋಹ ಬಿಸಿಊಟ ಅಡಿಗೆಯವರ ಸಂಘದ ಪ್ರಥಮ ಸಮಾವೇಶ

ದೇವದುರ್ಗ ಎಪಿಎಂಸಿ ಹಾಲ್‌ನಲ್ಲಿ ಆಗಸ್ಟ್ 8 ರಂದು ಭಾನುವಾರ ತಾಲೂಕಿನ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಅಕ್ಷರ ದಾಸೋಹ ಬಿಸಿ ಊಟ ಕೆಲಸ ಮಾಡುವ ಅಡಿಗೆಯವರ ಸಮಾವೇಶ ನಡೆಯಿತು. ಈ ಸಮಾವೇಶವನ್ನು ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಶೇಕ್ಷಾಖಾದ್ರಿ ಉದ್ಘಾಟಿಸಿದರು.

ಅವರು ಮಾತನಾಡುತ್ತಾ ಬಿಸಿಯೂಟ ಕೆಲಸ ಮಾಡುವ ಕೆಲಸಗಾರರಿಗೆ ಸೇವಾ ಭದ್ರತೆ ಇಲ್ಲ. ಈಗ ಕೊಡುವ ಗೌರವ ಧನ ಯಾವುದಕ್ಕೂ ಸಾಲುವುದಿಲ್ಲ. ಬಿಸಿ ಊಟದವರಿಗೆ ಮುಖ್ಯ ಅಡಿಗೆಯವರಿಗೆ, ಅಡಿಗೆ ಸಹಾಯಕ್ಕಿರುವವರಿಗೆ ದಿನನಿತ್ಯ ಎಸ್.ಡಿ.ಎಂ.ಸಿ. ಸದಸ್ಯರ ಹಾಗೂ ಚುನಾಯಿತ ಪ್ರತಿನಿಧಿಗಳ ಬೈಗುಳ ತಪ್ಪಿದ್ದಲ್ಲ.

ಇವೆಲ್ಲ ಎದುರಿಸಲಿಕ್ಕೆ ಕರ್ನಾಟಕದಲ್ಲಿ ಸಿಐಟಿಯು ಅಡಿಯಲ್ಲಿ ಎಲ್ಲರೂ ಸಂಘಟಿತರಾಗಿ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ ಮಾಡಬೇಕು ಎಂದು ಕರೆ ನೀಡಿದರು.

ಮುಖ್ಯ ಅಥಿತಿಗಳಾಗಿ ಆಗಮಿಸಿದ್ದ ಅಂಗನವಾಡಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷೆ ಕೆ.ರಂಗಮ್ಮ ಮಾತನಾಡಿ ರಾಜ್ಯದಲ್ಲಿ ಅಂಗನವಾಡಿ ನೌಕರರು ಸಿಐಟಿಯು ಅಡಿಯಲ್ಲಿ ಸಂಘಟಿತರಾಗಿ ಸುದೀರ್ಘ ಹೋರಾಟ ಮಾಡಿ ಸಂಬಳ ಹೆಚ್ಚಿಸಿಕೊಂಡಿದ್ದೇವೆ. ನಮ್ಮ ಕೆಲಸದಲ್ಲಿ ಭದ್ರತೆ ಸಿಕ್ಕಿದೆ. ಸರ್ಕಾರಗಳು ಬಿಸಿಊಟ ಯೋಜನೆ ಮಕ್ಕಳ ಹಾಜರಾತಿ ಹೆಚ್ಚಿಸಲಿಕ್ಕೆ ಮಾಡಿದೆ. ಆದರೆ ಅಡಿಗೆಯವರ ಕೆಲಸದಲ್ಲಿ ಸೇವಾಭದ್ರತೆ ಇಲ್ಲಾ ಹೆಚ್ಚಿನ ಸಂಬಳ ಇಲ್ಲಾ. ಭದ್ರತೆಗಾಗಿ ಮತ್ತು ರಕ್ಷಣೆಗಾಗಿ ಬಿಸಿ ಊಟದ ಕೆಲಸಗಾರರಿಗೆ ನಮ್ಮ ಬೆಂಬಲ ಇದೆ ಎಂದು ಶುಭಕೋರಿ ಮಾತಾಡಿದರು.

ಸಿಐಟಿಯು ಕಾರ್ಯದರ್ಶಿ ಗಿರಿಯಪ್ಪ ಮಾತನಾಡಿ ತಾಲೂಕದಲ್ಲಿ ಬಿಸಿಊಟದ ನೌಕರರಿಗೆ ಅನೇಕ ಕಡೆ ಈಗಾಗಲೇ ಬುಂಕಲದೊಡ್ಡಿ, ಮುಂಡರಗಿ, ಮರಕಮ್ಮದಿನ್ನಿ ಗ್ರಾಮಗಳಲ್ಲಿ ತೊಂದರೆಯಾಗಿದೆ ಎಂದರು.

ವೇದಿಕೆಯಲ್ಲಿ ಕೃಷಿಕೂಲಿಕಾರ ಸಂಘದ ಮುಖಂಡರ ರಂಗಪ್ಪಲಿಂಗದಳ್ಳಿ ಡಿವೈಎಫ್‌ಐ ಅಲಿಬಾಬ ಪಟೇಲ್, ಬಸವರಾಜ ಬುಡಿ, ಗೌಸು, ಉಷಾ ಉಪಸ್ಥಿತರಿದ್ದರು.

ಈ ಸಮಾವೇಶದಲ್ಲಿ ಬಿಸಿಊಟದ ಕೆಲಸಗಾರರಾದ ಲಕ್ಷ್ಮೀ ಹೊನ್ನಕಾಟಮಳ್ಳಿ. ಮರಿಯಮ್ಮ ಲಕ್ಷ್ಮೀದೇವಿ ಕೊಣಚಪ್ಪಳಿ, ಶ್ರೀಲೇಖ, ಬೆಳ್ಳಿಯಮ್ಮ ಗೌರಮ್ಮ ರಾಚಮ್ಮ ಶಶಿಕಲಾ ಗಬ್ಬೂರ ಸಹಕಾರ್ಯದರ್ಶಿಯಾಗಿ ಮರಿಯಮ್ಮ ಶ್ರೀಲೇಕ, ಲಕ್ಷ್ಮೀದೇವಿ ಹಾಗೂ 21 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲಾಯಿತು. ಸಮಾವೇಶದಲ್ಲಿ 420 ಜನ ಬಿಸಿ ಊಟದ ಕೆಲಸಗಾರರು ಭಾಗವಹಿಸಿದ್ದರು. ಗೌರವ ಅಧ್ಯಕ್ಷರಾಗಿ ಗಿರಿಯಪ್ಪ ಪೂಜಾರಿ ಆಯ್ಕೆಯಾದರು.



ವಿಮಾ ರಂಗದಲ್ಲಿ ವಿದೇಶೀ ನೇರ ಬಂಡವಾಳ ಹೂಡಿಕೆ ಮಿತಿಯನ್ನು ಶೇ.26 ರಿಂದ 49ಕ್ಕೆ ಹೆಚ್ಚಿಸುವ ವಿಮಾ ಕಂತಿನ ಮೇಲೆ ಸೇವಾ ತೆರಿಗೆಯನ್ನು ವಿಧಿಸುವ ಕೇಂದ್ರ ಸರ್ಕಾರದ ಪ್ರಸ್ತಾಪವನ್ನು ಸಂಸತ್ತಿನಲ್ಲಿ ವಿರೋಧಿಸಬೇಕೆಂದು ಆಗ್ರಹಿಸಿ ಮೈಸೂರಿನ ವಿಮಾ ನೌಕರರ ಸಂಘಟನೆಯ ನಾಯಕರು ಸಂಸದ ವಿಜಯಶಂಕರ್‌ರವರಿಗೆ ಮನವಿ ಸಲ್ಲಿಸಿದರು. ಚಿತ್ತದಲ್ಲಿ, ವಿಜಯಕುಮಾರ್, ನಾಗೇಶ್ ಕುಮಾರ್ ಮುಂತಾದವರಿದ್ದಾರೆ.

ದೇವದುರ್ಗದಲ್ಲಿ ಬಿಸಿಊಟ ಅಡಿಗೆಯವರ ಪ್ರತಿಭಟನೆ

ದೇವದುರ್ಗ ತಾಲೂಕ ಬಿಸಿಊಟ ಯೋಜನೆ ಅಡಿಯಲ್ಲಿ ಕೆಲಸ ಮಾಡುವ ನೌಕರರ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ದೇವದುರ್ಗದಲ್ಲಿ ಆಗಸ್ಟ್ 16 ರಂದು ಸೋಮವಾರ ಪ್ರತಿಭಟನೆ ನಡೆಯಿತು. ಈ ಪ್ರತಿಭಟನೆಯಲ್ಲಿ 400 ಜನ ಅಡಿಗೆಯವರು ಭಾಗವಹಿಸಿದ್ದರು.

ಈಗ ನಿಂತಿರುವ ಸಂಬಳ ಹಾಗೂ ಸಾದಿಲ್ವಾರ ಹಣಕೊಡಬೇಕು.

- ಪ್ರತಿ ತಿಂಗಳು ಸಂಬಳ ಮತ್ತು ಸಾದಿಲ್ವಾರ (ಕಾಂಟಿಜನ್ಸ್) ಹಣಕೊಡಬೇಕು.
- ಬಿಸಿ ಊಟದ ಕೋಣೆಗಳಿಲ್ಲ ಶಾಲೆಗೆ ಕೋಣೆ ಒದಗಿಸಬೇಕು.
- ಸೋರುತ್ತಿರುವ ಕೋಣೆಗಳನ್ನು ರಿಪೇರಿ ಮಡಬೆಕು.
- ಬಿಸಿಊಟ ಮಾಡುವ ಕೆಲಸಗಾರರಿಗೆ ನೀರಿನ ಸೌಲಭ್ಯ ಒದಗಿಸಬೇಕು.
- ಮುಂಡರಗಿ, ಮರಕಮ್ಮದಿನ್ನಿ, ಬುಂಕಲದೊಡ್ಡಿ ಬಿಸಿಊಟದ ಕೆಲಸಗಾರರಿಗೆ ರಕ್ಷಣೆ ಕೊಡಬೇಕು. ಅವರನ್ನು ಮುಂದುವರೆಸಬೇಕು.
- ತಾಲೂಕದಲ್ಲಿ ಆಹಾರ ಸರಬರಾಜು ಸರಿಯಾಗಿ ಆಗಬೇಕು. ಮತ್ತು ಉತ್ತಮ ಆಹಾರ ಸರಬರಾಜು ಆಗಬೇಕು.

ತಹಸಿಲ್ದಾರರು ಮನವಿ ಪತ್ರ ಸ್ವೀಕರಿಸಿ 1 ವಾರದಲ್ಲಿ ಸಂಬಳ/ ಸಾದಿಲ್ವರ ಹಣ ಕೊಡುತ್ತೇನೆ ಮತ್ತು ಸಮಸ್ಯೆ ಬಂದಿರುವ ಹಳ್ಳಿಗಳಿಗೆ ಹೋಗಿ ತಾನೇ ಖುದ್ದಾಗಿ ಬಗೆಹರಿಸುತ್ತೇವೆ ಎಂದು ಹೇಳಿದರು.

ಈ ಹೋರಾಟಕ್ಕೆ ಬೆಂಬಲ ಸೂಚಿಸಿ ಅಂಗನವಾಡಿ ಸಂಘಟನೆ ಮುಖಂಡರಾದ ಕೆ.ರಂಗಮ್ಮ ಡಿವೈಎಫ್‌ಐ ಮುಖಂಡ ಸಿ.ಎಸ್.ನಾಡಗೌಡ, ಹಾಗೂ ಜಾಡಲದಿನ್ನಿ ಗ್ರಾಮ ಪಂಚಾಯತ್ ಸದಸ್ಯರಾದ ಬಸವಂತರಾಯ ಪಾಟೀಲ್ ಮತ್ತು ಸಮಸ್ಯೆ ಕುರಿತು ಬಿಸಿ ಊಟದ ಸಂಘಟನೆ ಗೌರವ ಅಧ್ಯಕ್ಷ ಗಿರಿಯಪ್ಪ ಮಾತನಾಡಿದರು. ಹೋರಾಟದ ನೇತೃತ್ವವನ್ನು ಅಧ್ಯಕ್ಷೆ ಗೌರಮ್ಮ ಕಾರ್ಯದರ್ಶಿ ಪದ್ಮಾವತಿ ಮಚ್ಚಮ್ಮ ಬಿಳ್ಳಿಯಮ್ಮ ಲಕ್ಷ್ಮಿ ಹಾಗೂ ಲಕ್ಷ್ಮೀದೇವಿ ಕೊಣಚಪ್ಪಳಿ ವಹಿಸಿದ್ದರು.


ವರದಿ : (ಗಿರಿಯಪ್ಪ ಪೂಜಾರಿ ಜಾಲಹಳ್ಳಿ)

ಮಹಾರಾಷ್ಟ್ರ ವಿಧಾನಸಭೆಯ ಚುನಾವಣೆಯ ಫಲಿತಾಂಶ ಆಧರಿಸಿ ಮತ್ತೇ ಕೇಂದ್ರದಲ್ಲಿ ಈ ಅಧಿಕಾರಕ್ಕೆ ಮರಳುವ ಲೆಕ್ಕಾಚಾರ ಬಿಜೆಪಿ ಕೂಟದ್ದು. ಅದಕ್ಕೆಂದು ಹೂಡಿರುವ ತಂತ್ರಗಳೇನು? ಜಾತ್ಯತೀತ ಶಕ್ತಿಗಳ ಚುನಾವಣಾ ತಂತ್ರ ಏನಿರಬೇಕು? ಮುಂಬರುವ ಮಹಾರಾಷ್ಟ್ರ ಚುನಾವಣೆಯಲ್ಲಿ ವಿವಿಧ ಪಕ್ಷಗಳ ಕಾರ್ಯತಂತ್ರದತ್ತ ಒಂದು ಪ್ರಾಥಮಿಕ ನೋಟವಿಲ್ಲಿದೆ.

ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗಳು

ಕೋಮುವಾದಿ ಕೂಟ ಸೋಲಿಸುವ ಕಾರ್ಯತಂತ್ರದ ಅಗತ್ಯತೆ

ಬಿಜೆಪಿ ಮತ್ತು ಶಿವಸೇನೆ ಮಹಾರಾಷ್ಟ್ರದಲ್ಲಿ ವಿಧಾನಸಭೆ ಚುನಾವಣೆ ದಿನಾಂಕಗಳನ್ನು ಮುಂದೂಡುವಂತೆ ಕೇಳಿಕೊಂಡಿದ್ದರೂ ಚುನಾವಣಾ ಆಯೋಗ ಅಕ್ಟೋಬರ್ 13 ರಂದೇ ಚುನಾವಣೆ ನಡೆಸುವುದಾಗಿ ಪುನರುಚ್ಚರಿಸಿದೆ. ಬಿಜೆಪಿ / ಆರ್‌ಎಸ್‌ಎಸ್ ಈ ಚುನಾವಣೆಗಳನ್ನು ಕೇಂದ್ರದಲ್ಲಿ ಸದ್ಯದಲ್ಲಿಯೇ ಮತ್ತೆ ಅಧಿಕಾರಕ್ಕೆ ಮರಳುವ ಒಂದು ಸಾಧನವಾಗಿ ಪರಿಗಣಿಸಿದ್ದಾರೆ. ಆದ್ದರಿಂದ ಹೇಗಾದರೂ ಮಾಡಿ, ಅಪಮಾರ್ಗ ಗಳಿಂದಲಾದರೂ ಸರಿ, ಅಲ್ಲ, ಹೆಚ್ಚಾಗಿ ಅಪಮಾರ್ಗಗಳಿಂದಲೇ ಈ ಚುನಾವಣೆಗಳನ್ನು ಗೆಲ್ಲಲು ಅವರು ಸರ್ವಪ್ರಯತ್ನ ನಡೆಸಿದ್ದಾರೆ. ಈ ಗುರಿ ಸಾಧನೆಗೆ ಅವರು ವಿವಿಧ ಕಾರ್ಯತಂತ್ರಗಳನ್ನು ಅಂಗೀಕರಿಸಿದ್ದಾರೆ.



ಮೊದಲನೆಯದಾಗಿ, ಚುನಾವಣೆಗಳಿಗೆ ಪೂರ್ವಭಾವಿಯಾಗಿ ಕೋಮು ಭಾವೋದ್ವೇಗಗಳನ್ನು ಎಬ್ಬಿಸಿ, ಗಂಭೀರ ಪರಿಸ್ಥಿತಿಯನ್ನು ನಿರ್ಮಿಸುವುದಕ್ಕಾಗಿಯೇ ಅವರು ಹಲವು ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತಿದ್ದಾರೆ. ವಿಹೆಚ್‌ಪಿ ಸತಾರಾದಲ್ಲಿ ಅಫ್ಜಲ್ ಖಾನ್ ಗೋರಿಯನ್ನು ಧ್ವಂಸಮಾಡುವ ಪ್ರಚಾರ ನಡೆಸಿತು, ಯಶಸ್ವಿಯಾಗಲಿಲ್ಲ. ಉಮಾ ಭಾರತಿಯವರ 'ತಿರಂಗಾ ಯಾತ್ರಾ'ಕ್ಕೆ ಬಂದ ಸ್ಪಂದನವೇನೂ ಸಿಗದಿದ್ದರೂ ಮಹಾರಾಷ್ಟ್ರದಲ್ಲಿ ಬೊಬ್ಬಿಡುತ್ತಾ ಸಾಗಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು ಗಾಂಧೀಜಿ ಹತ್ಯೆಯಲ್ಲಿ ಸಾವರ್ಕರ್ ಪಾತ್ರದ ಬಗ್ಗೆ, ಚಾರಿತ್ರಿಕ ಸಂಗತಿಗಳನ್ನು ವಿಕೃತಗೊಳಿಸಿಯೂ ಕೋಮು ಭಾವೋದ್ವೇಗಗಳನ್ನು ಬಡಿದೆಬ್ಬಿಸಲಾಗುತ್ತಿದೆ. ತಮ್ಮ ರಾಜಕೀಯ ಅಸ್ತಿತ್ವ ಸಂಪೂರ್ಣವಾಗಿಯಲ್ಲದಿದ್ದರೂ, ಬಹಳಷ್ಟು ಮಟ್ಟಿಗೆ ಕೋಮು ಧ್ರುವೀಕರಣವನ್ನು ಅವಲಂಬಿಸಿದೆ ಎಂಬ ತಮ್ಮ ತಿಳುವಳಿಕೆಯನ್ನು ಈ ಕೋಮುವಾದಿ ಕೂಟ ಕಾರ್ಯರೂಪಕ್ಕೆ ತರುತ್ತಿದೆ ಎಂಬುದು ಸ್ಪಷ್ಟ.

ಆದರೆ ಇಂತಹ ಪ್ರಯತ್ನಗಳಿಂದ ಮಹಾರಾಷ್ಟ್ರದ ಮತದಾರರು ಪ್ರಭಾವಿತರಾದಂತೆ ಕಾಣುತ್ತಿಲ್ಲ. ಗುಜರಾತಿನಲ್ಲಿ ಕಂಡಂತೆ ಕೋಮು ಧ್ರುವೀಕರಣ, ಅದರಿಂದಾಗಿರುವ ಗಂಭೀರ ಪರಿಸ್ಥಿತಿ ಕೋಟ್ಯಾಂತರ ಜನರ ಬದುಕಿಗೆ ಮಾರಕ ಎಂಬುದು ಮತದಾರರ ಮನಗಳಲ್ಲಿ ಅಚ್ಚೊತ್ತಿದೆ. ಬಹುಪಾಲು ಜನಗಳ ಬದುಕನ್ನು ತಟ್ಟುವ ಆರ್ಥಿಕ ನೀತಿಯ ಎಲ್ಲಾ ಪ್ರಧಾನ ಪ್ರಶ್ನೆಗಳಲ್ಲಿ ಬಿಜೆಪಿ ಅಧಿಕಾರದಲ್ಲಿ ಇರುವಾಗಲೂ, ಅಧಿಕಾರದಿಂದ ಹೊರಗೆ ಇರುವಾಗಲೂ, ಸದಾ ಜನ-ವಿರೋಧಿ ನೀತಿಗಳನ್ನೇ ಪ್ರತಿಪಾದಿಸುವ ಪಕ್ಷ, ಇದರಿಂದಾಗಿ ತನ್ನ ನೀತಿಗಳ ಮೇಲೆ ಜನಬೆಂಬಲ ಗಳಿಸುವುದು ಸಾಧ್ಯವಿಲ್ಲ ಎಂದರಿತ ಬಿಜೆಪಿ-ಶಿವಸೇನಾ ಕೂಟ ಹತಾಶೆಯಿಂದ ಕೋಮು ಗಲಭೆಗಳನ್ನು ಬಡಿದೆಬ್ಬಿಸಲು ಪ್ರಯತ್ನಿಸುತ್ತಿದೆ. ಕೇವಲ ಈ ಕಾರಣಕ್ಕಾಗಿ ಯಾದರೂ ಅವರನ್ನು ನಿರ್ಣಾಯಕವಾಗಿ ಸೋಲಿಸಬೇಕಾಗಿದೆ. ದೇಶದ ಐಕ್ಯತೆಗಾಗಿ, ಅದರ ಜಾತ್ಯತೀತ ಪ್ರಜಾಸತ್ತಾತ್ಮಕ ಅಡಿಗಲ್ಲನ್ನು ರಕ್ಷಿಸಲಿಕ್ಕಾಗಿ, ಅದೇ ರೀತಿ ಮಹಾರಾಷ್ಟ್ರದ ಮತ್ತು ಅಲ್ಲಿಯ ಜನಗಳ ಕಲ್ಯಾಣಕ್ಕಾಗಿ ಇದು ಅಗತ್ಯ.

ಜಾತ್ಯತೀತ ಮತಗಳ ವಿಭಜನೆಗೆ ತಂತ್ರ

ಇಂತಹ ಒಂದು ಫಲಿತಾಂಶ ಬರಬಹುದೆಂಬ ಭೀತಿಯಿಂದ ಈ **ಕೋಮುವಾದಿ ಕೂಟ ಇನ್ನೊಂದು ಕಾರ್ಯತಂತ್ರವನ್ನು ಪ್ರಯತ್ನಿಸುತ್ತಿದೆ. ಅದೆಂದರೆ ಜಾತ್ಯತೀತ ಮತಗಳ ವಿಭಜನೆ.** ಈ ರೀತಿಯ ಒಂದು ವಿಭಜನೆಯನ್ನು ಕಲ್ಪಿಸಿದರೆ ಬಹುಮತ ಸಿಗದೆಯೂ ಸರ್ಕಾರ ರಚಿಸಬಹುದೆಂಬುದು ಅದರ ನಿರೀಕ್ಷೆ. ಈಗಾಗಲೇ ಎನ್‌ಡಿಎಯ ಫರ್ನಾಂಡೀಸ್ ಮತ್ತು ಕಂ. ಇದರಲ್ಲಿ ಅದರ ಜೊತೆಗಿದ್ದಾರೆ. ಎನ್‌ಡಿಎ ಯ ಇತರ ಪಕ್ಷಗಳು ಮಾತ್ರವಲ್ಲ, ಬಿಎಸ್‌ಪಿ, ಸಮಾಜವಾದಿ ಪಕ್ಷ, ರಾಮ ವಿಲಾಸ್ ಪಾಸ್ವಾನ್‌ರ ಲೋಕ ಜನಶಕ್ತಿ ಪಕ್ಷ ಇವೂ ಬಹಳಷ್ಟು ಸೀಟುಗಳಲ್ಲಿ ಸ್ಪರ್ಧಿಸುವುದಾಗಿ ಹೇಳಿವೆ. ಜಾತ್ಯತೀತ ಮತಗಳ ಇಂತಹ ವಿಭಜನೆಯಿಂದ ಲಾಭ ಪಡೆಯುವ ನಿರೀಕ್ಷೆ ಈ ಕೋಮುವಾದಿ ಕೂಟದ್ದು.

ಈ ಕಾರ್ಯತಂತ್ರ ಎಷ್ಟರ ಮಟ್ಟಿಗೆ ಸಫಲವಾಗಬಲ್ಲದು ಎಂಬುದು ಕಾಂಗ್ರೆಸ್ ಮತ್ತು ಎನ್‌ಸಿಪಿ ಇದನ್ನು ವಿಫಲಗೊಳಿಸಲು ಪ್ರಯತ್ನಿಸುತ್ತವೆ ಎಂಬುದನ್ನು ಅವಲಂಬಿಸಿದೆ. ಆ ರಾಜ್ಯದಲ್ಲಿ ಸರ್ಕಾರ ನಡೆಸುವ ಮೈತ್ರಿಕೂಟವಾಗಿ ಈ ಪಕ್ಷಗಳು ಜಾತ್ಯತೀತ ಮತಗಳ ವಿಭಜನೆಯನ್ನು ಕನಿಷ್ಟ ಮಟ್ಟಕ್ಕಿಳಿಸಲು ಸೂಕ್ತ ಕಾರ್ಯತಂತ್ರಗಳನ್ನು ಅನುಸರಿಸಬೇಕು. ಆದರೆ ಅವರ ನಡುವಿನೋ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳಲು ಅವರಿಗೆ ಬಹಳ ಸಮಯ ತಗಲುತ್ತಿದೆ. ಇದು ದುರದೃಷ್ಟಕರ.

ಜಾತ್ಯತೀತ ಒಗ್ಗಟ್ಟು ಅಗತ್ಯ

ಇಂತಹ ಸನ್ನಿವೇಶದಲ್ಲಿ ಈ ಚುನಾವಣೆಗಳಲ್ಲಿ ಕೋಮುವಾದಿ ಕೂಟವನ್ನು ಸೋಲಿಸಲು, ಕೇಂದ್ರದಲ್ಲಿ ಮತ್ತೆ ಅಧಿಕಾರಕ್ಕೆ ಮರಳುವ ಆರ್‌ಎಸ್‌ಎಸ್/ ಬಿಜೆಪಿ ನಿರೀಕ್ಷೆಗಳನ್ನೆಲ್ಲಾ ನಿರ್ಮೂಲ ಮಾಡಲು ಸಿಪಿಐ(ಎಂ) ಜಾತ್ಯತೀತ ಮತಗಳ ವಿಭಜನೆಯನ್ನು ಕನಿಷ್ಟ ಮಟ್ಟಕ್ಕಿಳಿಸುವ ಪ್ರಯತ್ನದಲ್ಲಿದೆ. ಸಿಪಿಐ(ಎಂ) ತಾನು ಸ್ಪರ್ಧಿಸುವ 18 ಕ್ಷೇತ್ರಗಳ ಪಟ್ಟಿಯನ್ನು ಬಿಡುಗಡೆ ಮಾಡಿ ಈ ಅಭ್ಯರ್ಥಿಗಳನ್ನು ಬೆಂಬಲಿಸುವಂತೆ ಎಲ್ಲಾ ಜಾತ್ಯತೀತ ಪಕ್ಷಗಳನ್ನು ವಿನಂತಿಸಿಕೊಂಡಿದೆ. ಇತರ ಎಲ್ಲಾ ಕ್ಷೇತ್ರಗಳಲ್ಲಿ ಶಿವಸೇನಾ - ಬಿಜೆಪಿ ಕೂಟವನ್ನು ಸೋಲಿಸಬಲ್ಲ ಗರಿಷ್ಟ ಅವಕಾಶವಿರುವ ಜಾತ್ಯತೀತ ಅಭ್ಯರ್ಥಿಗಳಿಗೆ ಬೆಂಬಲ ನೀಡುವುದಾಗಿ ಸಿಪಿಐ(ಎಂ) ಹೇಳಿದೆ.

ಅಂತಿಮವಾಗಿ, ಮಹಾರಾಷ್ಟ್ರದ ಜನತೆ ಹೇಗೆ ಮತದಾನ ಮಾಡಬೇಕೆಂಬ ಕಳೆದ ಐದು ವರ್ಷಗಳ ಆಡಳಿತದ ಅನುಭವದ ಆಧಾರದಲ್ಲಿ ಮಾತ್ರವಲ್ಲ, ತಮ್ಮ ಬದುಕನ್ನು ರಕ್ಷಿಸಲು ಮತ್ತು ಉತ್ತಮಗೊಳಿಸಲು ಈ ಪಕ್ಷಗಳು ಏನೇನು ಭರವಸೆ ಕೊಡುತ್ತವೆ ಎಂಬ ಆಧಾರದಲ್ಲಿ ನಿರ್ಧರಿಸುತ್ತಾರೆ. ಇದು ಒಂದು ಅಳತೆಗೋಲಾಗುವುದಾದರೆ, **ಮಹಾರಾಷ್ಟ್ರದ ಜನತೆ ಈ ಚುನಾವಣೆಗಳಲ್ಲಿ ಕೋಮುವಾದಿ ಶಕ್ತಿಗಳು ಮರಳದಂತೆ ಪಡೆಯಲು ಎದ್ದು ನಿಲ್ಲಬೇಕು.** ಮಹಾರಾಷ್ಟ್ರ ರಾಜ್ಯ ವಿಧಾನಸಭಾ ಚುನಾವಣೆಗಳನ್ನು ಆರ್‌ಎಸ್‌ಎಸ್/ ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಮರಳಲು ಈಗಿರುವ ಸರ್ಕಾರವನ್ನು ಬುಡಮೇಲು ಮಾಡುವ ಸಾಧನವಾಗಿ ಬಳಸಲು ಬಿಡಬಾರದು. ○

ಯೋಜನಾ ಆಯೋಗದಲ್ಲಿ ವಿದೇಶಿ ಏಜೆನ್ಸಿಗಳಿಗೆ ಜಾಗ ಕೊಡದು

ಯೋಜನಾ ಆಯೋಗದ ಉಪಾಧ್ಯಕ್ಷರಿಗೆ ಅರ್ಥಶಾಸ್ತ್ರಜ್ಞರ ಪತ್ರ


ಯೋಜನಾ ಆಯೋಗದಲ್ಲಿ ವಿಶ್ವಬ್ಯಾಂಕ್, ಏಶಿಯನ್ ಅಭಿವೃದ್ಧಿ ಬ್ಯಾಂಕ್, ಮತ್ತು ಅಮೇರಿಕಾ ಸಲಹಾ ಸಂಸ್ಥೆಯನ್ನು ಸೇರಿಸಿಕೊಳ್ಳುವುದರ ವಿರುದ್ಧ ವ್ಯಾಪಕ ಟೀಕೆ ಬಂದಿವೆ. ಸಿಪಿಐ(ಎಂ) ಹಾಗೂ ಎಡಪಕ್ಷಗಳು ಇದನ್ನು ಗಂಭೀರವಾಗಿ ಪ್ರತಿಭಟಿಸಿವೆ. ಈಗ ದೇಶದ ಖ್ಯಾತ ಆರ್ಥಿಕ ತಜ್ಞರು ವಿರೋಧ ವ್ಯಕ್ತಪಡಿಸಿದ್ದಾರೆ.. ಅವರ ಅಭಿಪ್ರಾಯಗಳಿಲ್ಲಿವೆ.

ಯೋಜನಾ ಆಯೋಗದಲ್ಲಿ ವಿಶ್ವಬ್ಯಾಂಕ್, ಏಶ್ಯಾ ಅಭಿವೃದ್ಧಿ ಬ್ಯಾಂಕ್ ಮತ್ತು ಅಮೆರಿಕನ್ ಸಲಹಾ ಕಂಪನಿ ಮೆಕಿನ್ಸೆಯ ಪ್ರತಿನಿಧಿಗಳನ್ನು ಸೇರಿಸಿಕೊಳ್ಳುವ ನಿರ್ಧಾರದ ಬಗ್ಗೆ ಹಲವು ಅರ್ಥಶಾಸ್ತ್ರಜ್ಞರು ಆಳವಾದ ಆತಂಕ ವ್ಯಕ್ತಪಡಿಸಿದ್ದಾರೆ. ಕೇಂದ್ರ ಸರ್ಕಾರ ಇತ್ತೀಚಿಗೆ ನೇಮಿಸಿದ ವಿವಿಧ ಕಾರ್ಯಪಡೆಗಳು ಮತ್ತು ಸಲಹಾ ಸಮಿತಿಗಳ ಸದಸ್ಯರಾಗಿರುವ ಅರ್ಥಶಾಸ್ತ್ರಜ್ಞರಾದ ಪ್ರಭಾತ್ ಪಟ್ನಾಯಕ್, ಜಯತಿ ಘೋಷ್, ಸಿ.ಪಿ.ಚಂದ್ರಶೇಖರ್ ಮತ್ತು ಟಿ.ಎಂ. ಥಾಮಸ್ ಐಸಾಕ್ ಈ ಕುರಿತು ಯೋಜನಾ ಆಯೋಗದ ಉಪಾಧ್ಯಕ್ಷರಾದ ಅಹ್ಲುವಾಲಿಯಾರವರಿಗೆ ಅವರು ಪತ್ರ ಬರೆದಿದ್ದಾರೆ.

ಅಷ್ಟೇ ಅಲ್ಲ, ಶ್ರೀಯುತ ಅಹ್ಲುವಾಲಿಯರವರು ಈ ಕುರಿತು ಎರಡು ಪ್ರತ್ಯೇಕ ಸಂದರ್ಭಗಳಲ್ಲಿ ನೀಡಿರುವ ಸಮರ್ಥನೆಗಳು ಈ ಕಳವಳವನ್ನು ಇನ್ನಷ್ಟು ಹೆಚ್ಚಿವೆ ಎಂದೂ ಅವರು ಹೇಳಿದ್ದಾರೆ. ಅಹ್ಲುವಾಲಿಯಾ ಕೊಟ್ಟ ಮೊದಲ ಸಮರ್ಥನೆಯೆಂದರೆ ವಿಶ್ವಬ್ಯಾಂಕ್ ಭಾರತಕ್ಕೆ ದೊಡ್ಡ ಸಾಲಗಳನ್ನು ನೀಡಿದೆಯೆಂಬುದು. ಅಂದರೆ ಕೃತಜ್ಞತಾಪೂರ್ವಕವಾಗಿ ಅದರ ಪ್ರತಿನಿಧಿಗಳಿಗೆ ಸ್ಥಾನ ನೀಡಬೇಕು. ಇದರ ಸೂಚ್ಯಾರ್ಥವೆಂದರೆ ಸಾಲ ನೀಡಿದವನು ಸಾಲ ಪಡೆದವನ ಹಿತಾಸಕ್ತಿಗಳ ಬಗ್ಗೆ ಶಾಂತಚಿತ್ತದಿಂದ ತೀರ್ಪು ನೀಡುತ್ತಾನೆ ಎಂಬ ಅಭಿಪ್ರಾಯವನ್ನು ಒಪ್ಪಲಾಗಿದೆ ಎಂದು. ಭಾರತದ ಗ್ರಾಮೀಣ ಪ್ರದೇಶಗಳಲ್ಲಿನ ಲೇವಾದೇವಿಗಾರ - ರೈತನ ಸಂಬಂಧಗಳನ್ನು ಕಂಡವರಿಗೆ ಈ ಅಭಿಪ್ರಾಯ ಎಷ್ಟು ಅಸಮರ್ಥನೀಯ ಎಂಬುದು ಗೊತ್ತಿದೆ ಎಂದು ಈ ಅರ್ಥಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಇನ್ನು ಗಾಂಧೀಜಿ 'ಬಾಗಿಲು, ಕಿಟಕಿಗಳನ್ನು ತೆರೆದಿಡಲು' ಹೇಳಿದ ಪ್ರಸಿದ್ಧ ಉಕ್ತಿಯ ಬಗ್ಗೆ ಹೇಳುತ್ತಾ, ಇದು ಠಕ್ಕುತನ ಎಂದೂ ಈ ಅರ್ಥಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾ ಈ ಆಧಾರದಲ್ಲಿ ವಿದೇಶಿ ಸರ್ಕಾರಿ ಅಧಿಕಾರಿಗಳನ್ನು ಯೋಜನಾ ಆಯೋಗ ತನ್ನ ಸಲಹಾ ಸಮಿತಿಗಳಲ್ಲಿ ಸೇರಿಸಿಕೊಳ್ಳುವುದನ್ನು ಸಮರ್ಥಿಸಿಕೊಳ್ಳಲು ಸಾಧ್ಯವೇ ಎಂದು ಅವರು ಪ್ರಶ್ನಿಸಿದ್ದಾರೆ.

ಸರ್ಕಾರ ರಚಿಸಿದ ವಿವಿಧ ಕಾರ್ಯಪಡೆಗಳು, ಸಲಹಾ ಸಮಿತಿಗಳ ಮುಂದಿರುವ ಪ್ರಶ್ನೆಗಳ ಬಗ್ಗೆ ವಿಶ್ವಬ್ಯಾಂಕ್, ಏಶ್ಯಾ ಅಭಿವೃದ್ಧಿ ಬ್ಯಾಂಕ್ ಇತ್ಯಾದಿಗಳ ದೃಷ್ಟಿಕೋನ ಎಲ್ಲರಿಗೂ ತಿಳಿದಿದೆ. ಯೋಜನಾ ಆಯೋಗಕ್ಕೆ ಇಂತಹ ಅಭಿಪ್ರಾಯಗಳನ್ನು ಮತ್ತು ಇತರ ಅಭಿಪ್ರಾಯಗಳನ್ನೂ ಇನ್ನಷ್ಟು ಕೇಳಬೇಕೆಂದಿದ್ದರೆ ಯಾವಾಗ ಬೇಕಾದರೂ ಆಂತರಿಕ, ಅನೌಪಚಾರಿಕ ವಿಚಾರ ಸಂಕಿರಣಗಳನ್ನು ನಡೆಸಬಹುದು. ಆದರೆ ತಮ್ಮದೇ ಸ್ವಂತ ಅಜೆಂಡಾಗಳಿರುವ ಈ ಸಂಸ್ಥೆಗಳ ಪ್ರತಿನಿಧಿಗಳನ್ನು ಯೋಜನಾ ಆಯೋಗದ ಅಧಿಕೃತ ಸಂಸ್ಥೆಗಳಲ್ಲಿ ಸೇರಿಸುವುದು ಬೇರೆಯೇ ವಿಷಯ ಎಂದು ಈ ಅರ್ಥಶಾಸ್ತ್ರಜ್ಞರು ಟಿಪ್ಪಣಿ ಮಾಡಿದ್ದಾರೆ. ಈ ಕಾರ್ಯಪಡೆಗಳು ಬಹಳ ಮುಖ್ಯದ್ದೇನೂ ಆಗಿರಲ್ಲಿಕ್ಕಿಲ್ಲ. ಆದರೆ ಒಂದು ಕೆಟ್ಟ ಸಂಪ್ರದಾಯವನ್ನು ಸೃಷ್ಟಿಸಿದಂತಾಗುತ್ತದೆ. ಇದು ಬೌದ್ಧಿಕ ಅಡಿಯಾಳುತನವನ್ನು ತೋರಿಸುತ್ತದೆಯಷ್ಟೇ ಅಲ್ಲ, ಭವಿಷ್ಯದ ಮಟ್ಟಿಗೆ ಒಳ್ಳೆಯ ಸಂಕೇತವೇನೂ ಅಲ್ಲ ಎಂದು ಅವರು ಆತಂಕ ವ್ಯಕ್ತಪಡಿಸುತ್ತಾ ಜವಹಾರ ಲಾಲ್ ನೆಹರೂ, ಪಿ.ಸಿ.ಮಹಾಲನೋಬಿಸ್ ಮತ್ತು ಡಿ.ಆರ್. ಗಾಡ್ಗಿಲ್‌ರಂತಹವರು ಪಾಲಿಸಿ ಪೋಷಿಸಿದ ಯೋಜನಾ ಆಯೋಗವನ್ನು ತಮ್ಮದೇ ಉದ್ದೇಶಗಳಿರುವ ವಿದೇಶೀ ಸಂಸ್ಥೆಗಳು ಮತ್ತು ಸಲಹಾ ಕಂಪನಿಗಳ ಅಭಿಪ್ರಾಯಗಳ ಅಭಿವ್ಯಕ್ತಿಗೆ ವೇದಿಕೆಗಳ ಮಟ್ಟಕ್ಕೆ ಇಳಿಸಬಾರದು ಎಂದು ಶ್ರೀ ಅಹ್ಲುವಾಲಿಯಾರನ್ನು ಆಗ್ರಹ ಪಡಿಸಿದ್ದಾರೆ.

ಹೊನ್ನಾವರದಲ್ಲಿ ರಾಜ್ಯಮಟ್ಟದ ಭೂಸಮಾವೇಶ



ಪರಿಸರ ಸಂರಕ್ಷಣೆಯ ಹೆಸರಿನಲ್ಲಿ ಅರಣ್ಯದಲ್ಲಿ ಹುಟ್ಟಿ, ಅರಣ್ಯದಲ್ಲೇ ನೆಲೆಸಿರುವ ಆದಿವಾಸಿಗಳನ್ನು ಹೊರಗಟ್ಟುವ ಪ್ರಯತ್ನ ಒಂದು ಕಡೆಯಾದರೆ ಕಳೆದ ಕೆಲವು ದಶಕಗಳಿಂದ ಕೃಷಿ ಯೋಗ್ಯ ಅರಣ್ಯ ಭೂಮಿಯಲ್ಲಿ ಅಥವಾ ಕಂದಾಯ ಭೂಮಿಯಲ್ಲಿ ನೆಲೆಸಿರುವ ಹಾಗೂ ಬೇಸಾಯ ಮಾಡಿಕೊಂಡು ಜೀವನಕ್ಕೊಂದು ದಾರಿ ಕಂಡುಕೊಂಡಿರುವ ಕೋಟ್ಯಾಂತರ ಬಡ ಕುಟುಂಬಗಳು ಒಕ್ಕಲೆಬ್ಬಿಸಲ್ಪಡುವ ಭೀತಿಗೆ ಒಳಗಾಗಿವೆ. ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯೊಂದರಲ್ಲೇ ಇಂತಹ ಒಂದು ಲಕ್ಷ ಕುಟುಂಬಗಳಿವೆ. ಇತರ ಜಿಲ್ಲೆಗಳಲ್ಲಿಯೂ ಈ ಸಮಸ್ಯೆ ಗಂಭೀರವಾಗಿದ್ದು ಕೇಂದ್ರ ಸರ್ಕಾರವು 1980 ರ ಅರಣ್ಯ ಸಂರಕ್ಷಣಾ ಕಾಯ್ದೆಗೆ ಅಗತ್ಯ ತಿದ್ದುಪಡಿಗಳನ್ನು ತರುವ ಮೂಲಕ ಮಾತ್ರ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ. ಈ ಕುರಿತು ಚರ್ಚಿಸಲು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಜರುಗಿದ ರಾಜ್ಯಮಟ್ಟದ ಸಮಾವೇಶದ ವರದಿಯನ್ನು 'ಐಕ್ಯರಂಗ' ಓದುಗರಿಗಾಗಿ ಇಲ್ಲಿ ನೀಡಲಾಗಿದೆ.

ಅರಣ್ಯ ಭೂಮಿ ಸಾಗ ಒಕ್ಕಲೆಬ್ಬಿಸುವ ಕ್ರಮ

ಹಲವಾರು ವರ್ಷಗಳಿಂದ ಅರಣ್ಯ ಭೂಮಿಯಲ್ಲಿ ನೆಲೆಸಿರುವ ಅಥವಾ ಸಾಗುವಳಿ ಮಾಡಿಕೊಂಡು ಬಂದಿರುವ ಬಡವರನ್ನು ಒಕ್ಕಲೆಬ್ಬಿಸುವ ಕ್ರಮ ಅನಾಗರಿಕವಾದುದು ಎಂದು ಸಿಪಿಐ(ಎಂ) ನ ಸಂಸತ್ ಸದಸ್ಯರೂ, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಎ.ವಿಜಯರಾಘವನ್ ಹೇಳಿದ್ದಾರೆ. ಅವರು ಹೊನ್ನಾವರದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಹಾಗೂ ಉತ್ತರಕನ್ನಡ ಜಿಲ್ಲಾ ಅರಣ್ಯ ಅತಿಕ್ರಮಣದಾರರ ಹೋರಾಟ ಸಮಿತಿಯ ಸಂಯುಕ್ತ ಆಶ್ರಯದಲ್ಲಿ ಹಳಿಯಾಳ ಭೂಹೋರಾಟದ 25ನೇ ವರ್ಷದ ನೆನಪಿನಲ್ಲಿ ಏರ್ಪಡಿಸಲಾಗಿದ್ದ ರಾಜ್ಯಮಟ್ಟದ ಭೂ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.



ಅರಣ್ಯ ಭೂಮಿ ಅತಿಕ್ರಮಣದ ಸಮಸ್ಯೆ ಕರ್ನಾಟಕ ರಾಜ್ಯದಂತೆ ಓರಿಸ್ಸಾ, ಆಂದ್ರಪ್ರದೇಶ, ತಮಿಳುನಾಡು, ಕೇರಳ ಮೊದಲಾದ ರಾಜ್ಯಗಳಲ್ಲೂ ಇದೆ. ಲಕ್ಷಾಂತರ ಬುಡಕಟ್ಟು ಜನ ಅವಲಂಭಿಸಿ ಬದುಕುತ್ತಿರುವ ಅರಣ್ಯಭಾಮಿಯಿಂದ ಒಕ್ಕಲೆಬ್ಬಿಸಲ್ಪಟ್ಟು ಬೀದಿಪಾಲಾಗುವ ಆತಂಕದಲ್ಲಿದ್ದಾರೆ. ಸರ್ಕಾರಿ ಬಂಜರು ಭೂಮಿಯನ್ನು ಹಾಗೂ ಅರಣ್ಯಭೂಮಿಯನ್ನು ಕೃಷಿಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಲು ಬಡಜನರು ತುಂಬಾ ಕಷ್ಟಪಟ್ಟಿರುತ್ತಾರೆ. ಇಂತಹ ತುಂಡು ಭೂಮಿಯನ್ನೇ ನಂಬಿ ಬದುಕು ಸಾಗಿಸುತ್ತಿದ್ದಾರೆ.

ಕೇಂದ್ರ ಸರ್ಕಾರ ಇಂತಹ ಸಮಸ್ಯೆಯ ಬಗಗೆ ಮುಕ್ತ ಮನಸ್ಸಿನಿಂದ ಕಾನೂನನ್ನು ರೂಪಿಸಲು ಪ್ರಯತ್ನಿಸಬೇಕು. ಅತಿಕ್ರಮಣದಾರರ ವಾಸ್ತವ ಪರಿಸ್ಥಿತಿಯನ್ನು ಸರ್ವೋಚ್ಚ ನ್ಯಾಯಾಲಯದ ಗಮನಕ್ಕೆ ತರಬೇಕು ಎಂದು ಅವರು ಆಗ್ರಹಿಸಿದರು.

ದೇಶದಲ್ಲಿ ಇಂದು ರೈತರು ಗಂಭೀರ ಬಿಕ್ಕಟ್ಟನ್ನು ಎದುರಿಸುತ್ತಿದ್ದಾರೆ. ಬೆಲೆ ಕುಸಿತ ಮತ್ತು ಸಾಂಸ್ಥಿಕ ಸಾಲದ ಕೊರತೆಯ ಕಾರಣದಿಂದ ಅವರು ಖಾಸಗಿ ಲೇವಾದೇವಿಗಾರರ ಮುಂದೆ ಕೈಯೊಡ್ಡುತ್ತಾರೆ. ದುಬಾರಿ ಬಡ್ಡಿಯ ಸಾಲವನ್ನು ತೀರಿಸಲಾಗದೆ, ಬದುಕು ಸಾಗಿಸಲು ಕಷ್ಟವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಪಂಜಾಬ, ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ರಾಜ್ಯಗಳಲ್ಲಿ ರೈತರು ಅಧಿಕ ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ತನಕ ಕೇಂದ್ರದಲ್ಲಿ ಆಳ್ವಿಕೆ ನಡೆಸಿದ ಸರ್ಕಾರಗಳು ರೈತರ ಬಗ್ಗೆ ಕಾಳಜಿವಹಿಸದೆ ಬಂಡವಾಳಗಾರರ ಮತ್ತು ಕಾರ್ಪೋರೇಟ್ ಕಂಪನಿಗಳ ಹಿತಾಸಕ್ತಿ ಕಾಯುವಲ್ಲಿ ನಿರತವಾಗಿರುವುದು ಈ ದುರಂತಕ್ಕೆ ಕಾರಣ ಎಂದು ಅವರು ಹೇಳಿದರು.

ಪರ್ಯಾಯ ಭೂಮಿತಿ ಮಸೂದೆ

ಹೊನ್ನಾವರದಲ್ಲಿ ನಡೆದ ರಾಜ್ಯಮಟ್ಟದ ಭೂಸಮಾವೇಶದಲ್ಲಿ ಅರಣ್ಯ ಭೂಮಿ ಸಾಗುವಳಿದಾರರ ಪ್ರಶ್ನೆಯು ಒಳಗೊಂಡಿರುವ ಇತರ ಆಯಾಮಗಳ ಕುರಿತಾಗಿಯೂ ಪ್ರಸ್ತಾಪವಾಯಿತು. ಬೂಮಿಯ ಪ್ರಶ್ನೆ ಇತ್ಯರ್ಥವಾಗದೆ ಕರ್ನಾಟಕವೂ ಸೇರಿದಂತೆ ನಮ್ಮದೇಶದ ನೈಜ ಅಬಿವೃದ್ಧಿ ಸಾಧ್ಯವಿಲ್ಲ ಎಮಬ ಅಭಿಪ್ರಾಯವು ಸಮಾವೇಶದಲ್ಲಿ ಹಲವು ಬಾರಿ ಪ್ರತಿದ್ವನಿಸಿತು.

1974ರಲ್ಲಿ ಕೆಲವು ತಿದ್ದುಪಡಿಗಳೊಂದಿಗೆ ಜಾರಿಗೆ ಬಂದ ಕರ್ನಾಟಕ ಭೂಸುಧಾರಣಾ ಕಾನೂನು ಭಾರೀ ಕ್ರಾಂತಿಕಾರಿ ಕ್ರಮವಾಗಿದೆ ಎಂದು ಬಹಳಷ್ಟು ಜನ ಇನ್ನೂ ಭಾವಿಸಿದ್ದಾರೆ. ಸ್ವಾತಂತ್ರ್ಯ ನಂತರ ದೇಶದಲ್ಲಿ ಬಂಡವಾಳಗಾರ ಮತ್ತು ಭೂಮಾಲಕ ವರ್ಗಗಳ ಪ್ರಬುತ್ವ ಅಸ್ತಿತ್ವಕ್ಕೆ ಬಂದ ನಿನ್ನೆಲೆಯಲ್ಲಿ ಕೆಂದ್ರದಲ್ಲಿ ಮತ್ತುಬ ಹುತೇಕ ರಾಜ್ಯಗಳಲ್ಲಿ ಅದಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷದ ಸರ್ಕಾರಗಳು ಭೂಮಾಲಕ ಪದ್ದತಿಯನ್ನು ರದ್ದು ಮಾಡಲು ಆಸಕ್ತಿವಹಿಸಲಿಲ್ಲ. ಉಳುವವನೇ ಭೂಮಿಯು ಒಡೆಯನಾಗಬೇಕು ಎಂಬ ಸ್ವಾತಂತ್ರ್ಯ ಹೋರಾಟದೊಂದಿಗೆ ಮೂಡಿಬಂದ ಬೇಡಿಕೆಗಾಗಿ ಜನಾಂದೋಲನ ಮುಂದುವರೆದಾಗ ಕಾಂಗ್ರೆಸ್ ಪಕ್ಷದ ಸರ್ಕಾರಗಳು ಭೂಮಾಲಕ ಪದ್ಧತಿಯನ್ನು ರದ್ದು ಮಾಡಲು ಆಸಕ್ತಿವಹಿಸಲಿಲ್ಲ. ಉಳುವವನೇ ಭೂಮಿಯ ಒಡೆಯನಾಗಬೇಕು ಎಂಬ ಸ್ವಾತಂತ್ರ್ಯ ಹೋರಾಟದೊಂದಿಗೆ ಮೂಡಿ ಬಂದ ಬೇಡಿಕೆಗಾಗಿ ಜನಾಂದೋಲನ ಮುಂದುವರೆದಾಗ ಕಾಮಗ್ರೆಸ್ ಸರ್ಕಾರಗಳು ಜನತೆಯ ಕಣ್ಣಿಗೆ ಮಣ್ಣೆರೆಚುವ ಭೂ ಸುಧಾರಣಾ ಕಾಯ್ದೆಗಳನ್ನು ಮಾತ್ರ ಜಾರಿಗೆ ತಂದವು. ಇಂತಹ ಶಾಸನಗಳಲ್ಲಿ ಅಡಗಿದ್ದ ಪಾರುಗಂಡಿ (loopholes)ಗಳಿಂದಾಗಿ ದೊಡ್ಡ ದೊಡ್ಡ ಭೂಮಾಲಿಕರಿಗೆ ಅಪಾರ ಪರಿಹಾರ ಧನ ಪಡೆಯಲು ಸಾಧ್ಯವಾಯಿತು ಮಾತ್ರವಲ್ಲ ದೊಡ್ಡ ಪ್ರಮಾಣದಲ್ಲಿ ಭೂಮಿಯನ್ನು ತಮ್ಮ ಕೈಯಲ್ಲಿ ಉಳಿಸಿಕೊಳ್ಳಲು ಅವಕಾಶ ದೊರೆಯುವಂತಾಯಿತು. ಸ್ವಯಂ ಸಾಗುವಳಿಯ ಹೆಸರಿನಲ್ಲಿ ಭೂಮಿಯನ್ನು ಗೇಣಿದಾರರಿಂದ ಪುನರ್ವಶ ಮಾಡಿಕೊಳ್ಳುವ ಹಕ್ಕನ್ನು ಪಡೆದ ಭೂಮಾಲಿಕರು ಕೋಟ್ಯಾಂತರ ಗೇಣಿದಾರರನ್ನು ನಿರ್ದಾಕ್ಷಿಣ್ಯವಾಗಿ ಒಕ್ಕಲೆಬ್ಬಿಸಿದರು. ಇದರಿಂದಾಗಿ ಹೆಚ್ಚುವರಿ ಭೂಮಿಯನ್ನು ವಶಪಡಿಸುವುದೂ ಸಾಧ್ಯವಾಗಲಿಲ್ಲ; ಅದನ್ನು ಭೂಹೀನ ಬಡವರಿಗೆ ಹಂಚುವುದೂ ಆಗಲಿಲ್ಲ. ಕರ್ನಾಟಕದಲ್ಲಿ ಜಾರಿಗೆ ಬಂದ ಭೂಸುಧಾರಣಾ ಕಾನೂನು ಮತ್ತು ಅದರ ಅನುಷ್ಠಾನ ಇದಕ್ಕಿಂತ ಭಿನ್ನವಾಗಿರಲಿಲ್ಲ. ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರ ರಾಜ್ಯಗಳಲ್ಲಿ ಸಿಪಿಐ(ಎಂ) ನೇತೃತ್ವದಲ ಎಡರಂಗ ಸರ್ಕಾರಗಳು ಮಾತ್ರ ಅತ್ಯಂತ ಪ್ರಗತಿಪರವಾದ ಬೂಸುಧಾರಣಾ ಕಾನೂನುಗಳನ್ನು ರೂಪಿಸಿ ಅವುಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಜಾರಿಗೆ ತಂದಿವೆ.

ಕರ್ನಾಟಕದಲ್ಲಿ, ಭೂ ಮಿತಿ ಕಾಯ್ದೆಯ ಸುಳಿವು ಪಡೆದ ಭುಮಾಲಿಕರು ಲಕ್ಷಾಂತರ ಗೇಣಿದಾರರನ್ನು ಒಕ್ಕಲೆಬ್ಬಿಸಲು ತಡಮಾಡಲಿಲಲ್ಲ. ಭೂಮಾಲಕರ ಹಿತ ಕಾಯುವ ಉದ್ದೇಶದಿಂದಲೇ, 1957ರಲ್ಲಿ ಸರ್ಕಾರಕ್ಕೆ ಶಿಫಾರಸುಮಾಡಲು ರಚನೆಯಾದ ಭೂಸುಧಾರಣಾ ಸಮಿತಿಯ ಅಧ್ಯಕ್ಷತೆಯನ್ನು ಜತ್ ಸಂಸ್ಥಾನದ ಪ್ರತಿನಿಧಿಯಾಗಿದ್ದ ಬಿ.ಡಿ.ಜತ್ತಿಯವರಿಗೆ ನೀಡಲಾಯಿತು. 1958ರಲ್ಲಿ ಜತ್ತಿಯವರೇ ಮುಖ್ಯಮಂತ್ರಿಗಳಾದರೂ, ಸಮಿತಿಯು ವರದಿಯನ್ನು ಒಪ್ಪಿಸಿದ್ದರೂ ಶಾಸನ ಜಾರಿಗೆ ಬರಲಿಲ್ಲ. ಅಂದಿನ ಕಂದಾಯ ಮಂತ್ರಿಗಳಾದ ಕಡಿದಾಳ ಮಂಜಪ್ಪನವರು, 'ಕಾಂಗ್ರೆಸಿಗರೇ ಭೂಸುಧಾರಣೆಗೆ ಅಡ್ಡಿಯಾಗಿದ್ದಾರೆ; ತಮಗೆ ಭೂಮಾಲಕರು ಪ್ರಾಣಭೀತಿ ಉಂಟುಮಾಡುವ ಪತ್ರಗಳನ್ನು ಬರೆಯುತ್ತಿದ್ದಾರೆ' ಎಂದು ಸ್ವತಃ ಹೇಳಿಕೊಂಡಿದ್ದರು. ಜನತೆಯ ತೀವ್ರ ಹೋರಾಟ, ಒತ್ತಡದ ಹಿನ್ನೆಲೆಯಲ್ಲಿ 1967ರಲ್ಲಿ ತಿದ್ದುಪಡಿಯಾದ ಭೂಸುಧಾರಣಾ ಕಾನೂನು ಬಂದರೂ ಅದು ಭೂಮಾಲಿಕರಿಗೇ ಅನುಕೂಲವಾಗಿತ್ತು. 1974ರಲ್ಲಿ ದೇವರಾಜ ಅರಸರು ಮುಖ್ಯಮಂತ್ರಿಯಾಗಿದ್ದಾಗ ಕರ್ನಾಟಕ ಭೂಮಿತಿ ಕಾಯ್ದೆಗೆ ಮತ್ತೆ ತಿದ್ದುಪಡಿ ಮಾಡಿ ಭೂಮಿತಿಯನ್ನು 54 ಎಕರೆಗೆ ಇಳಿಸಲಾಯಿತು. ಇದೊಂದು ಅತ್ಯಂತ ಕ್ರಾಂತಿಕಾರಿ ಹೆಜ್ಜೆ ಎಂದು ಪರಿಗಣಿಸಲಾಗುತ್ತಿದ್ದರೂ ವಾಸ್ತವದಲ್ಲಿ ಇಂದಿಗೂ ಒಂದೊಂದು ಭೂಮಾಲಕ ಕುಟುಂಬ ಸಾವಿರಾರು ಎಕರೆ ಭೂಮಿಯನ್ನು ತಮ್ಮ ವಶದಲ್ಲಿ ಇಟ್ಟುಕೊಂಡಿರುವುದನ್ನು ಕಾಣಬಹುದು. ಕುಟುಂಬದ ಒಬ್ಬೊಬ್ಬ ಸದಸ್ಯನ ಹೆಸರಿನಲ್ಲಿಯೂ ಭೂಮಿಯನ್ನು ಖಾತೆ ಮಾಡುವ ಮೂಲಕ ಭೂಮಿತಿ ಕಾಯದೆಯ ಕಣ್ಣಿಗೆ ಮಣ್ಣೆರಚಲು ಸಾಧ್ಯವಾಗಿದೆ. ಇಂದು ರಾಜ್ಯದ ಹಲವು ಜಿಲ್ಲೆಗಳಲ್ಲಿ ವ್ಯಾಪಕವಾಗಿ ಕಂಡುಬರುತ್ತಿರುವ ಗೇಣಿ ಪದ್ಧತಿ ಹಾಗೂ ಲೀಸ್ ಪದ್ಧತಿಗಳು ರಾಜ್ಯದಲ್ಲಿ ಭೂಮಾಲಕ ಪದ್ಧತಿ ಇನ್ನು ಜೀವಂತ ಇರುವುದರ ಜೀವಂತ ಸಾಕಿಯಾಗಿದೆ. ಬಹಳಷ್ಟು ಹೆಚ್ಚುವರಿ ಜಮೀನು ಭೂಮಾಲಕರ ವಶದಲ್ಲಿ ಉಳಿದಿರುವುದು ಕಂಡುಬರುತ್ತಿದೆ.

ಆದ್ದರಿಂದ ಕರ್ನಾಟಕದಲ್ಲಿ ಭೂಸುಧಾರಣೆಗಳ ಜಾರಿಯ ಕುರಿತು ವಿವರವಾದ ವಸ್ತುನಿಷ್ಠವಾದ ಅಧ್ಯಯನ ಅಗತ್ಯವಿದೆ ಎಂಬ ಅಭಿಪ್ರಾಯ ಹೊನ್ನಾವರ ಸಮಾವೇಶದಲ್ಲಿ ವ್ಯಕ್ತವಾಯಿತು. ಜಾರಿಯಲ್ಲಿದ್ದ ಭೂಮಿತಿ ಕಾಯ್ದೆಗೆ 1995ರಲ್ಲಿ ಮತ್ತೆ ಪ್ರತಿಗಾಮಿ ತಿದ್ದುಪಡಿ ಮಾಡುವ ಮೂಲಕ ಭೂಸುಧಾರಣೆಗಳ ಮೂಲ ಉದ್ದೇಶಕ್ಕೆ ಚ್ಯುತಿ ತರಲಾಗಿದೆ. ಕೃಷಿಯೇತರ ಉದ್ದೇಶಗಳಿಗೆ ಕೃಷಿ ಭೂಮಿಯ ಬಳಕೆಗೆ ಆಸ್ಪದ ದೊರಕಿದ್ದು ಬೆಂಗಳೂರು ಅಂತಹ ನಗರಗಳ ಸುತ್ತಲಿನ ಬಡರೈತರು ಭೂಮಿ ಕಳೆದುಕೊಂಡು ಬೀದಿ ಪಾಲಾಗುತ್ತಿದ್ದಾರೆ. ಕೈಗಾರಿಕೋದ್ಯಮಿಗಳು ತಮ್ಮ ಕಪ್ಪು ಹಣವನ್ನು ಬಿಳಿಮಾಡಿಕೊಳ್ಳಲು ಬಾರೀ ಪ್ರಮಾಣದಲ್ಲಿ ಭೂಮಿಯನ್ನು ಖರೀದಿ ಮಾಡಿಕೊಂಡು ಕೃಷಿ ಮಾಡಲಾರಂಭಿಸಿದ್ದಾರೆ. ಇಂತಹ ಎಲ್ಲ ಬೆಳವಣಿಗೆಗಳನ್ನು ಅಧ್ಯಯನ ಮಾಡಿ ಗೇಣಿದಾರರ ಹಕ್ಕಗಳಿಗೆ ರಕ್ಷಣೆ ನೀಡುವ ಒಂದು ಪರ್ಯಾಯ ಭೂಮಿತಿ ಮಸೂದೆಯನ್ನು ಸಿದ್ಧಪಡಿಸಿ ರಾಜ್ಯ ವಿದಾನಸಭೆಯಲ್ಲಿ ಮಂಡಿಸಲು ಸಾಧ್ಯವಾಗಬೇಕೆಂಬ ಆಶಯವೊಂದು ಸಮಾವೇಶದಲ್ಲಿ ವ್ಯಕ್ತವಾಯಿತು. ಇದುವರೆಗೆ ಇತ್ಯರ್ಥವಾಗದೇ ಉಳಿದಿರುವ ಗೇಣಿದಾರರ ಅರ್ಜಿಗಳನ್ನು ಇತ್ಯರ್ಥಪಡಿಸುವುದು, ಹೊಸದಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವುದು, ಈಗಿರುವ ಭೂ ಹಿಡುವಳಿ ಮಿತಿಯನ್ನು ಕಡಿಮೆ ಮಾಡಿ ಅದನ್ನು ಭೂಹೀನರಿಗೆ ವಿತರಣೆ ಮಾಡುವುದು, ದಲಿತರ ಭೂಮಿಗೆ ರಕ್ಷಣೆ ಒದಗಿಸುವುದೆಲು, ಗಂಡ ಮತ್ತು ಹೆಂಡತಿಯ ಜಂಟಿ ಹೆಸರಿನಲ್ಲಿ ಪಟ್ಟಾ ನೀಡುವುದು ಇತ್ಯಾದಿ ಅಂಶಗಳನ್ನು ಒಳಗೊಂಡಂತೆ ಭೂ ಮಿತಿ ಕಾಯ್ದೆಯಲ್ಲಿನ ಎಲ್ಲ ಪಾರುಗುಂಡಿಗಳನ್ನು ಮುಚ್ಚುವ ಸಮಗ್ರ ಭೂಮಿ ಕಾಯ್ದೆಯನ್ನು ತರುವತ್ತ ಎಲ್ಲ ಸಮಾನಸ್ಕರ ಬೆಂಬಲ ದೊರಕಿಸಿಕೊಳ್ಳುವುದು ಅಗತ್ಯವಾಗಿದೆ.

- ನಿತ್ಯಾನಂದಸ್ವಾಮಿ.

ಕಳೆದ 6 ವರ್ಷಗಳಿಂದ ದೇಶವನ್ನು ಆಳಿದ ಬಿಜೆಪಿ ಸರಕಾರ ತನ್ನ ಆಡಳಿತಾವಧಿಯಲ್ಲಿ ಎಂದೂ ಸಂಕಷ್ಟಕ್ಕೆ ಒಳಗಾದ ರೈತಾಪಿ ಜನರ ಸಹಾಯಕ್ಕೆ ಬರಲಿಲ್ಲ. ಈ ಅವಧಿಯಲ್ಲಿ ಬಡವರ ಮಕ್ಕಳು ಪೌಷ್ಠಿಕ ಆಹಾರದ ಕೊರತೆಯಿಂದಾಗಿ ಅಸು ನೀಗಿವೆ. ಕನಿಷ್ಠ

ಪ್ರಾಯೋಗಿಕ ಪರಿಣಾಮಗಳ ಬಗ್ಗೆ ಅಂದಾಜಿಲ್ಲದ ಕೋರ್ಟುಗಳಿಂದ ಜನರಿಗೆ ತೊಂದರೆಯಾಗಿದೆ. ಅರಣ್ಯ ಕಾಯ್ದೆಗೆ ಸೂಕ್ತ ತಿದ್ದುಪಡಿ ತಂದು ಅತಿಕ್ರಮಣದಾರ ರೈತರ ಸಮಸ್ಯೆಗೆ ಪರಿಹಾರ ಕಂಡಕೊಳ್ಳಲು ಸಾಧ್ಯವಾಗಬೇಕಾಗಿದೆ. ಆದರೆ ಈ ಪ್ರದೇಶದಿಂದ ಇದುವರೆಗೆ ಆಯ್ಕೆಯಾಗಿ ಹೋದ ಕಾಂಗ್ರೆಸ್ ಮತ್ತು ಬಿಜೆಪಿಯ ಸಂಸತ್ ಸದಸ್ಯರು ಈ ಪ್ರಶ್ನೆಯನ್ನು ಸಂಸತ್ತಿನಲ್ಲಿ ಯಾಕೆ ಎತ್ತಲಿಲ್ಲ ಎಂದು ಪ್ರಶ್ನಿಸಿದರು.

ಬಡರೈತರು ಮತ್ತು ಭೂಹೀನ ಕೃಷಿ ಕೂಲಿಕಾರರು ಸಾಗುವಳಿ ಮಾಡುತ್ತಿರುವ

...ಳಿದಾರರನ್ನು ...ನಾಗರಿಕವಾದುದು



ಎ.ವಿಜಯರಾಘವನ್, ಸಂಸದ

...ಕುವ ಅವಕಾಶವನ್ನು ಅರಸಿಕೊಂಡು ... ಹೋಗುತ್ತಿದ್ದಾರೆ. ತಮಿಳುನಾಡು ...ವೊಂದರಲ್ಲೇ ಸುಮಾರು 35 ಲಕ್ಷ ಕೃಷಿ ...ಕಾರರು ವಲಸೆ ಹೋಗಿದ್ದಾರೆ. ಸಂಕಷ್ಟಕ್ಕೆ ...ದ ಜನರಿಗೆ ಸಹಾಯ ಹಸ್ತ ಚಾಚುವ ... ಎನ್‌ಡಿಎ ಸರ್ಕಾರ ಸಾರ್ವಜನಿಕ ...ಕ್ ವ್ಯವಸ್ಥೆಯನ್ನು ಕಡಿತ ಮಾಡಿ ...ತರ ಕುಟುಂಬಗಳನ್ನು ಪಡಿತರ ...ಸ್ಥೆಯಿಂದ ಹೊರಗಿಡಲಾಯಿತಲ್ಲದೆ ...ಕ್ ದರಗಳನ್ನೂ ...ರಿಗೊಳಿಸಲಾಯಿತು. ...ಂದಲೇ ಲೋಕಸಭಾ ...ವಣೆಯಲ್ಲಿ ದೇಶದ ಸಾಮಾನ್ಯ ಜನ ... ನೇತೃತ್ವದ ಸರಕಾರವನ್ನು ಸೋಲಿಸಿ ...ರದಿಂದ ಕಿತ್ತೆಸೆದಿದ್ದಾರೆ. ...ಗ ಕೇಂದ್ರದಲ್ಲಿ ಅನುಕೂಲ ಪರಿಸ್ಥಿತಿ ... ಎಡಪಕ್ಷಗಳ ಬೆಂಬಲ ಹೊಂದಿರುವ ...ಎ ಸರ್ಕಾರವು ರೈತರಿಗೆ, ಕೃಷಿ ...ಕಾರರಿಗೆ ಅನುಕೂಲ ಮಾಡುವ ಸಂಕಲ್ಪ ...ದಿದೆ. ರೈತರಿಗೆ ಸಾಂಸ್ಥಿಕ ಸಾಲದ ಹೆಚ್ಚಳ ... ಕೃಷಿ ಕೂಲಿಕಾರ ಕುಟುಂಬಗಳ ಒಬ್ಬೊಬ್ಬ ...ನಿಗೆ ವರ್ಷದಲ್ಲಿ 100 ದಿನಗಳ ಕೆಲಸದ ...ಟಿ ಕುರಿತಾದ ಅದರ ಸಾಮಾನ್ಯ ಕನಿಷ್ಠ ...ಕ್ರಮದ ಭರವಸೆಗಳು ಜಾರಿಗೆ ಬಂದರೆ ...ನಾ ಪ್ರಯೋಜನವಾಗಲಿದೆ ಎಂದು ಅವರು ...ದರು.

...ಉತ್ತರಕನ್ನಡ ಜಿಲ್ಲೆಯ ವಿವಿಧ ಸರ್ಕಾರಿ ...ಗಳೇ ಅರಣ್ಯ ಭೂಮಿಯಲ್ಲಿರುವಾಗ ... ಭೂಮಿಯಲ್ಲಿ ನೆಲೆಸಿರುವ ಜನಗಳನ್ನು ...ಬ್ಬಿಸುವುದು ಯಾವ ನ್ಯಾಯ? ಎಂದು ...ಯರಾಘವನ್ ಪ್ರಶ್ನಿಸಿದರು. ಸಮಸ್ಯೆಯ ... ಸರ್ಕಾರಿ/ ಅರಣ್ಯಭೂಮಿಯನ್ನು ಉಳಿಸಿಕೊಳ್ಳಲು ಎಲ್ಲಾ ತ್ಯಾಗಕ್ಕೂ ಸಿದ್ಧರಾಗಬೇಕೆಂದು ಕರೆ ನೀಡಿದ ಅವರು ಸಾಗುವಳಿ ಮಾಡಲಾದ ಒಂದು ಇಂಚು ಭೂಮಿಯನ್ನು ಸಹ ಕಿತ್ತುಕೊಳ್ಳಲು ಬಿಡಬಾರದು ಎಂದರು. ನವೆಂಬರ್ 22 ರಂದು ಆರಂಭವಾಗಲಿರುವ ಲೋಕಸಭಾ ಅಧಿವೇಶನದಲ್ಲಿ ಈ ಸಮಸ್ಯೆಯನ್ನು ಪ್ರಸ್ತಾಪ ಮಾಡಿ ಸಹಮನಸ್ಸಿನ ಎಲ್ಲಾ ಸಂಸದರ ನೆರವಿನೊಂದಿಗೆ ಅರಣ್ಯಭೂಮಿ ಸಾಗುವಳಿದಾರರ ಹಿತವನ್ನು ರಕ್ಷಿಸಲು ಪ್ರಯತ್ನಿಸುವುದಾಗಿ ಅವರು ಭರವಸೆ ನೀಡಿದರು. ಭೂಮಿ ಸರ್ಕಾರ ಕೊಡುವ ದಾನವಲ್ಲ; ಅದು ನಮ್ಮ ಹಕ್ಕು ಎಂದು ಹೇಳಿದ ಅವರು ರೈತರು ಕಾರ್ಮಿಕರು ಸಂಘಟಿತರಾದರೆ ಜಗತ್ತಿನ ಯಾವುದೇ ಶಕ್ತಿ ಅವರನ್ನು ಒಕ್ಕಲೆಬ್ಬಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ವರದಿ: ಕೆ.ಕೊಂಬಾಡಿ

ಹಳಿಯಾಳದಲ್ಲಿ 25 ವರ್ಷಗಳ ಹಿಂದೆ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ನಡೆದ ಅರಣ್ಯಭೂಮಿ ಸ್ವಾಧೀನ ಚಳುವಳಿಯಲ್ಲಿ ಪೊಲೀಸರ ಗುಂಡಿಗೆ ಬಲಿಯಾದ ಮಾರುತಿ ಗಣೇಶಪ್ಪ ಪವಾರ ಅವರ ಭಾವಚಿತ್ರಕ್ಕೆ ವಿಜಯರಾಘವನ್ ಅವರು ಹೂವಿನ ಹಾರ ಅರ್ಪಿಸಿ ಗೌರವ ಸಲ್ಲಿಸಿದರು. ಆನಂತರ ಒಂದು ನಿಮಿಷ ಮೌನ ಆಚರಿಸುವ ಮೂಲಕ ಸಮಾವೇಶವು ರೈತ ಹುತಾತ್ಮನಿಗೆ ಶ್ರದ್ಧಾಂಜಲಿ ಸಲ್ಲಿಸಿತು. ಅಂದು ಆ ಚಳುವಳಿಯಲ್ಲಿ ಪಾಲ್ಗೊಂಡಿದ್ದ ಮುಖಂಡರಾದ ಆರ್.ಜಿ.ಸ್ಥಳೇಕರ್, ಉಡಚಪ್ಪ ಬೊಬಾಟೆ ಮತ್ತು ಬಸಣ್ಣ ಪಟ್ಟೇಕರ್ ಅವರಿಗೆ ಸಂಸದ ವಿಜಯ ರಾಘವನ್ ಅವರು ಶಾಲು ಹೊದಿಸಿ ಸನ್ಮಾನಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಮಾತನಾಡಿ ಬ್ರಿಟೀಷರ ವಿರುದ್ಧ ನಡೆದ ಹೋರಾಟವೂ, ಪಾಳೆಗಾರರ ವಿರುದ್ಧ ನಡೆದ ಹೋರಾಟವೂ, ಭೂಸುಧಾರಣೆಗಳಿಗಾಗಿ ನಡೆದ ಹೋರಾಟವೂ ಭೂಹೋರಾಟವೇ ಆಗಿದೆ ಎಂದರಲ್ಲದೆ ಭೂಮಿಗಾಗಿ ನಡೆಯುವ ಹೋರಾಟವು ಪ್ರಜಾಪ್ರಭುತ್ವವನ್ನು ವಿಸ್ತರಿಸುವ ಹೋರಾಟವಾಗಿದೆ, ಕೋಮುವಾದ ಹಾಗೂ ಜಾತಿವ್ಯವಸ್ಥೆಯ ವಿರುದ್ಧದ ಹೋರಾಟವಾಗಿದೆ. ಭೂಮಿ ಹೋರಾಟಕ್ಕೂ ಕೈಗಾರೀಕರಣಕ್ಕೂ, ನಿರುದ್ಯೋಗ ನಿವಾರಣೆಗೂ ಹೇಗೆ ಸಂಬಂಧವಿದೆ ಎಂದು ವಿವರಿಸಿದರು. ಇನ್ನೋರ್ವ ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಿಪಿಐ(ಎಂ) ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿಯವರೂ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

ಆರಂಭದಲ್ಲಿ ಉತ್ತರಕನ್ನಡ ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಶಾಂತಾರಾಮ ನಾಯಕ್ ಸ್ವಾಗತಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಮಾರುತಿ ಮಾನಪಡೆ, ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ, ವಿಜಾಪುರದ ರೈತ ಮುಖಂಡ ಭೀಮಸಿ ಕಲಾದಗಿ, ದಕ್ಷಿಣ ಕನ್ನಡ ರೈತ ಮುಖಂಡ ಅಬ್ರಹಾಂ ಕರ್ಕಡ, ಉತ್ತರಕನ್ನಡ ರೈತ ಮುಖಂಡ ಮಂಜುನಾಥ ಫುಲಕರ ಉಪಸ್ಥಿತರಿದ್ದರು.

ನಂತರ ನಡೆದ ಪ್ರತಿನಿಧಿಗಳ ಅಧಿವೇಶನದ ಅಧ್ಯಕ್ಷತೆಯನ್ನು ಮಾರುತಿ ಮಾನಪಡೆ ವಹಿಸಿದ್ದರು. ಭೂ ಸಮಸ್ಯೆಯ ಕುರಿತಾದ ಬೇಡಿಕೆಗಳು ಮತ್ತು ಮುಂದಿನ ಹೋರಾಟದ ಕಾರ್ಯಕ್ರಮದ ಪ್ರಸ್ತಾಪವನ್ನು ಒಳಗೊಂಡ ನಿರ್ಣಯವೊಂದನ್ನು ಜಿ.ಸಿ.ಬಯ್ಯಾರೆಡ್ಡಿ ಮಂಡಿಸಿದರು. ಚಂದ್ರಪ್ಪ ಹೊಸ್ಕೇರಾ ಈ ನಿರ್ಣಯವನ್ನು ಅನುಮೋದಿಸಿದರು. ವಿವಿಧ ಜಿಲ್ಲೆಗಳಿಂದ ಆಗಮಿಸಿದದ ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರು. ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಕೊನೆಯಲ್ಲಿ ವಿಠ್ಠಲ ಬಂಡಾರಿ ವಂದಿಸಿದರು. ○

ಭೂಮಿಗಾಗಿ ಚಳುವಳಿ

ಸೆಪ್ಟೆಂಬರ್ 24 ರಿಂದ 30 ಪ್ರಚಾರಾಂದೋಲನ, 30ರಂದು ತಾಲೂಕು ಮಟ್ಟದ ಪ್ರತಿಭಟನಾ ಪ್ರದರ್ಶನ

ಅಕ್ಟೋಬರ್ 8- ರಾಜ್ಯಮಟ್ಟದ ಬೃಹತ್ ರ್‍ಯಾಲಿ ವಿಧಾನಸೌಧ ಚಲೋ

ಬಡ ರೈತರು ಕೃಷಿ ಕೂಲಿಕಾರರು ಹಲವು ದಶಕಗಳಿಂದ ಕೃಷಿ ಮಾಡುತ್ತಿರುವ ಮತ್ತು ಮನೆ ಕಟ್ಟಿಕೊಂಡಿರುವ ಭೂಮಿಯನ್ನು ಅರಣ್ಯ ಭೂಮಿಯೆಂದು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹೆಸರಿನಲ್ಲಿ ಒಕ್ಕಲೆಬ್ಬಿಸುವದನ್ನು ತಕ್ಷಣ ನಿಲ್ಲಿಸಬೇಕು. ಈ ಭೂಮಿಯನ್ನು ಸಕ್ರಮಮಾಡಿ ಪಟ್ಟಾ ನೀಡಲು ಸಾಧ್ಯವಾಗುವ ರೀತಿಯಲ್ಲಿ 1980ರ ಅರಣ್ಯ ಕಾಯ್ದೆಗೆ ತಿದ್ದುಪಡಿಯನ್ನು ತರಲು ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರ ಒತ್ತಡವನ್ನು ತರಬೇಕು. ಈಗಾಗಲೇ ಒಕ್ಕಲೆಬ್ಬಿಸಿರುವವರಿಗೆ ಮರು ಸ್ವಾಧೀನ ನೀಡಬೇಕು ಮತ್ತು ಸರ್ಕಾರಿ ಭೂಮಿಯನ್ನು ಉಳುಮೆ ಮಾಡುತ್ತಿರುವ ಮತ್ತು ಮನೆ ಕಟ್ಟಿಕೊಂಡಿರುವ ಬಡ ರೈತ ಹಾಗೂ ಕೂಲಿಕಾರರಿಗೆ ಸಕ್ರಮಕ್ಕೆ ಕೋರಿ ಹೊಸದಾಗಿ ಅರ್ಜಿ ಹಾಕುವ ಅವಕಾಶ, ಜೊತೆಗೆ ಸರ್ಕಾರದ ಮುಂದೆ ಈಗಾಗಲೇ ವಿಲೇವಾರಿ ಆಗದೆ ಉಳಿದಿರುವ ಸಾವಿರಾರು ಅರ್ಜಿಗಳ ವಿಲೇವಾರಿ ಮಾಡಲು ಪುನಃ ಭೂ ಮಂಜೂರಾತಿ ಸಮಿತಿಗಳನ್ನು ರಚಿಸಬೇಕು. ಇವುಗಳಲ್ಲಿ ರೈತ ಮತ್ತು ಕೃಷಿ ಕೂಲಿಕಾರರ ಸಂಘಟನೆಗಳ ಪ್ರತಿನಿಧಿಗಳಿರುವಂತಾಗಬೇಕು. ಹಾಗೂ ರಾಜ್ಯದಲ್ಲಿರುವ ಲಕ್ಷಾಂತರ ಗೇಣೀದಾರರನ್ನು ಗುರುತಿಸಿ ಅವರ ಹಕ್ಕುಗಳನ್ನು ರಕ್ಷಿಸಲು ಸಾಧ್ಯವಾಗುವ ರೀತಿಯಲ್ಲಿ ಮತ್ತು 1995ರಲ್ಲಿ ಭೂಮಿತಿ ಕಾಯ್ದೆಗೆ ತಂದಿರುವ ತಿದ್ದುಪಡಿಗಳನ್ನು ವಾಪಸ ಪಡೆದು ಕಾಯ್ದೆಯಲ್ಲಿರುವ ದೋಷಗಳನ್ನು ಸರಿಪಡಿಸಿ ಭೂಮಿತಿ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಜನತಾ ಮನೆಗಳ ಪಟ್ಟಾ ನೀಡಬೇಕು. ಹೀಗೆ ಭೂಮಿಗೆ ಸಂಬಂಧಿಸಿದ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ಸೆಪ್ಟೆಂಬರ್ 24ರಿಂದ 30ರ ತನಕ ಒಂದು ವಾರ ಕಾಲ ಪ್ರಚಾರಾಂದೋಲನ ಸಂಘಟಿಸಿ, ಸಪ್ಟೆಂಬರ 30 ರಂದು ಎಲ್ಲ ತಾಲೂಕ ಮಟ್ಟದಲ್ಲಿ ರಾಜ್ಯಾದ್ಯಂತ ಬೃಹತ್ ಪ್ರತಿಭಟನಾ ಮೆರವಣಿಗೆ, ಪ್ರದರ್ಶನಗಳನ್ನು ನಡೆಸಬೇಕೆಂದು, ಎರಡನೇ ಹಂತವಾಗಿ ಅಕ್ಟೋಬರ್ 8ರಂದು 'ವಿಧಾನಸೌಧ ಚಲೋ' ಸಂಘಟಿಸಲು ಸಪ್ಟೆಂಬರ 13ರಂದು ಹೊನ್ನಾವರದಲ್ಲಿ ಸೇರಿದ ರಾಜ್ಯಮಟ್ಟದ ಭೂ ಸಮಾವೇಶ ನಿರ್ಣಯ ಅಂಗೀಕರಿಸಿದೆ.





ಹಗಲು-ರಾತ್ರಿ ಧರಣಿ

ಅಂಗನವಾಡಿ ಕಾರ್ಯಕರ್ತೆಯರ ದೃಢ ಸಂಕಲ್ಪದ ಹೋರಾಟ

ಅಂಗನವಾಡಿ ನೌಕರರನ್ನು ಗ್ರಾಮ ಪಂಚಾಯ್ತಿಗೊಪ್ಪಿಸಿರುವ ಸರ್ಕಾರಿ ಆದೇಶವನ್ನು ರದ್ದು ಮಾಡಬೇಕೆಂದೂ, ಸೇವಾನಿಯಮವಾಳಿಗಳನ್ನು ರಚಿಸಬೇಕೆಂದೂ ಒತ್ತಾಯಿಸಿ ಅಂಗನವಾಡಿ ನೌಕರರು 2002 ನವೆಂಬರ್‌ನಿಂದ ಹೋರಾಟ ನಡೆಸಿಕೊಂಡು ಬಂದಿದ್ದಾರೆ. ಆದರೆ ಸರ್ಕಾರ ಯಾವುದೇ ಪ್ರತಿಭಟನೆಗೆ ಮಣಿಯದಿರುವುದನ್ನು ವಿರೋಧಿಸಿ ಇದೇ ಸೆಪ್ಟೆಂಬರ್ 3 ರಿಂದ 14ರವರೆಗೆ ಅನಿರ್ದಿಷ್ಟ ಧರಣಿಯನ್ನು ರಾಜಧಾನಿ ಬೆಂಗಳೂರಿನಲ್ಲಿ ನಡೆಸಿದರು.

ಗ್ರಾಮ ಪಂಚಾಯ್ತಿಗಳಿಂದ ಹಾಜರಾತಿ ದೃಢೀಕರಣ ಪತ್ರ ಮತ್ತು ರಜೆ ಪರ್ಮಿಷನನ್ನು ಗ್ರಾಮ ಪಂಚಾಯ್ತಿಗಳಿಂದ ತೆಗೆದುಕೊಳ್ಳಬೇಕೆಂಬುದು ಸರ್ಕಾರಿ ಆದೇಶ. ಈ ಆದೇಶದಿಂದಾಗಿ ಸೇವಾ ಭದ್ರತೆಯಿಲ್ಲದೆ ಒಂದು ಯೋಜನೆಯಡಿಯಲ್ಲಿ ಕೆಲಸ ಮಾಡುತ್ತಿರುವ ಅಂಗನವಾಡಿ ನೌಕರರು ಪರಿಸ್ಥಿತಿ ಏನಾಗಬಹುದು? ಸೇವಾ ನಿಯಮಾವಳಿಗಳು ಇಲ್ಲದಿರುವುದರಿಂದ ಕೆಲಸ ಸರಿಯಾಗಿ ನಿರ್ವಹಣೆ ಮಾಡಿದರೂ ಗ್ರಾಮ ಪಂಚಾಯ್ತಿಗಳಿಂದ ಹಾಜರಾತಿ ದೃಢೀಕರಣ ಪತ್ರ ಕೊಡಲಿಲ್ಲವೆಂದರೆ ಏನು ಮಾಡಬೇಕು? ಅಥವಾ ಗ್ರಾಮ ಪಂಚಾಯ್ತಿಗಳು ಈ ಕಾರ್ಯಕರ್ತೆ ಮತ್ತು ಸಹಾಯಕಿ ಕೆಲಸಕ್ಕೆ ಬೇಡವೆಂದು ತೀರ್ಮಾನ ತೆಗೆದುಕೊಂಡರೆ ಈ ನೌಕರರು ಏನು ಮಾಡಬೇಕು? ಮೂಲಭೂತವಾಗಿ ಇಂತಹ ಸಮಸ್ಯೆಗಳೊಟ್ಟಿಗೆ ಹೆಚ್ಚಿನ ದೌರ್ಜನ್ಯಗಳಾಗುವ ಭೀತಿಯೂ ಇರುವುದರಿಂದ ಆದೇಶವನ್ನು ವಿರೋಧಿಸಬೇಕಾಗಿದೆ.

ಹಗಲು ರಾತ್ರಿ ಧರಣಿ

ಇದು ಸರ್ಕಾರದ ನೀತಿಯ ಭಾಗವಾಗಿರುವುದರಿಂದ ಸಿಐಟಿಯುವಿನ ನೇತೃತ್ವದಲ್ಲಿ ಸೆಪ್ಟೆಂಬರ್ 2 ರಂದು ಎಲ್ಲಾ ವಿಭಾಗದ ಕಾರ್ಮಿಕರು 20 ಸಾವಿರಕ್ಕಿಂತಲೂ ಹೆಚ್ಚು ಕಾರ್ಮಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಈ ಪ್ರತಿಭಟನೆಯಲ್ಲಿ ಅಂಗನವಾಡಿ ನೌಕರರು ಅತ್ಯಂತ ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದ್ದರು. ಸೆಪ್ಟೆಂಬರ್ 3 ರಿಂದ ಪ್ರಾರಂಭವಾದ ಅಂಗನವಾಡಿ ನೌಕರರ ಧರಣಿಯನ್ನು ಪ್ರತಿದಿನ 400 ರಿಂದ 600 ಜನರು ರಾತ್ರಿ-ಹಗಲು ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಒಂದೇ ವಾರದಲ್ಲಿ ಎರಡು ಬಾರಿ ಬೆಂಗಳೂರಿನ ಬಂದು ಅಂಗನವಾಡಿ ಮಹಿಳೆಯರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವುದು ಎಂದರೆ ಈ ಆದೇಶದ ವಿರುದ್ಧ ಎಂತಹುದೇ ಹೋರಾಟಕ್ಕೆ ತಯಾರು ಎಂಬ ಅವರ ತೀರ್ಮಾನ ಅವರ ಹೋರಾಟದ ಮನೋಭಾವನೆಯನ್ನು ಮೆಚ್ಚಬೇಕಾದ್ದೇ. 12 ದಿನಗಳ ಕಾಲ ನಡೆದ ಧರಣಿಯಲ್ಲಿ ಬೆಂಗಳೂರು ನಗರ, ಗ್ರಾಮಾಂತರ, ಕೋಲಾರ, ತುಮಕೂರು, ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ಉತ್ತರಕನ್ನಡ, ದಕ್ಷಿಣಕನ್ನಡ, ಬಿಜಾಪುರ, ಬೆಳಗಾಂ, ಗುಲ್ಬರ್ಗಾ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳಿಂದ ಸರಿಸುಮಾರು 4 ರಿಂದ 5 ಸಾವಿರ ನೌಕರರು ಪಾಲ್ಗೊಂಡಿದ್ದಾರೆ. ಸುಮಾರು 70 ತಾಲೂಕುಗಳಿಂದಲೂ ಭಾಗವಹಿಸಿರುವುದು ವಿಶೇಷ.

ಧಾರಾಕಾರ ಮಳೆ ಕುಸಿದ ಟೆಂಟ್ ಛೀಮಾರಿಗೊಳಗಾದ ಪೋಲೀಸರು!

ಸೆಪ್ಟೆಂಬರ್ 3 ರಂದು ರಾತ್ರಿ ಬೆಂಗಳೂರಿನ ಸುರಿದ ಧಾರಾಕಾರವಾದ ಮಳೆಯಿಂದ ಧರಣಿಗೆ ಹಾಕಿದ್ದ ಟೆಂಟ್ ಕುಸಿದುಬಿದ್ದಾಗ 4-5 ಜನ ಮಹಿಳೆಯರು ಸೇರಿ ಟೆಂಟನ್ನು ಎತ್ತಿಹಿಡಿದು ಸುಮಾರು 150 ಕ್ಕಿಂತಲೂ ಹೆಚ್ಚು ಅಂಗನವಾಡಿ ನೌಕರರನ್ನು ಹೊರಗಡೆ ಎಳೆದು, 3-4 ಗಂಟೆಗಳ ಕಾಲ ಮಳೆಯಲ್ಲಿಯೇ ನೆನೆದು ಆಸರೆಯಾಗಿ ಪಕ್ಕದ ಪೊಲೀಸ್ ಸ್ಟೇಷನ್‌ಗೆ ಹೋದಾಗ ಪೊಲೀಸ್‌ನವರು ಇಷ್ಟೊತ್ತಲ್ಲಿ ಏಕೆ ಬಂದಿರೆ, ಆಚೆ ನಿಂತು ಮಾತಾಡಿ ಎಂದರು. ಅದಕ್ಕೆ ಪ್ರತ್ಯುತ್ತರ ಕೊಟ್ಟರೆ ನಿಷ್ಕರುಣೆಯಿಂದ ವರ್ತಿಸಿದ ಪೊಲೀಸ್ ಸಿಬ್ಬಂದಿಗೆ ಛೀಮಾರಿ ಹಾಕಿ ಹೊರಗಡೆ ನಿಂತು ಕ್ರಾಂತಿಗೀತೆಗಳ ಮುಖಾಂತರ ಪೊಲೀಸ್‌ನವರಿಗೆ ನಡುಕ ಹುಟ್ಟಿಸಿದರು. ನಂತರ ಪೊಲೀಸ್‌ನವರು ಆದದ್ದು ಆಗಿ ಹೋಗಿದೆ ಬನ್ನಿ ನಿಮಗೆ ಪ್ರತ್ಯೇಕ ಕೋಣೆ ಕೊಡುತ್ತೇವೆ ಎಂದರೂ ಚಳುವಳಿಗಾರರು ಒಪ್ಪದೇ ಮೇಡಂ! ನೀವೇನೂ ಭಯಪಡಬೇಡಿ ಈಗಲೇ ಮುಖ್ಯಮಂತ್ರಿಗಳ ಮನೆಗೆ ಹೋಗೋಣ, ನ್ಯಾಯ ಕೇಳೋಣ, ಮಳೆಯಲ್ಲಿ ನೆಂದರೂ ಪರ್ವಾಗಿಲ್ಲ ಬೀದಿಯಲ್ಲೇ ನಿಲ್ಲೋಣ ನೀವು ಪೊಲೀಸರಿಗೆ ತಲೆ ತಗ್ಗಿಸಬೇಡಿ ಎಂದಾಗ ಆ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ನನಗೆ ಇನ್ನಷ್ಟು ಮಾನಸಿಕ ಸ್ಥೈರ್ಯದ ಜೊತೆಗೆ ಈ ಮಹಿಳೆಯರಿಗಾಗಿ ಇನ್ನಷ್ಟು ಹೋರಾಡಬೇಕೆಂಬ ಹಟ ಬಂದಿದ್ದು ಸಂಘಟನೆಗಷ್ಟೇ ಅಲ್ಲದೆ ಆ ಮಹಿಳೆಯರು ಅಂತಹ ತೀರ್ಮಾನ ಮಾಡಿದ್ದರು.

ಆ ಮಹಿಳೆಯರು 70 ಕ್ಕಿಂತ ಹೆಚ್ಚು ವಯಸ್ಸಾದವರು, ಮಕ್ಕಳು, ಅಂಕವಿಕಲರು ಇದ್ದರೂ ಅವರ್‍ಯಾರೂ ಧೈರ್ಯಗೆಡದೆ ಆ ಪರಿಸ್ಥಿತಿಯನ್ನು ನಿಭಾಯಿಸಿದ್ದು ನಿಜವಾದ ಹೋರಾಟಗಳಿಗೆ ಮಾದರಿ ಆಗಿತ್ತು. ನಂತರ ಟೆಂಟನ್ನು ಸಂಪೂರ್ಣವಾಗಿ ಬದಲಾಯಿಸಿ ಹೋರಾಟ ಮುಂದು ವರಿಸಲಾಯಿತು.

ಈ ಹೋರಾಟದ ಮಧ್ಯದಲ್ಲಿಯೇ ಸರ್ಕಾರ 08.09.04 ಜಂಟೀ ಸಭೆಯನ್ನು ಕರೆಯಿತು. ಈ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಕಾರ್ಮಿಕ ಸಚಿವರು, ಜಲಸಂಪನ್ಮೂಲ ಸಚಿವರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ, ಆರ್.ಡಿ.ಪಿ.ಆರ್. ಇಲಾಖೆಯ ಮಹಿಳಾ, ಮಕ್ಕಳ ಕಲ್ಯಾಣ ಇಲಾಖೆ, ಹಣಕಾಸು ಇಲಾಖೆಯ ಕಾರ್ಯದರ್ಶಿಗಳು ಸಿಪಿಐ(ಎಂ) ಶಾಸಕರಾದ ಕಾಂ.ಜಿ.ವಿ.ಶ್ರೀರಾಮರೆಡ್ಡಿ, ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ, ಸಿಐಟಿಯುವಿನ ಸಹ ಕಾರ್ಯದರ್ಶಿ ಕಾಂ.ಲೀಲಾವತಿ, ಸಂಘದ ಕಾಂ.ಅಲ್ಲಾಬಕಾಶ, ಶಾಂತಕುಮಾರಿ, ನಾಗಮಣಿ, ವಸಂತರವರು ಪಾಲ್ಗೊಂಡಿದ್ದರು.

ಮುಖ್ಯಮಂತ್ರಿ ಆಶ್ವಾಸನೆ

ಸರ್ಕಾರ ಯಾವುದೇ ಹೊಸ ಯೋಜನೆ ಆದೇಶ ತಂದಾಗ ಸಹಜವಾಗಿ ಜನರ ಪ್ರತಿರೋಧ ಬರುತ್ತದೆ. ಆ ಯೋಜನೆ ಒಂದು ಸಾರಿ ಜಾರಿ ಆಗದಿದ್ದರೆ ನಂತರ ಪ್ರತಿರೋಧ ಇರುವುದಿಲ್ಲ ಎಂಬುದು ರಾಜ್ಯ ಸರ್ಕಾರ ವಾದ ಮತ್ತು ಅಧಿಕಾರ ವಿಕೇಂದ್ರೀಕರಣ ಪ್ರಥಮ ಹೆಜ್ಜೆ ಎಂದು ಹಲವಾರು ಬಗ್ಗೆ ಚರ್ಚೆಯಾಗಿ ಅಂತಿಮವಾಗಿ ಮುಂದಿನ ಸಚಿವ ಸಂಪುಟವನ್ನು ಈ ಬಗ್ಗೆ ಪುನರ್‌ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ.

ಈ ಆಶ್ವಾಸನೆ ಜಾರಿಯಾಗಬೇಕೆಂದೂ ಒತ್ತಾಯಿಸಿ ಹೋರಾಟವನ್ನು ಇನ್ನು ತೀವ್ರಗೊಳಿಸಿದೆ.

ಐಕ್ಯಹೋರಾಟಕ್ಕೆ ನಿರ್ಧಾರ

ರಾಜ್ಯದಲ್ಲಿರುವ ಇನ್ನಿತರ ಸಂಘಟನೆ ಜೊತೆಗೂಡಿ ಸಂಯುಕ್ತ ಸಂಘರ್ಷ ಸಮಿತಿಯ ರಚಿಸಿಕೊಂಡು ಸೆಪ್ಟೆಂಬರ್ 15 ರಂದು ರಾಜ ಎಲ್ಲಾ ಅಂಗನವಾಡಿ ಕೇಂದ್ರಗಳನ್ನು ಬಂ ಮಾಡಿದೆ. ಸೆಪ್ಟೆಂಬರ್ ತಿಂಗಳಿಂದ ಮಾ ವರದಿಯನ್ನು ಕೊಡದೆ ಇರಲು ತೀರ್ಮಾನಿಸಿ ಇದರಿಂದ ನೌಕರರಿಗೆ ಗೌರವಧ ಪಾವತಿಯಾಗುವುದಿಲ್ಲ. ಎಷ್ಟು ದಿನ ಬೇಕಾದರ ಸಂಬಳವಿಲ್ಲದೆ ಇರುತ್ತೇವೆ. ಸರ್ಕಾರಿ ಆದೇಶ ಜಾ ಮಾಡುವುದಿಲ್ಲ ಎಂದು ನೌಕರ ತೀರ್ಮಾನಿಸಿದ್ದಾರೆ.

ಆಗಲೂ ಸರ್ಕಾರ ಆದೇಶ ರದ್ದುಮಾಡದಿ **ನವೆಂಬರ್‌ನಲ್ಲಿ ವಿಧಾನಸೌಧ ಚಲೋ** ನಡೆಸ ನಿರ್ಣಯಿಸಿದ್ದಾರೆ. ಸಿಐಟಿಯು ಸಂಯೋಜನೆಯಾಗಿರುವ "ಕರ್ನಾಟಕ ರಾ ಅಂಗನವಾಡಿ ನೌಕರರ ಸಂಘ" ಕೇವ ತೋರಿಕೆಗಾಗಿ ಹೋರಾಟ ಮಾಡದ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನ ಹೋರಾಟವನ್ನು ಮುಂದುವರಿಸುವುದರೊಟ್ಟ ಸಂಘಟನಾ ಸಮಿತಿಗಳನ್ನು ಗಟ್ಟಿಗೊಳಿಸಲು ಹಾಗ ಜನರಿಗೂ ಈ ವಿಚಾರಗಳನ್ನು ಕರಪತ್ರ



ಮುಖಾಂತರ ತಿಳಿಸಲು ಪ್ರಯತ್ನಿಸುತ್ತಿದೆ.

ಈ ಹೋರಾಟಕ್ಕೆ ಜೆ.ಎಂ.ಎಸ್ ಡಿವೈಎಫ್‌ಐ, ಎಸ್‌ಎಫ್‌ಐ, ಎಆರ್‌ಡಿಯು, ಎಐಬಿಓಸಿ, ಆರ್‌ಎಂಎಸ್, ಎಐಐ ಮುಂತಾದ ಸಂಘಟನೆಗಳು ಧರಣಿಗೆ ಬಂ ಬೆಂಬಲ ನೀಡಿದ್ದಾರೆ. ಸಿಐಟಿಯು ಜಿಲ್ಲಾ ಮ ರಾಜ್ಯ ಸಮಿತಿಯ ಸಂಪೂರ್ಣ ಸಹಕಾರದೊಂದಿ ಯಶಸ್ವಿ ಧರಣಿ ನಡೆಸಿ ಹೋರಾಟವನ ಮುಂದುವರಿಸಲಾಗಿದೆ.

- ವರಲಕ್ಷ್ಮಿ ಎಸ್

ಅಂಕಿ ಸಂಖ್ಯೆ

ಕೋಟಿ ರೂಪಾಯಿ ವೇತನ

ಜುಲೈ 30,2004 ರ 'ಇಕಾನಾಮಿಕ್ ಟೈಮ್ಸ್' ವರದಿ ಪ್ರಕಾರ ಈ ಕೆಳಗಿನವರು ವರ್ಷಕ್ಕೆ 1 ಕೋಟಿ ರೂಗಿಂತಲೂ ಹೆಚ್ಚಿಗೆ ವೇತನ ಪಡೆಯುತ್ತಾರೆ.

ಹೆಸರು	ಕಂಪನಿ	ವೇತನ ವರ್ಷಕ್ಕೆ (ರೂ.ಗಳಲ್ಲಿ)
ಮುಖೇಶ್ ಅಂಬಾನಿ	ರಿಲೈಯನ್ಸ್	11.6 ಕೋಟಿ
ಅನಿಲ್ ಅಂಬಾನಿ	”	11.6
ಅಖಿಯಾ ಕಜುಸ	ಹೀರೋಹೊಂಡಾ	9.3 ಕೋಟಿ
ಪಂಕಜ ಪಟೇಲ್	ಕ್ಯಾಡಿಲಾ	8.4 ಕೋಟಿ
ಎಂ.ಎಸ್.ಬಾಗಾ	ಹಿಂದೂಸ್ತಾನ್‌ಲೀವರ್	2.4 ಕೋಟಿ
ಡಿ.ಸುಂದರಂ	1.4 ಕೋಟಿ	
ವಿ.ಕೆ.ಕಾಲ್	ರ್‍ಯಾನ್‌ಬ್ಯಾಕ್ಸಿ	2.8 ಕೋಟಿ
ಡಿ.ಎಸ್.ಬ್ರಾರ್	ರ್‍ಯಾನ್‌ಬ್ಯಾಕ್ಸಿ	4.0 ಕೋಟಿ
ಪಿ.ಡಿ.ನರಂಗ್	ಡಾಬರ್ ಇಂಡಿಯಾ	1.2 ಕೋಟಿ
ಆರ್.ಎಲ್‌ಸ್ಟನ್	ಕ್ಯಾಸ್ಟ್ರೋಲ್ ಇಂಡಿಯಾ	1.3 ಕೋಟಿ
ಪ್ರವೀಣ್ ಪಿ.ಕರ್ಲೆ	ಟಾಟಾ ಮೋಟಾರ್ಸ್	1.1 ಕೋಟಿ
ಎನ್.ಎಸ್.ಸೇಕ್ಸಾರಿಯಾ	ಗುಜರಾತ್ ಅಂಬುಜಾ	2.86
ಅನಿಲ್ ಸಿಂಘ್ವಿ		0.80 ಕೋಟಿ

ವರ್ಷಕ್ಕೆ 1 ಕೋಟಿ ರೂಗಿಂತಲೂ ಹೆಚ್ಚು ವೇತನ ಪಡೆಯುವ ಇನ್ನೂ ಹಲವರು ದೊಡ್ಡ ದೊಡ್ಡ ಖಾಸಗಿ ಮತ್ತು ಬಹುರಾಷ್ಟ್ರೀಯ ಕಂಪನಿಗಳಲ್ಲಿದ್ದಾರೆ.

ಆಸ್ಪತ್ರೆಗೇ ಅಂಟಿತು 'ಕ್ಷಯ' ರೋಗ

ಕ್ಷಯರೋಗದ ಹಾವಳಿಗೆ ತುತ್ತಾಗಿ, ಚಿಕಿತ್ಸೆ ಸಿಗದೇ ಕುಪ್ಪೇ ಕುಪ್ಪೇ ಜನ ಸಾವಿಗೀಡಾಗುತ್ತಿರುವಾಗ, ಸೌಲಭ್ಯಗಳನ್ನು ಹೆಚ್ಚಿಸದ ಸರ್ಕಾರ, ಇರುವ ಆಸ್ಪತ್ರೆಗಳನ್ನೇ ಖಾಸಗಿಯವರಿಗೆ ಮಾರಲು ಹೊರಟಿದೆ. ದುಗ್ಗಾಣಿ ದುಡಿಮೆಯೂ ಇಲ್ಲದ, ಅಪೌಷ್ಟಿಕತೆಯಿಂದ ಬಳಲುವ ಅತೀ ಬಡವರಿಗೆ ಆಕ್ರಮಿಸುವ ಈ ರೋಗಕ್ಕೆ ಇನ್ನು ಚಿಕಿತ್ಸೆ ದೂರಾದ ಮಾತು? ಅಂದರೆ ಸಾವು ಕಟ್ಟಿದ್ದ ಬುತ್ತಿ... ಖಾಸಗೀಕರಣ, ಜಾಗತೀಕರಣದ ಜಪಮಾಡುವ ಸರ್ಕಾರದ ಆರೋಗ್ಯ ನೀತಿಯ ಘೋರ ಪರಿಣಾಮದತ್ತ ಗಮನಸೆಳೆವ ಲೇಖನವಿಲ್ಲಿದೆ.....

ಎಲ್ಲರಿಗೂ ತಿಳಿದಿರುವಂತೆ ಕರ್ನಾಟಕದಲ್ಲಿ ಸಾವಿರಾರು ಮಂದಿ ಕ್ಷಯ ಮತ್ತು ಎದೆ ರೋಗದಿಂದ ನರಳುತ್ತಿದ್ದಾರೆ. ಇವರ ಚಿಕಿತ್ಸೆಗಾಗಿ ರಾಜ್ಯ ಸರ್ಕಾರದ ವತಿಯಿಂದ ಸರ್ಕಾರೀ ಕ್ಷಯ ರೋಗ ಮತ್ತು ಎದೆ ರೋಗಗಳ ಆಸ್ಪತ್ರೆಗಳು 1942ರಲ್ಲಿ ಸ್ಥಾಪಿತಯಾಗಿದ್ದವು. ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆಯನ್ನು ಮಧ್ಯಮ ಹಾಗೂ ದೀರ್ಘಾವಧಿಯಲ್ಲಿ ನೀಡಿ ಗುಣಪಡಿಸುತ್ತಿರುವುದು ಸಾರ್ವಜನಿಕರಿಗೆ ಸರ್ಕಾರ ನೀಡಿರುವ ಉತ್ತಮ ಸೌಲಭ್ಯಗಳಲ್ಲಿ ಒಂದು.

ಕ್ಷಯ ರೋಗವು ಒಂದು ಸಾಂಕ್ರಾಮಿಕ ರೋಗವೆಂಬುದು ಇಡೀ ಪ್ರಪಂಚಕ್ಕೆ ತಿಳಿದ ವಿಷಯವಾಗಿದ್ದು, ಈ ರೋಗವು ರೋಗಿಯು ಕೆಮ್ಮಿದಾಗ ಮತ್ತು ಉಗುಳಿದಾಗ ರೋಗಾಣುಗಳು ಒಬ್ಬರಿಂದ ಮತ್ತೊಬ್ಬರಿಗೆ ಅತಿ ಶೀಘ್ರವಾಗಿ ಹರಡುತ್ತದೆ. ಈ 'ಕಾರಣಕ್ಕಾಗಿಯೇ ಬ್ರಿಟಿಷರ ಕಾಲದಿಂದಲೂ ಕ್ಷಯರೋಗಿಗಳಿಗಾಗಿಯೇ ಕರ್ನಾಟಕದಲ್ಲಿ ಪ್ರತ್ಯೇಕವಾದ 6 ಆಸ್ಪತ್ರೆಗಳು ಸ್ಥಾಪನೆಯಾಗಿ ಕಾರ್ಯನಿರ್ವಹಿಸುತ್ತಿರುತ್ತವೆ.

1. ಸರ್ಕಾರಿ ಕ್ಷಯರೋಗ ಆಸ್ಪತ್ರೆ - ಹಳೇ ಮದ್ರಾಸು ರಸ್ತೆ, ಬೆಂಗಳೂರು.
2. ಕೆ.ಎನ್.ಟಿ.ಬಿ. ಆಸ್ಪತ್ರೆ - ಕೋಲಾರ
3. ಟಿ.ಬಿ. ಆಸ್ಪತ್ರೆ - ಬಿಜಾಪುರ
4. ಎಂ.ಜಿ.ಎಂ.ಟಿ.ಬಿ. ಆಸ್ಪತ್ರೆ - ಗದಗ
5. ಎಂ.ಜಿ.ಎಂ.ಟಿ.ಬಿ. ಆಸ್ಪತ್ರೆ - ಮಂಡ್ಯ
6. ಎಂ.ಜಿ.ಎಂ.ಟಿ.ಬಿ. ಆಸ್ಪತ್ರೆ - ಮುದುಗೆಡ್ಡೆ

ಕಡುಬಡವರಲ್ಲೇ ಅಧಿಕ ರೋಗಿಗಳು

ಕ್ಷಯರೋಗದಿಂದ ನರಳುವವರಲ್ಲಿ ಶೇ.60 ರಷ್ಟು ಮಂದಿ ದಿನಗೂಲಿ ಕಾರ್ಮಿಕರು, ಕಡುಬಡವರು, ನಿರ್ಗತಿಕರೇ ಆಗಿರುವುದರಿಂದ ಇಂತಹ ರೋಗಿಗಳನ್ನು ಗುಣಪಡಿಸಿ ಪುನರ್ವಸತಿ ಕಲ್ಪಿಸಿಕೊಡುವ ಜವಾಬ್ದಾರಿಯುತ ಕಾರ್ಯವನ್ನು ಹಿಂದಿನ ಸರ್ಕಾರಗಳು ನಿರ್ವಹಿಸುತ್ತಾ ಬಂದಿವೆ. ಈ ಆಸ್ಪತ್ರೆಗಳಲ್ಲಿರುವ ರೋಗಿಗಳಿಗೆ ಹಾಲು, ಬ್ರೆಡ್ಡು, ಮೊಟ್ಟೆ, ಮೊಸರು, ಪ್ರೊಟೀನ್‌ಯುಕ್ತ ಆಹಾರದೊಂದಿಗೆ ಚಿಕಿತ್ಸೆಯ ಸೌಲಭ್ಯವನ್ನು ನೀಡುತ್ತಿದ್ದು ಇದರಿಂದ ಸಾವಿರಾರು ಕ್ಷಯರೋಗಿಗಳು ಉಚಿತವಾಗಿ ಈ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಕೊಳಚೆಪ್ರದೇಶದ ಕೂಲಿ ಕಾರ್ಮಿಕರು ಆಗಿರುವುದರಿಂದ ಇವರಿಗೆ ಕುಟುಂಬ ಪೋಷಣೆ ಮಾಡಿಕೊಳ್ಳುವುದೇ ಒಂದು ಸಮಸ್ಯೆಯಾಗಿರುವಾಗ, ಉತ್ಕೃಷ್ಟವಾದ ಆಹಾರ, ವಿಶ್ರಾಂತಿ ಗಾಳಿ ಬೆಳಕು ಇದ್ದು ಈ ಸೌಲಭ್ಯಗಳು ಇವರಿಗೆ ಬೇರೆ ಕಡೆ ಸಿಗುವುದಿಲ್ಲ, ರೋಗ ವಾಸಿಯಾದರೂ ಹೇಗೆ ವಾಸಿಯಾಗುತ್ತದೆ? ಮನೆಯಲ್ಲಿ ಚಿಕಿತ್ಸೆ ಮಾಡಿಸಿಕೊಂಡಲ್ಲಿ ರೋಗ ಉಲ್ಬಣಗೊಳ್ಳುವುದರ ಜೊತೆಗೆ ಕುಟುಂಬ ಸದಸ್ಯರು ಹಗೂ ಇತರೆ ನಾಗರೀಕರಿಗೂ ರೋಗ ಹರಡಿಸುತ್ತಾ ಸಮಾಜವನ್ನೇ ಕಲುಷಿತಗೊಳಿಸುವ ಅಪಾಯವಿದೆ.

ಪ್ರತಿದಿನ ಸುಮಾರು 160 ರಿಂದ 170 ಹೊರ ಒಳ ರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿದಾರೆ.

ಹೊರ ರೋಗಿಗಳು

2001 - 4435
2002 - 4249
2003 - 4266

ಗುರುತಿಸುವ ಅಂಶ ಒಳರೋಗಿಗಳ ಸಂಖ್ಯೆ ಕುಸಿತ ಕಂಡಿದೆ.

ಒಳ ರೋಗಿಗಳು

2001 - 1731
2002 - 1421
2003 - 1707
2004 - 856

ವಾರ್ಡುಗಳಲ್ಲಿ 3 ವಿಭಾಗಗಳು

ಗಂಡಸರು - 116, ಹೆಂಗಸರು - 48, ಮಕ್ಕಳು - 6 : ವಾರ್ಡುಗಳಿವೆ

ಒಟ್ಟು 170 ರೋಗಿಗಳು ಒಳರೋಗಿಗಳಾಗಿದ್ದಾರೆ.

ಖಾಲಿ ಇರುವ ಹಾಸಿಗೆಗಳು

ಸ್ತ್ರೀಯರು - 31
ಪುರುಷರು - 27
ಮಕ್ಕಳು - 6
ಒಟ್ಟು - 64

ರೋಗದಿಂದ ಗುಣಮುಖರಾದವರಿಗೆ ಸ್ವಯಂ ಉದ್ಯೋಗ ದೊರಕಿಸುವ ಸಲುವಾಗಿ 3 ರಿಂದ 6 ತಿಂಗಳವರೆಗೆ ಉಳಿಸಿಕೊಳ್ಳುತ್ತಿದ್ದರು. ಹೆಂಗಸರಿಗ ಚಾಪೆ ಹೆಣೆಯುವುದು, ಟೈಲರಿಂಗ್; ಪುರುಷರಿಗೆ ಪ್ರಿಂಟಿಂಗ್, ನೇಯ್ಗೆ ಇತ್ಯಾದಿ ತರಬೇತಿ ನೀಡಿ ಕೊನೆಯಲ್ಲಿ ಸರ್ಟಿಫಿಕೆಟ್ ನೀಡುತ್ತಿದ್ದರು. ಆದರೆ ಈಗ 3 ವಾರವೂ ಇಟ್ಟುಕೊಳ್ಳುವುದಿಲ್ಲ.


ಸೌಲಭ್ಯಗಳ ಎತ್ತಂಗಡಿ

ಒಟ್ಟು 21 ಎಕರೆ ಇರುವ ಜಾಗದಲ್ಲಿ 6 ಎಕರೆ ತೋಟಗಾರಿಕೆಗೆ ನೀಡಿದ್ದಾರೆ. ಅಲ್ಲಿ ಹಣ್ಣು, ತರಕಾರಿ ಬೆಳೆದು 1/2 ಬೆಲೆಗೆ ಮಾರಾಟ ಮಾಡುತ್ತಿದ್ದರು. ಆ ಪ್ರಕ್ರಿಯೆ ಈಗ ಇಲ್ಲವಾಗಿದೆ. ರೆಕ್ರಿಯೇಷನ್ ಹಾಲ್‌ನಲ್ಲಿ ಮಾಹಿತಿ ಕ್ರೀಡೆ, ಹಲವು ವಿಚಾರಗಳನ್ನು ಚರ್ಚಿಸುವ ಹಾಲ್ ಈಗ ಬಂದ್ ಆಗಿದೆ. (ಮಂಡ್ಯ, ಮಂಗಳೂರಿನ ರೋಗಿಗಳು ಕ್ರೈಂ ಸ್ಟೋರಿ ಚಾನಲ್ ಮೂಲಕ ಸರ್ಕಾರದ ಗಮನಕ್ಕೆ ತಂದಿದ್ದಾರೆ)

ಆಸ್ಪತ್ರೆ ಮಾರಾಟ!

ಕೇಂದ್ರ ಸರ್ಕಾರದ ಜನವಿರೋಧಿ ನೀತಿ ಬಹುರಾಷ್ಟ್ರೀಯ ಕಂಪೆನಿಗಳ ಜಾಲಕ್ಕೆ ಒಳಗಾಗಿ **ಖಾಸಗಿಯವರಿಗೆ ಈಗ ಆಸ್ಪತ್ರೆಗಳನ್ನು ಮಾರಲು ಸರ್ಕಾರ ನಿರ್ಧರಿಸಿದೆ. ಈಗಾಗಲೇ ಕೆಂಪೇಗೌಡ ರಸ್ತೆಯಲ್ಲಿದ್ದ ಲೇಡಿ ವಿಲ್ಲಿಂಗ್ಟನ್ ಆಸ್ಪತ್ರೆ ಮುಚ್ಚಿದ್ದು ಅಲ್ಲಿ ವಾಣಿಜ್ಯ ಸಂಕೀರ್ಣವೊಂದು ತಲೆ ಎತ್ತಿರುವುದು ಬಹುರಾಷ್ಟ್ರೀಯ ಕಂಪೆನಿಗೆ ಕ್ಷಯರೋಗದ ಆಸ್ಪತ್ರೆ ಮಾರಿರುವುದೇ ಜೀವಂತ ಸಾಕ್ಷಿಯಾಗಿದೆ. ಒಟ್ಟು ಆಸ್ಪತ್ರೆಗಳನ್ನು ಮುಚ್ಚಿ ಭೂಕಬಳಿಸುವ ಹುನ್ನಾರ ನೆಡೆಯುತ್ತಿದೆ.**

ಜನವಾದಿ ಮಹಿಳಾ ಸಂಘಟನೆಯ ನಿಯೋಗ ಆಸ್ಪತ್ರೆಗೆ ಭೇಟಿ ನೀಡಿದಾಗ ರೋಗಿಗಳು ನೀಡಿದ ವಿವರಗಳು ಆಹಾರ, ಚಿಕಿತ್ಸೆಗಳ ಸೌಲಭ್ಯಗಳು ಬಗ್ಗೆ ಸಂತೋಷ ವ್ಯಕ್ತಪಡಿಸಿದ್ದಾರೆ. ಹೊಸಕೋಟೆ, ದೊಡ್ಡಬಳ್ಳಾಪುರ, ಬೆಂಗಳೂರಿನ ಉತ್ತರ ತಾಲ್ಲೂಕಿನ ಎಲ್ಲ ಹಳ್ಳಿಗಳ ಬಡ ರೋಗಿಗಳಿಗೆ ಅನುಕೂಲವಾಗಿದೆ. ಈ ರೋಗಿಗಳ ಅಳಲು ಖಾಸಗೀ ಆಸ್ಪತ್ರೆಗೆ ಹೋದರೆ ರೋಗ ಕಂಡುಹಿಡಿಯದೆ ಹಣ ಸೂರೆ ಮಾಡಿ ರೋಗ ಉಲ್ಬಣವಾಗಿತ್ತು. 'ಈಗ ಇಲ್ಲಿ ಬಂದು ಚಿಕಿತ್ಸೆ ಪಡೆದು ನಾವು ಜೀವಂತವಾಗಿದ್ದೇವೆ ಇದನ್ನು ಬಿಟ್ಟರೆ ನಮಗೆ ಬೇರೆ ಯಾವ ದಾರಿ ಇದೆ. ನಾವು ಬಡವರ ಎಲ್ಲಿ ಹೋಗಬೇಕು. ತಾಯಿಗಿಂತ ಹೆಚ್ಚಾಗಿ ನಮ್ಮನ್ನು ನೋಡಿಕೊಳ್ಳುತ್ತಾರೆ. ಅದಕ್ಕಾಗಿ ನಮಗೆ ಆಸ್ಪತ್ರೆ ಬೇಕು' ಎಂದು ಅಳುತ್ತಾ ಗಂಗಾ ನುಡಿಯುತ್ತಾಳೆ. ಸುಂದರ್ ಎಂಬ ರೋಗಿಯ ಪರಿಸ್ಥಿತಿಯೇ ಬೇರೆ, ಇಡೀ ಆಸ್ತಿಯನ್ನೇ ಮಾರಿ ಆಪರೇಷನ್ ಮಾಡಿಸಿದರೂ(ಪ್ರತಿಷ್ಠಿತ ಖಾಸಗಿ ಆಸ್ಪತ್ರೆ) ಯಾವ ಕಾಯಿಲೆಯೆಂದೂ ಕಂಡುಹಿಡಿಯದೇ ಹೋದಾಗ ಈ ಆಸ್ಪತ್ರೆಗೆ ಬಂದು ಗುಣವಾಗಲೂ ಆಗದೆ ಮೂಳೆಯ ಮನುಷ್ಯನಾಗಿ ಬರೀ ಮಾತನಾಡುತ್ತಾ ಚಿಕಿತ್ಸೆ ಪಡೆಯುತ್ತಿದ್ದಾರೆ.



ದಿನಾಂಕ 1.3.04 ರಿಂದಲೇ ಯಾವುದೂ ಸೂಚನೆಯಿಲ್ಲದೆ ಹೊಸ ನೋಂದಣಿಯನ್ನು ಮಾಡಿಕೊಂಡಿಲ್ಲ. ಅಲ್ಲಿರುವ ಸ್ಟಾಫ್ ನರ್ಸುಗಳನ್ನು ಬೇರೆ ಬೇರೆ ಕಡೆಗೆ ವರ್ಗಾವಣೆ ಮಾಡಿರುತ್ತಾರೆ. ಕಡಿಮೆ ರೋಗವಿರುವವರನ್ನು ಮನೆಯಲ್ಲಿ ಚಿಕಿತ್ಸೆ ನೀಡುವುದು, ಉಲ್ಬಣಾವ್ಯವಸ್ಥೆಯಲ್ಲಿರುವ ರೋಗಿಗಳನ್ನು ಅವರ ಪ್ರದೇಶದಲ್ಲಿರುವ ಸರ್ಕಾರಿ ಆಸ್ಪತ್ರೆಗೆ ವರ್ಗಾಯಿಸುವುದು ಎಂಬ ಉದ್ದೇಶವನ್ನು ಹೊಂದಿದೆ.

ಜನವಾದಿ ಎಚ್ಚರಿಕೆ!

ಈ ಎಲ್ಲಾ ವಿಷಯ ತಿಳಿದು ಸರ್ಕಾರದ ಗಮನ ಸೆಳೆಯುವ ಉದ್ದೇಶದಿಂದ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಸಮಿತಿ ದಿನಾಂಕ 31.8.04 ರಂದು ಬೆಂಗಳೂರಿನ ಹಳೇ ಮದ್ರಾಸ್ ರಸ್ತೆಯ ರಾಷ್ಟ್ರೀಯ ಹೆದ್ದಾರಿಯನ್ನು ಅರ್ಧ ಗಂಟೆಗಳ ಕಾಲ ರಸ್ತೆ ತಡೆ ನಡೆಸಿದೆವು. ಈ ಸಭೆಯನ್ನು ಉದ್ದೇಶಿಸಿ ಜಿಲ್ಲಾ ಕಾರ್ಯದರ್ಶಿ ಗೌರಮ್ಮ ಹಾಗೂ ಉಪಾಧ್ಯಕ್ಷರಾದ ಯಶೋಧ ಮಾತನಾಡಿದರು ಸೋದರ ಸಂಘಟನೆಯ ರಮೇಶ್ ಮಾತನಾಡಿದರು. ರೋಗಿಗಳ ಪರವಾಗಿ ಬಾಬು ಎಂಬ ರೋಗಿಯು ತಮ್ಮ ಅಳಲನ್ನು ಸಭೆಗೆ ತಿಳಿಸಿದರು. ಈ ಕಾರ್ಯಕ್ರಮಕ್ಕೆ ಸುಮಾರು 200 ಜನ ಭಾಗವಹಿಸಿದ್ದರು. ಹಾಗೂ ಸಾರ್ವಜನಿಕರೂ ಸೇರಿ 250 ಜನ ಆ ಸ್ಥಳದಲ್ಲಿದ್ದು ಸರ್ಕಾರದ ಗಮನವನ್ನು ಸೆಳೆದರು. ಆ ಆಸ್ಪತ್ರೆಯ ಸೂಪರಿಂಟೆಂಡೆಂಟ್ ಹಾಗೂ ಅಧಿಕಾರಿಗಳು ಬಂದು ನಮ್ಮ ಮನವಿಯನ್ನು ಸ್ವೀಕರಿಸಿದರು. ಅವರು ಮಾತನಾಡಿ ಈ ಆಸ್ಪತ್ರೆ ಮುಚ್ಚುವುದಿಲ್ಲ ಆದರೆ ಎದೆರೋಗ, ಏಡ್ಸ್, ಮಾನಸಿಕ ಎಲ್ಲವನ್ನೂ ಸೇರಿಸಿ ಹೆಸರು ಬದಲಾಯಿಸುತ್ತೇವೆ ಎಂಬ ಕಾರಣವನ್ನು ನೀಡಿದ್ದಾರೆ. ಅದು ಎಷ್ಟು ನಿಜವೋ ತಿಳಿಯದು? ಮುಂದೆ ತೀವ್ರ ಹೋರಾಟ ಮಾಡುವುದಾಗಿ ಸಂಘಟನೆ ಎಚ್ಚರಿಕೆ ನೀಡಿದೆ.

ವರದಿ - **ಯಶೋಧ,** ಬೆಂಗಳೂರು

ಜಾಗತಿಕ ನಿರುದ್ಯೋಗ ಸಮಸ್ಯೆ - ಒಂದು ಸವಾಲು

ನಮ್ಮ ದೇಶದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಪೆಡಂಭೂತವಾಗಿ ಬೆಳೆಸಿರುವಂತೆಯೇ ಜಾಗತಿಕ ನಿರುದ್ಯೋಗಿ ಸಮಸ್ಯೆಯೂ ಸಹ ಒಂದು ಸವಾಲಾಗಿ ಪರಿಣಮಿಸಿದೆ. 2003 ನೇ ವರ್ಷದ ಪೂರ್ವಾರ್ಧದಲ್ಲಿ ಆರ್ಥಿಕತೆಯು ಸುಧಾರಿಸಿದ್ದರೂ ಸಹ ಜಾಗತಿಕ ನಿರುದ್ಯೋಗವು ಎಡೆಬಿಡದೆ ಮೇಲೇರಿತೆಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ವರದಿ ತಿಳಿಸಿದೆ.

2003 ನೇ ವರ್ಷದಲ್ಲಿ, ಯುವ ಜನತೆಯ ನಿರುದ್ಯೋಗ ಪ್ರಮಾಣ ತೀವ್ರವಾಗಿ ಏರಿದ್ದರೆ, ಪುರುಷರ ಮತ್ತು ಮಹಿಳೆಯರ ನಿರುದ್ಯೋಗ ಪ್ರಮಾಣ ದಾಖಲೆ ಮಟ್ಟವಾದ 185.9 ಮಿಲಿಯನ್ ಆಗಿತ್ತು. ಅಂತರರಾಷ್ಟ್ರಿಯ ಕಾರ್ಮಿಕ ಸಂಸ್ಥೆಯ 'ಜಾಗತಿಕ ಉದ್ಯೋಗ ರೂಪುರೇಷೆ 2004'ರ ಪ್ರಕಾರ 'ಬಡ ಕೆಲಸಗಾರ' ರ ಸಂಖ್ಯೆ 550 ಮಿಲಿಯನ್‌ನಷ್ಟು ಹೆಚ್ಚಾಗಿದೆ.

ಉದ್ಯೋಗ ಕಳೆದುಕೊಂಡವರ ಸಂಖ್ಯೆ ಮತ್ತು ಕೆಲಸ ಹುಡುಕುತ್ತಿರುವವರ ಸಂಖ್ಯೆ 185.9 ಮಿಲಿಯನ್ ಅಥವಾ ಒಟ್ಟರೆ ಕೆಲಸಗಾರರಲ್ಲಿ ಶೇ.6.2 ರಷ್ಟಾಗಿದೆ ಎಂದು ಉದ್ಯೋಗದ ಚಿತ್ರಣ ನೀಡುವ 2003ರ ವರದಿ ತಿಳಿಸಿದೆ. ಇದೊಂದು, ಹಿಂದೆಂದೂ ದಾಖಲಾಗಿರದಂತಹ ಅತಿ ಹೆಚ್ಚು ನಿರುದ್ಯೋಗ ಅಂಕಿಯಾಗಿದೆ. ಆದರೆ 2002 ನೇ ವರ್ಷದ 185.4 ಮಿಲಿಯನ್ ನಿರುದ್ಯೋಗ ಸಂಖ್ಯೆಗೆ ಹೋಲಿಸಿದರೆ ಸ್ವಲ್ಪವೇ ಹೆಚ್ಚಳವಾಗಿದೆ.

ವಿಶ್ವದ ಒಟ್ಟರೆ ನಿರುದ್ಯೋಗಿಗಳಲ್ಲಿ ಸುಮಾರು 108.1 ರಷ್ಟು ಪುರುಷರೇ ಇದ್ದಾರೆ. ಮಹಿಳೆಯರ ಪೈಕಿ, ಇದು ಕಡಿಮೆಯಾಗುತ್ತಿದ್ದು, 2002 ರಲ್ಲಿ 77.9 ಮಿಲಿಯನ್ ಇದ್ದದ್ದು 2003ರ ಹೊತ್ತಿಗೆ 77.8 ಮಿಲಿಯನ್‌ನಷ್ಟು ಇಳಿಮುಖವಾಗಿದೆ. ಅತ್ಯಂತ ತೀವ್ರತರವಾಗಿ ದುಷ್ಪರಿಣಾಮಕ್ಕೊಳಗಾದವರೆಂದರೆ ಶೇ. 14.4 ರಷ್ಟು ಅತಿ ಹೆಚ್ಚು ನಿರುದ್ಯೋಗ ದರವನ್ನು ಎದುರಿಸುತ್ತಿರುವ 15 ರಿಂದ24 ವರ್ಷ ವಯೋಮಾನದ ಯುವಜನರು. ಅನೌಪಚಾರಿಕ ಕ್ಷೇತ್ರಗಳು ಉತ್ಪಾದನೇತರ ವಲಯ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಸೃಷ್ಟಿಸುತ್ತವೆಯೆಂಬುದು ಸುಳ್ಳೆಂದು ಈ ವರದಿ ತಿಳಿಸುತ್ತದೆ.

ಕಡಿಮೆ ಆರ್ಥಿಕ ಬೆಳವಣಿಗೆ ದರವುಳ್ಳ ದೇಶಗಳ 'ಅನೌಪಚಾರಿಕ ವಲಯದ ಆರ್ಥಿಕತೆ' ಹೆಚ್ಚಾದರೂ ಸಹ 2003 ರಲ್ಲಿನ ಬಡ ಕೆಲಸಗಾರರ ಸಂಖ್ಯೆ (ದಿನವೊಂದಕ್ಕೆ 1 ಡಾಲರ್‌ಗೂ ಕಡಿಮೆ ಆದಾಯದ ಮೇಲೆ ಬದುಕುತ್ತಿರುವವರು) ಯಲ್ಲಿ ಏನೂ ಬದಲಾವಣೆಯಾಗದೆ, ಅದು 550 ಮಿಲಿಯನ್ ಆಗಿತ್ತು: ಕೈಗಾರಿಕಾಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರುವ ರಾಷ್ಟ್ರಗಳ ಆರ್ಥಿಕ ಪರಿಸ್ಥಿತಿಯು ನಿಧಾನ ಗತಿಯಲ್ಲಿ ಏರಿಕೆಯಾಗಿದ್ದು, ಏಷ್ಯಾದಲ್ಲಿ ಉದ್ಯೋಗಗಳ ಮೇಲೆ 'ಸಾರ್ಸ್' ರೋಗದ ದುಷ್ಪರಿಣಾಮ ಮತ್ತು ಶಸ್ತ್ರಾಸ್ತ್ರ ಘರ್ಷಣೆಯ ಪರಿಣಾಮಗಳು 2003ನೇ ವರ್ಷದಲ್ಲಿ ನಿರುದ್ಯೋಗ ಹೆಚ್ಚಳಕ್ಕೆ ಕಾರಣಗಳೆಂದು ವರದಿ ಗುರುತಿಸಿದೆ.

ನಿರುದ್ಯೋಗ ಪರಿಸ್ಥಿತಿಯನ್ನು ನಿಭಾಯಿಸಲು

ಪುಟ 11 ಕ್ಕೆ

ಈ ಸಂಗತಿ!!

ಕಾನೂನನ್ನು ಗಾಳಿಗೆ ತೂರುವ 'ವಾಲ್ ಮಾರ್ಟ್' ಚಿಲ್ಲರೆ ಮಳಿಗೆ

ಅಮೇರಿಕಾದ ಬಹುರಾಷ್ಟ್ರೀಯ ಕಂಪನಿಗಳು ಕಾರ್ಮಿಕ ವಿರೋಧಿ ನೀತಿಯನ್ನು ಅನುಸರಿಸುವುದರಲ್ಲಿ ಎತ್ತಿದ ಕೈ. ಸದ್ಯದ ಪರಿಸ್ಥಿತಿಯಲ್ಲಿ ಬಂಡವಾಳಶಾಹಿ ಬಹುರಾಷ್ಟ್ರೀಯ ಕಂಪನಿಗಳಿಗೆ ಅಮೇರಿಕಾ ಗರ್ಭಗುಡಿಯ ಸ್ಥಾನ ನಿರ್ವಹಿಸುತ್ತಿರುವುದು ಇದಕ್ಕೆ ಕಾರಣವೇನೋ. ಅಮೇರಿಕಾದ 'ವಾಲ್ ಮಾರ್ಟ್' ಕಂಪನಿಯು ಅತ್ಯಂತ ಬಹು ದೊಡ್ಡ ಚಿಲ್ಲರೆ ಮಳಿಗೆಗಳನ್ನು ಹೊಂದಿದ್ದು ಅತಿ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಪ್ರಖ್ಯಾತಿ ಗಳಿಸಿರುವಂತೆಯೇ ತನ್ನ ಕಾರ್ಮಿಕರನ್ನು ಅದು ನಡೆಸಿಕೊಳ್ಳುವ ರೀತಿಯಿಂದಾಗಿ ಅಷ್ಟೆ ಕುಖ್ಯಾತಿಯನ್ನು ಸಹ ಪಡೆದಿದೆ. ಅಧಿಕಾರಾವಧಿ ಕೆಲಸಕ್ಕೆ ಸಂಬಳ ಕೊಡದಿರುವುದು, ಆಗಾಗ್ಗೆ ಬಾಲಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸುವುದು, ಸಂಬಳ ಮತ್ತು ಬಡ್ತಿಯಲ್ಲಿ ಮಹಿಳಾ ನೌಕರರಿಗೆ ತಾರತಮ್ಯ, ಮುಂತಾದ ಸಂಗತಿಗಳು ವಾಲ್ ಮಾರ್ಟ್‌ನ ಧೂರ್ತ ಮುಖವನ್ನು ಬಹಳ ಹಿಂದಿನಿಂದಲೂ ಬೆಳಕಿಗೆ ತಂದಿವೆ. ಅಮೇರಿಕಾದ ಖಾಸಗಿ ಕಂಪನಿಗಳ ವಿರುದ್ಧ ಹಿಂದೆಂದೂ ಹೂಡಿರದ ದೊಡ್ಡ ಮೊತ್ತದ ಸಿವಿಲ್ ಮೊಕದ್ದಮೆಯನ್ನು ವಾಲ್ ಮಾರ್ಟ್ ಈಗ ಎದುರಿಸುತ್ತಿದೆ.

ಇತ್ತೀಚಿಗೆ ಅಮೇರಿಕಾದ ನ್ಯಾಯಾಧೀಶರು ಈ ಕಂಪನಿಯ ವಿರುದ್ಧದ ಲಿಂಗ ತಾರತಮ್ಯ ಕೇಸನ್ನು 'ಒಂದು ವರ್ಗ ಪ್ರಕ್ರಿಯೆ' ಯಾಗಿ ಮುಂದುವರಿಸಲು ತೀರ್ಮಾನಿಸಿದ್ದಾರೆ. ಅಂದರೆ 1998 ರಿಂದೀಚಿಗೆ ವಾಲ್‌ಮಾರ್ಟ್‌ನಲ್ಲಿ ಕೆಲಸ ಮಾಡಿರುವ 16 ಲಕ್ಷ ಮಹಿಳೆಯರು ಈ ಕೇಸಿನಲ್ಲಿ ಭಾಗೀದಾರರಾಗುತ್ತಾರೆ. ಈ ಕೇಸನ್ನು ಇತ್ಯರ್ಥ ಪಡಿಸಬೇಕಾದರೆ ವಾಲ್‌ಮಾರ್ಟ್ 'ಡಾಲರ್' 100 ಕೋಟಿಯಷ್ಟು ಪರಿಹಾರ ಕಕ್ಕಬೇಕಾಗಬಹುದೆಂದು ನ್ಯಾಯಾಂಗ ತಜ್ಞರು ಅಭಿಪ್ರಾಯಪಟ್ಟಿರುವರು. ಸಂಬಳ ಮತ್ತು ಬಡ್ತಿಯಲ್ಲಿ ಮಹಿಳೆಯರ ವಿರುದ್ಧ ವಾಲ್‌ಮಾರ್ಟ್ ತಾರತಮ್ಯ ಮಾಡಿದೆಯೆಂದೂ ಈ ಸಂಬಂಧ ದೂರು ಕೊಟ್ಟವರ ಮೇಲೆಲ್ಲಾ ದ್ವೇಷ ತೀರಿಸಿಕೊಂಡಿತೆಂದು 2001 ರ ಜೂನ್‌ನಲ್ಲಿ 6 ಮಹಿಳೆಯರು ವಾಲ್‌ಮಾರ್ಟ್ ವಿರುದ್ಧ ಕೇಸು ದಾಖಲಿಸಿದ್ದರು.

ಗುತ್ತಿಗೆದಾರರು ಅಕ್ರಮ ವಲಸೆಗಾರರನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತಾರೆಂದು ಪ್ರಜ್ಞಾಪೂರ್ವಕವಾಗಿ ತಿಳಿದಿದ್ದರೂ ಸಹ ಅದೇ ಗುತ್ತಿಗೆದಾರರನ್ನು ವಾಲ್ ಮಾರ್ಟ್ ಬಳಸಿಕೊಂಡಿತ್ತೇ ಎಂಬುದನ್ನು ಕಳೆದ ವರ್ಷ ಸರಣಿ ದಾಳಿಗಳನ್ನು ನಡೆಸಿದ ಸರ್ಕಾರಿ ವ್ಯಾಜ್ಯದಾರರು ಈಗ ಪರಿಶೀಲಿಸುತ್ತಿದ್ದಾರೆ. ಕಳೆದ ಸೆಪ್ಟೆಂಬರ್‌ನ ವಿಚಾರಣೆಯಲ್ಲಿ ಈ ಪ್ರಕ್ರಿಯೆಗೆ ತಡೆಯೊಡ್ಡಲು ವಾಲ್‌ಮಾರ್ಟ್ ಪ್ರಯತ್ನಿಸಿತ್ತು. ಅದರ ವಿವಿಧ ಮಳಿಗೆಗಳು ತಮ್ಮದೇ ಆದ ಪ್ರತ್ಯೇಕ ಅಧಿಕಾರ ಹೊಂದಿರುವುದರಿಂದ ಒಂದೊಂದೂ ಸಹ ಪ್ರತ್ಯೇಕ ವ್ಯಾಪಾರ ಸಂಸ್ಥೆಯಾಗಿ ಪ್ರತ್ಯೇಕ ಆಡಳಿತ ಮಂಡಳಿಯ ವಿಧಾನದಲ್ಲಿ ಕೆಲಸ ಮಾಡುತ್ತವೆಂದು ವಾಲ್‌ಮಾರ್ಟ್ ವಾದಿಸಿತ್ತು. ಆದ್ದರಿಂದ ತನ್ನ ಯಾವುದೇ ಒಂದು ಮಳಿಗೆ ತಪ್ಪು ಎಸಗಿದರೆ ತಾನು ಜವಾಬುದಾರನಲ್ಲವೆಂಬುದು ಅದರ (ಕು)ತರ್ಕ.ಆದರೆ ನ್ಯಾಯಾದೀಶರಾದ ಜೆಂಕಿನ್ಸ್‌ರು ಈ ವಾದವನ್ನು ತಿರಸ್ಕರಿಸಿದರು. 'ಸಂಬಳ ಮತ್ತು ಬಡ್ತಿ ವಿಚಾರದಲ್ಲಿ ವಾಲ್‌ಮಾರ್ಟ್ ಅನುಸರಿಸುವ ತಾರತಮ್ಯ ಧೋರಣೆಗಳು ಎಲ್ಲಾ ಪ್ರತಿವಾದಿಗಳನ್ನು ಸಾಮಾನ್ಯ ರೀತಿಯಲ್ಲಿ ತೊಂದರೆಗೊಳಪಡಿಸುತ್ತವೆ' ಎಂಬ ತೀರ್ಮಾನಕ್ಕೆ ಬರಲು ಬಲವಾದ ಸಾಕ್ಷ್ಯಾಧಾರಗಳು ಸಾಬೀತುಪಡಿಸಿವೆ ಎಂದು ನ್ಯಾಯಾಧೀಶರು ತೀರ್ಪಿತ್ತಿದ್ದಾರೆ.

ಇಂಗ್ಲೆಂಡಿನ ಆರೋಗ್ಯ ಇಲಾಖೆಯಲ್ಲಿ ಲಿಂಗ ತಾರತಮ್ಯ ಮತ್ತು ಜನಾಂಗೀಯ ಭೇದ

ಆರ್ಥಿಕವಾಗಿ ಬಲಿಷ್ಟರಾಗಿರುವ ಅಲ್ಪಸಂಖ್ಯಾತ ಪಟ್ಟ ಭದ್ರ ಹಿತಾಸಕ್ತಿಗಳು ಆರ್ಥಿಕವಾಗಿ ದುರ್ಬಲರಾಗಿರುವ ಬಹುಸಂಖ್ಯಾತ ಜನರನ್ನು ದೇವರು, ಧರ್ಮ, ಜಾತಿವಾದ, ಲಿಂಗ ಮತ್ತು ಜನಾಂಗೀಯವಾದಗಳ ಹಗಲುವೇಷ ಧರಿಸಿ ಶೋಷಣೆಗೊಳಪಡಿಸುವುದು ಬಂಡವಾಳಶಾಹಿ ವ್ಯವಸ್ಥೆಯ ಪ್ರಧಾನ ಚಿಹ್ನೆ. ಕೈಗಾರಿಕೀಕರಣದಲ್ಲಿ ಮುಂಚೂಣಿಯಲ್ಲಿರುವ ರಾಷ್ಟ್ರವೆಂಬ ಹೆಗ್ಗಳಿಕೆಯನ್ನು ಇಂಗ್ಲೆಂಡ್ ಹೊಂದಿದ್ದರೂ ಸಹ ಒಟ್ಟಾರೆ ಜನರ ಸಾಮಾಜಿಕ ಮತ್ತು ಆರ್ಥಿಕ ಜೀವನ ಗುಣಮಟ್ಟವು ಆ ದೇಶದ ಅಭಿವೃದ್ಧಿಯ ಮುಖ್ಯವಾಹಿನಿಯೊಂದಿಗೆ ಚಲಿಸುವಲ್ಲಿ ವಿಫಲವಾಗಿರುವ ಸಂಗತಿಯನ್ನು ಆಗಾಗ್ಗೆ ಆ ದೇಶದಲ್ಲಿ ವರದಿಯಾಗುವ ಘಟನೆಗಳು ಮತ್ತೆ ಮತ್ತೆ ಸ್ಪಷ್ಟಪಡಿಸುತ್ತವೆ.

ಹೊರದೇಶಗಳ ವೈದ್ಯರು ಮತ್ತು ನರ್ಸ್‌ಗಳ ಮೇಲೆ ಅತಿ ಹೆಚ್ಚಾಗಿ ಅವಲಂಬಿತವಾಗಿರುವ ಬ್ರಿಟನ್‌ನ ರಾಷ್ಟ್ರೀಯ ಆರೋಗ್ಯ ಸೇವಾಸಂಸ್ಥೆ ಉದ್ದಗಲಕ್ಕೆ ಹರಡಿರುವ ಜನಾಂಗೀಯ ಭೇದ ಮತ್ತು ಲಿಂಗ ತಾರತಮ್ಯದಿಂದಾಗಿ ಬಿಳಿತೊಗಲಿನ ಜನರ ಪ್ರತ್ಯೇಕ ಸಂಘ ಮಾರ್ಪಾಡಾಗುವ ಅಪಾಯವಿದೆಯೆಂದು ವರದಿಯೊಂದು ತಿಳಿಸಿದೆ. ಈ ಬಗ್ಗೆ ಅಧ್ಯಯನ ನಡೆಸಿ ಬೆಚ್ಚಿರುವ ಬ್ರಿಟಿಷ್ ವೈದ್ಯಕೀಯ ಸಂಸ್ಥೆಯು ರಾಷ್ಟ್ರೀಯ ಆರೋಗ್ಯ ಸೇವಾಸಂಸ್ಥೆಯಲ್ಲಿ ಜನಾಂಗೀಯ ಭೇದ ಮತ್ತು ಕಾಮುಕ ಮನೋಭಾವನೆಗಳನ್ನು ತೊಡೆದು ಹಾಕಲು 'ಶೂನ್ಯ ಸಹನ ಶಕ್ತಿ' (zero tolerance)ಗಾಗಿ ಕರೆ ನೀಡಿದೆ. ಲಿಂಗ, ಜನಾಂಗೀಯತೆ, ಅಂಗವಿಕಲತೆ ಅಥವಾ ಕಾಮುಕತೆಗಳಿಗೆ ಒತ್ತುಕೊಡುತ್ತಿರುವುದರಿಂದ ತಮ್ಮ ದೈನಂದಿನ ಜೀವನದಲ್ಲಿ ವೈದ್ಯರುಗಳು ಅನೇಕ ಅಡಚಣೆಗಳನ್ನು ಎದುರಿಸಬೇಕಾಗಿದೆ. ಸಂದರ್ಶಿಸಲ್ಪಟ್ಟ ವೈದ್ಯರಿಂದ ತಿಳಿದುಬಂದುದೇನೆಂದರೆ ರಾಷ್ಟ್ರೀಯ ಆರೋಗ್ಯ ಸೇವಾ ಸಂಸ್ಥೆಯಲ್ಲಿ ಜನಾಂಗ ಭೇದ ಮತ್ತು ಲಿಂಗ ತಾರತಮ್ಯ ಧೋರಣೆಯನ್ನು ತಡೆಗಟ್ಟಲು ಅಗತ್ಯ ಕ್ರಮವನ್ನು ಕೈಗೊಂಡಿಲ್ಲ ಮತ್ತು ಸಂಸ್ಥೆಯು ಸಮಾನಾವಕಾಶಗಳ ಪ್ರತಿಪಾದಕನೆಂದು ಬೊಗಳೆ ಬಿಟ್ಟರೂ 'ಸಾಂಸ್ಥಿಕವಾಗಿ ಜನಾಂಗ ಭೇದ' ವನ್ನುಂಟು ಮಾಡುತ್ತದೆನ್ನುವ ಆಪಾದನೆ ಇದೆ.

ಶೇ.70 ರಷ್ಟು ಮಂದಿ ಸಮಾಲೋಚಕ ವೈದ್ಯರು ಬಿಳಿಯರು ಮತ್ತು ಪುರುಷರಾಗಿದ್ದರೆ ಶೇ.60 ಕೆಳ ಶ್ರೇಣಿ ವೈದ್ಯರು ಬ್ರಿಟನ್‌ನ ಹೊರಗೆ ಮತ್ತು ಯುರೋಪ್‌ನಿಂದ ವಿದ್ಯಾರ್ಹತೆ ಪಡೆದವರಾಗಿದ್ದಾರೆ. ಈ ಕೆಳಶ್ರೇಣಿ ವೈದ್ಯರು ಬ್ರಿಟನ್‌ಯೇತರರಾಗಿದ್ದು ಇವರಿಗೆ ಬಡ್ತಿಯನ್ನು ನಿರಾಕರಿಸಲಾಗಿದೆ ಮತ್ತು ತಮ್ಮ ಬಿಳಿಯ ಸಹೋದ್ಯೋಗಿಗಳಿಗಿಂತ ಹೆಚ್ಚಾಗಿ ರೋಗಿಗಳಿಂದ ಮತ್ತು ಅಧಿಕಾರಶಾಹಿಯಿಂದ ಹೆಚ್ಚು ತೊಂದರೆಗೊಳಗಾಗುತ್ತಾರೆ.

ಮಹಿಳಾ ವೈದ್ಯಕೀಯ ವೃತ್ತಿಪರರು ಲಿಂಗಭೇದದಿಂದಾಗಿ ಹಲವು ಅಡಚಣೆಗಳನ್ನು ಎದುರಿಸಬೇಕಾಗಿದೆಯೆಂದು ದೂರು ನೀಡಿದ್ದಾರೆ. ಪುರುಷರಿಗಿಂತಲೂ ಹೆಚ್ಚು ಮಹಳೆಯರು ವೈದ್ಯಕೀಯ ಶಾಲೆಗಳಿಗೆ ಸೇರುತ್ತಿದ್ದರೂ ಮತ್ತು 2001 ನೇ ವರ್ಷದ ವೇಳೆಗೆ ಪುರುಷರಿಗಿಂತ ಹೆಚ್ಚು ಮಹಿಳಾ ವೈದ್ಯರ ಸೃಷ್ಟಿಯಾಗುತ್ತದೆಂಬ ಸಂಗತಿಯ ನಡುವೆಯೂ 'ಕಾಮುಕ ಕೆಲಸದ ವಾತಾವರಣ' ಹರಡುತ್ತಿದೆಯೆಂದು ವರದಿ ತಿಳಿಸಿದೆ. 'ವೈದ್ಯಕೀಯದಲ್ಲಿ ಮಹಿಳೆಯರಿಗೆ ಸಂಪೂರ್ಣ ವಿರೋಧಿಯಾದ ಪುರುಷ ಸಮಾಲೋಚಕನೊಂದಿಗೆ ನಾನೊಮ್ಮೆ ಕೆಲಸ ಮಾಡಬೇಕಿತ್ತು. ಮನೆಯಲ್ಲಿದ್ದು ಮಕ್ಕಳನ್ನು ಹಡೆಯುವ ಕೆಲಸ ಮಾಡಿಕೊಂಡಿರಿ ಎಂದು ವೈದ್ಯಕೀಯ ವಿದ್ಯಾರ್ಥಿನಿಯರಿಗೆ ಅವನು ಒತ್ತಿ ಒತ್ತಿ ಹೇಳುತ್ತಿದ್ದ' ಎಂದು ಒಬ್ಬ ಮಹಿಳಾ ವೈದ್ಯೆ ವರದಿಯಲ್ಲಿ ತಿಳಿಸಿದ್ದಾರೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳೆಂದು ಬೀಗುತ್ತಿರುವ ಬಂಡವಾಳಶಾಹಿ ರಾಷ್ಟ್ರಗಳು ಮಹಿಳೆಯ ಅಭಿವೃದ್ಧಿಯನ್ನು ಯಾವ ಮಟ್ಟದಲ್ಲಿ ಮಾಡಿದ್ದಾರೆನ್ನುವುದಕ್ಕೆ ಇದೊಂದು ಸಾಕ್ಷಿಯಷ್ಟೆ.

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ಆಸ್ಪತ್ರೆ ವಾತಾವರಣ ರೂಪಿಸಲು ನಾಗರೀಕ ಸನ್ನದು

ಆರೋಗ್ಯ ಸೇವೆಗಳಿಗೆ ಪಡೆದ ಹಣಕ್ಕೆ ರಸೀದಿ ಕೊಡಬೇಕು.

ದೂರುಗಳನ್ನು ಸ್ವೀಕರಿಸಿ ತನಿಖೆ ಮಾಡಿ ಕಂಡ ಪರಿಹಾರವನ್ನು ಒಬ್ಬ ವೈದ್ಯಕೀಯ ಅಧಿಕಾರಿ ನಿಗದಿಪಡಿಸಿದ ಸಮಯಕ್ಕೆ ಉತ್ತರಿಸಬೇಕು (ಒಳರೋಗಿಗಳ ದೂರುಗಳಿಗೆ ಅದೇ ದಿವಸ, ಹೊರ ರೋಗಿಗಳ ದೂರುಗಳಿಗೆ ಮರು ದಿವಸ).

ಅಸಮಾಧಾನ ವಿಚಾರಣೆ

ವೈದ್ಯಕೀಯ ಸೇವೆಗಳ ಬಗ್ಗೆ ಜನರಿಗಿದ್ದ ಅಸಮಾಧಾನವನ್ನು ಗುರುತಿಸುವುದು

ಅಸಮಾಧಾನಕ್ಕೆ ತುರ್ತು ಪರಿಹಾರ ಅಗತ್ಯವಿದ್ದರೆ ವೈದ್ಯಕೀಯ ಅಧಿಕಾರಿಯೇ ಅದನ್ನು ಈಡೇರಿಸುವುದು.

ರೋಗಿಗಳಿಗೆ ಅಸಮಾಧಾನ ವುಂಟಾದಲ್ಲಿ ಅವರ ದೂರುಗಳನ್ನು ಸ್ವೀಕರಿಸಬೇಕು ಹಾಗೂ ಅಗತ್ಯವಿದ್ದರೆ ಅದೇ ಆಸ್ಪತ್ರೆಯಲ್ಲಿ ಎರಡನೇ ಅಭಿಪ್ರಾಯ ದೊರಕಿಸಿಕೊಡಬೇಕು.

ತನಿಖಾ ದೂರುಗಳ ಸಮಿತಿಯನ್ನು ರಚಿಸಿ, ಆಸ್ಪತ್ರೆಯ ಒಳಗೆ ಪರಿಹರಿಸಲಾಗದ ತೊಂದರೆಯನ್ನು ಹೊರಗಡೆ ಪರಿಹರಿಸಲು ಪ್ರಯತ್ನಿಸಬೇಕು.

ಯಾವ ಹೆಜ್ಜೆಯನ್ನು ತೆಗೆದುಕೊಳ್ಳುವುದು

ಆಸ್ಪತ್ರೆ ಸಿಬ್ಬಂದಿ, ಆರೋಗ್ಯ ಇಲಾಖೆ ಹಾಗೂ ಜನರ ಪ್ರತಿನಿಧಿಗಳು ಈ ಸನ್ನದಿನ ಉಪಯುಕ್ತತೆಯನ್ನು ಚರ್ಚಿಸಿ ನಂತರ ಜಾರಿಗೆ ತರಬೇಕು.

ಶಿಫಾರಸು ಮಾಡಿದ ಗುಣಮಟ್ಟವನ್ನು ತೀರ್ಮಾನಿಸುವಾಗ, ಒಂದು ಪ್ರತ್ಯೇಕ ಸಮಿತಿ ಜನರ ಪ್ರತಿಕ್ರಿಯೆಯನ್ನು ಗುರುತಿಸಿ ಚರ್ಚಿಸಬೇಕು.

ಸನ್ನದು ದೊರಕುತ್ತಿದೆ ಎಂಬ ವಿಷಯವನ್ನು ಆಸ್ಪತ್ರೆಯ ಸೌಲಭ್ಯ ಉಪಯೋಗಿಸುವ ಎಲ್ಲರಿಗೂ ತಿಳಿಸಬೇಕು.

ಸನ್ನದನ್ನು ಅಗತ್ಯತೆಗೆ ತಕ್ಕಂತೆ ತಯಾರಿಸಿ, ಜನರ ಗಮನಕ್ಕೆ ಬರುವಂತೆ ಪ್ರಯತ್ನ ಮಾಡಬೇಕು.

ಉಪಯೋಗಿಸುವವರ ಜವಾಬ್ದಾರಿಗಳು

ಆಸ್ಪತ್ರೆ ಉಪಯೋಗಿಸುವವರು ಸನ್ನದಿನಲ್ಲಿ ಏನನ್ನು ಹೇಳಲಾಗಿದೆಯೋ ಅದನ್ನು ಅನುಸರಿಸಬೇಕು.

ಸನ್ನದಿನಲ್ಲಿ ಹೇಳುವುದಕ್ಕಿಂತ ಹೆಚ್ಚು ಸೇವೆಯನ್ನು ಅಪೇಕ್ಷಿಸಬಾರದು, ಹಾಗೆ ಮಾಡಿದಲ್ಲಿ ಇತರರಿಗೆ ತೊಂದರೆಯಾಗುವ ಸಂಭವವಿದೆ.

ಆಸ್ಪತ್ರೆ ಸಿಬ್ಬಂದಿಗಳ ಹೇಳಿಕೆಯನ್ನು ಪ್ರಾಮಾಣಿಕವಾಗಿ ಅನುಸರಿಸಬೇಕು. ಅಸಮಾಧಾನವಿದ್ದಲ್ಲಿ ಕೂಡಲೇ ವ್ಯಕ್ತಪಡಿಸಲು ಕ್ರಮ ತೆಗೆದುಕೊಳ್ಳಬೇಕು.

ಉಪಯೋಗಿಸುವವರ ಪ್ರತಿಕ್ರಿಯೆ

ಆಸ್ಪತ್ರೆ ಸೇವೆಗಳನ್ನು ಉಪಯೋಗಿಸುವವರು, ತಮ್ಮ ಅನಿಸಿಕೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಲ್ಲಿ ಅದನ್ನು ವಿಶ್ಲೇಷಿಸಿ ಸೇವೆಗಳನ್ನು ಸುಧಾರಿಸಬೇಕಾಗುತ್ತದೆ. ನಿರ್ವಹಣೆ ಪರಿಶೋಧನೆ (Audit) ಹಾಗೂ ಸನ್ನದಿನ ಪುನರ್ವಿಮರ್ಶೆ ಕೈಗೊಳ್ಳಬೇಕು

ವರ್ಷಕ್ಕೊಮ್ಮೆ ಅಥವಾ ಎರಡು ವರ್ಷಕ್ಕೊಮ್ಮೆ ಸನ್ನದು ಪುನರ್ವಿಮರ್ಶೆಯಾಗಬೇಕು ಈ ಪರಿಶೋಧನೆ, ಪ್ರತಿಕ್ರಿಯೆ, ಗುಣಮಟ್ಟ ಇತ್ಯಾದಿಗಳನ್ನು ಪುನರ್ವಿಮರ್ಶೆ ಮಾಡುತ್ತದೆ.

ಚಿಕಿತ್ಸೆಯ ಗುಣಮಟ್ಟವನ್ನು ಹೆಚ್ಚಿಸುವುದು, ಖರ್ಚನ್ನು ಕಡಿಮೆ ಮಾಡುವುದು ಹಾಗೂ ಸಾಮರ್ಥ್ಯವನ್ನು ಹೆಚ್ಚಿಸಲು ಅಗತ್ಯವಿದೆ.

ಪ್ರತಿ ಐದು ವರ್ಷಕ್ಕೊಮ್ಮೆ ಸನ್ನದನ್ನು ಸಂಪೂರ್ಣವಾಗಿ ಪುನರ್ವಿಮರ್ಶೆ ಮಾಡಬೇಕು.

ಈ ನಾಗರೀಕ ಸನ್ನದನ್ನು "ಯಾರು ಅನುಸರಿಸುತ್ತಾರೆ" ಎಂದು ರೋಗಿಗಳು ಹೇಳಿದರೆ, "ಈ ಸನ್ನದನ್ನು ಯಾರು ಕೇಳುತ್ತಾರೆ" ಎಂದು ವೈದ್ಯರೇ ಹೇಳುತ್ತಾರೆ. ಸೌಹಾರ್ದಯುತವಾದ ಆಸ್ಪತ್ರೆ ವಾತಾವರಣ ಕಲ್ಪಿಸಲು ಕೇವಲ ಪ್ರಾಮಾಣಿಕ ವೈದ್ಯ, ದಕ್ಷತೆಯಿಂದ ಕೆಲಸ ಮಾಡಿದರೆ ಸಾಲದು ನಾಗರೀಕ ಸನ್ನದನ್ನು ಎಲ್ಲರೂ ಅನುಸರಿಸಬೇಕಾಗುತ್ತದೆ.

ಚಿಲಿ ಸರ್ವಾಧಿಕಾರಿ ಪಿನೋಶೆಗೆ ಶಿಕ್ಷೆ

ಸೆಪ್ಟೆಂಬರ್ 11 - ಈಗ ನ್ಯೂಯಾರ್ಕ್‌ನ ಶ್ವ ವಾಣಿಜ್ಯ ಕೇಂದ್ರದ ಅವಳಿ ಕಟ್ಟಡಗಳ ಮೇಲೆ ೋತ್ಪಾದಕ ದಾಳಿಗೆ ಇನ್ನೊಂದು ಹೆಸರಾಗಿ ಟ್ಟಿದೆ. ಆದರೆ ಯಾರಿಗೂ ಇನ್ನೊಂದು ಸೆಪ್ಟೆಂಬರ್ ೧ ರ ನೆನಪಾಗುವುದಿಲ್ಲ. ಇದು 31 ವರ್ಷ ಹಿಂದಿನ ಟನೆ ಎಂಬ ಕಾರಣಕ್ಕೆ ಮಾತ್ರವಲ್ಲ. ಜಗತ್ತಿನ ಮ್ರಾಜ್ಯಶಾಹಿ ಸುದ್ದಿ ಮಾಧ್ಯಂಗಳು ಮತ್ತು ದರ ಬಾಲಬಡುಕರು ಈ ಘಟನೆ ಅವರ ಪ್ಟೆಂಬರ್ 11 ರಷ್ಟೇ ಭೀಕರ ದುರಂತ ಎಂದು ಪ್ಪಲು ತಯಾರಿಲ್ಲ.

1973 ರಲ್ಲಿ ಸೆಪ್ಟೆಂಬರ್ 11 ರಂದು ಚಿಲಿಯಲ್ಲಿ ಗತ್ತಿನ ಪ್ರಪ್ರಥಮ ಚುನಾಯಿತ ಅಧ್ಯಕ್ಷ ...ಯವರ ನಪ್ರಿಯ ಸರ್ಕಾರವನ್ನು ಭೀಕರ ಭಯೋತ್ಪಾದಕ ತ್ಯದಿಂದ ಉರುಳಿಸಲಾಯಿತು. ಈ ಭಯೋತ್ಪಾದಕ ಕೃತ್ಯವನ್ನು ಎಸಗಿದ್ದು ಚಿಲಿಯ ಜನರಲ್ ಪಿನೋಶೆ, ಅಮೇರಿಕನ್ ಸರ್ಕಾರದ-ಸಿಐಎಯ ಪೂರ್ಣ-ಮಿಲಿಟರಿ-ಆರ್ಥಿಕ ರಾಜಕೀಯ ಬೆಂಬಲದೊಂದಿಗೆ ಈ ಸುದ್ದಿ ಮಾಧ್ಯಮಗಳು ಈ ಘಟನೆಯನ್ನು 'ಭಯೋತ್ಪಾದನೆ' ಎಂದೂ ಕರೆಯುವುದಿಲ್ಲ, ಒಪ್ಪುವುದಿಲ್ಲ. ಅಮರೀಕನ್ ಸರ್ಕಾರದ 'ಭಯೋತ್ಪಾದಕ' ಪಾತ್ರವನ್ನು ಒಪ್ಪುವ ಮಾತು ದೂರವೇ ಉಳಿಯಿತು.

ಇನ್ನೊಂದು ಸೆಪ್ಟೆಂಬರ್ 11

ಆದರೆ ಚಿಲಿಯ ಸರ್ಕಾರಿ ಅಧಿಕೃತ ಭಯೋತ್ಪಾದಕತೆ ಬಗ್ಗೆ, ಅಲ್ಲಿನ ಪ್ರಜಾಸತ್ತಾತ್ಮಕ ಚಳುವಳಿ, ಯಾರೂ ಎಂದೂ ಮರೆಯದಂತೆ ಮಾಡಿದೆ. ಪಿನೋಶಿಯ ಮಿಲಿಟರಿ-ಫ್ಯಾಸಿಸ್ಟ್ ಸರ್ವಾಧಿಕಾರದ ಬರ್ಬರ ಆಡಳಿತದಲ್ಲಿ ನಾಶವಾದ ಸಾವಿರಾರು ರಾಜಕೀಯ ಕಾರ್ಯಕರ್ತರ, ಸಾಮಾನ್ಯ ಜನರ ಪರವಾಗಿ ಹೋರಾಟ ಈ 31 ವರ್ಷಗಳಿಂದ ಸಾಗಿದೆ. ಈ ಭಯೋತ್ಪಾದಕ ಕೃತ್ಯದ ಅಧ್ಯಯನ ಪಿನೋಶಿ ಮತ್ತು ಆದಿಪುರುಷ ಅಮೇರಿಕನ್ ಆಗಿನ ವಿದೇಶಾಂಗ ಮಂತ್ರಿ ಕಿಸಿಂಜರ್ ಇದಕ್ಕೆ ಶಿಕ್ಷೆ ಆಗಬೇಕು ಎಂದು ಅವಿರತ ಹೋರಾಟ ನಡೆಯುತ್ತಾ ಬಂದಿದೆ. ಕೊನೆಗೂ ಈ ಹೋರಾಟಕ್ಕೆ ಜಯ ಸಿಗುವ ನಿರೀಕ್ಷೆ ಇದೆ. ಅಧಿಕಾರದಿಂದ..... ಮೇಲೆ ತನ್ನ ಬಜಾವಿಗೆ ಪಿನೋಶಿ ಮತ್ತು ಆತನ ಅಮೇರಿಕದ ಧಣಿಗಳು ಮಾಡಿದ ಎಲ್ಲಾ ಪ್ರಯತ್ನಗಳು ವಿಫಲವಾಗಿದೆ.

ಪಿನೋಶಿ ತಾನು ಅಧ್ಯಕ್ಷಪದವಿಯಿಂದ ಕೆಳಗಿಳಿಯುವವರೆಗೆ ಯಾವುದೇ ಅಪರಾಧ-ಆರೋಪದಿಂದ ಅಜೀವ ವಿಮುಕ್ತಿಗೆ ಕಾನೂನೇ ಮಾಡಿದ್ದ. ಆದರೆ ಅಂತರ್ರಾಷ್ಟ್ರೀಯ ಕಾನೂನಿನ ಪ್ರಕಾರ ಆತನ ಮೇಲೆ ಕಾನೂನು ಕ್ರಮ ಜರುಗಿಸಲಾಯಿತು. ಸ್ಪೈನಿನ ರಾಜಧಾನಿ ಮ್ಯಾಡ್ರಿಡ್‌ನಲ್ಲಿ ಕೇಸು ಹಾಕಲಾಯಿತು. ಆತ ಬ್ರಿಟನ್‌ಗೆ ... ಬಂಧಿಸಲಾಯಿತು. ಇಳಿ ವಯಸ್ಸು ಮತ್ತು ಅನಾರೋಗ್ಯದಿಂದ ಕೇಸು ವಿಚಾರಣೆ ಭರಿಸುವ ಶಕ್ತಿ ಪಿನೋಶೆ ಇಲ್ಲ ಎಂಬ ಕೊನೆಯ ನೆಪವನ್ನು ಈಗ ಕೋರ್ಟು ತಳ್ಳಿ ಹಾಕಿದೆ. ಇದರಿಂದ ಆತನ ಶಿಕ್ಷೆಗೆ ... ಅಡ್ಡಿ ಸುಗಮವಾಗಿದೆ. ಆತನ ಎಲ್ಲಾ ಆಸ್ತಿ, ಇತರ ದೇಶಗಳಲ್ಲಿ ಇಟ್ಟಿರುವ ಹಣವನ್ನು ಸ್ಥಗಿತಗೊಳಿಸಬೇಕು ಎಂಬ ಆಜ್ಞೆ ಆಗಿದೆ. ಅದನ್ನು ಉಲ್ಲಂಘಿಸಿದ ಅಮೇರಿಕ ಬ್ಯಾಂಕ್ ... ಮೇಲೆ ಆಗಲೇ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಚಿಲಿಯ ಪ್ರಜಾಸತ್ತಾತ್ಮಕ ಶಕ್ತಿಗಳ ಈ ವಿಜಯ, ದಕ್ಷಿಣ ಅಮರೀಕದ ಮತ್ತು ಇತರೆಡೆಯ ಎಲ್ಲಾ ಸಿಐಎ ... ಸರ್ವಾಧಿಕಾರಿಗಳಿಗೆ ಪಾಠವಾಗಬೇಕು. 31 ವರ್ಷ ತಡವಾಗಿಯಾದರೂ ನ್ಯಾಯಕ್ಕೆ ಜಯ ಸಾಧ್ಯ ಎಂದು ತೋರಿಸಿದೆ.

ಜಕಾರ್ತ ಸ್ಫೋಟ : ಭಯೋತ್ಪಾದನೆ ಉಲ್ಬಣ

ಸೆಪ್ಟೆಂಬರ್ 11-2001 ರಂದು ಅಧ್ಯಕ್ಷ ಬುಶ್ ಗತ್ತಿನ ಮೇಲೆ ಹರಿಯಬಿಟ್ಟ 'ಭಯೋತ್ಪಾದನೆ ಮೇಲೆ ಯುದ್ಧ' ವಿಫಲವಾಗಿದೆ, ಉಲ್ಬಣವಾಗಿದೆ. ಬುಶ್‌ರ ಔಷಧಿ ರೋಗಕ್ಕಿಂತ ಭಯಾನಕವಾದದ್ದು ಎಂದು ಈಗ ಎಲ್ಲರಿಗೂ ಗೊತ್ತಿರುವ ವಿಚಾರ. ಅದನ್ನು ಒಪ್ಪದಿರುವರಿಗೆ ದಿನೇ ಪುರಾವೆ ಸಿಗುತ್ತದೆ.

ಇರಾಕ್‌ನಿಂದ ಇಂಡೋನೇಶ್ಯಾದವರೆಗೆ ಎಲ್ಲಾ ದೇಶಗಳಲ್ಲಿ ಭಯೋತ್ಪಾದಕತೆ ಗಟ್ಟಿಗೊಂಡಿದೆ. ಜಕಾರ್ತಾದಲ್ಲಿ ಆಸ್ಟ್ರೇಲಿಯಾದ ರಾಯಭಾರ ಕಛೇರಿಯಲ್ಲಿ ನಡೆದ ಭಾರಿ ಸ್ಫೋಟ ಇದಕ್ಕೆ ಇನ್ನೊಂದು ಪುರಾವೆ. ಇಂಡೋನೇಷ್ಯಾದಲ್ಲಿ ದುರ್ಬಲವಾಗಿದ್ದ ಇಸ್ಲಾಮಿಕ್ ಮೂಲಭೂತವಾದ ಪ್ರಬಲವಾಗಿದೆ. ಈ ಸ್ಫೋಟ ಇವರ ಕೃತ್ಯವಾಗಿದ್ದು, ಇಂಡೋನೇಶ್ಯಾ ಮತ್ತು ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಚುನಾವಣೆಗಳ ಮೇಲೆ ಪರಿಣಾಮ ಬೀರಲು ಎಸಗಲಾಗಿದೆ ಎಂದು ವೀಕ್ಷಕರು ಅಭಿಪ್ರಾಯಪಡುತ್ತಾರೆ.

ಆಸ್ಟ್ರೇಲಿಯಾದಲ್ಲಿ ಚುನಾವಣೆ ನಡೆಯಲಿದ್ದು, ಅಲ್ಲಿನ ಇರಾಕ್ ಯುದ್ಧಪರ ಜಾನ್ ಡೊನಾರ್ಡ್‌ರ ಪಕ್ಷ ಸೇರಿಸುವುದು ಉದ್ದೇಶ ಎನ್ನಲಾಗಿದೆ. ಸ್ಪೆ ನ್‌ನಲ್ಲಿ ಇರಾಕ್ ಯುದ್ಧಪರ ಸರ್ಕಾರದ ವಿರುದ್ಧ ಇಂತಹುದೇ ಭಯೋತ್ಪಾದಕ ಕೃತ್ಯ ಚುನಾವಣೆ ಪರಿಣಾಮವನ್ನೇ ಬದಲಿಸಿತ್ತು ಎಂದು ಇಲ್ಲಿ ಜ್ಞಾಪಿಸಿಕೊಳ್ಳಬಹುದು.

ಇಂಡೋನೇಶ್ಯಾದಲ್ಲೂ ಸೆಪ್ಟೆಂಬರ್ 20 ರಂದು ಚುನಾವಣೆ ನಡೆಯಲಿದ್ದು, ಚುನಾಯಿತ ಅಧ್ಯಕ್ಷರು ಅಮೇರಿಕ-ಪರ ನಿಲುವು ತೆಗೆದುಕೊಳ್ಳದಂತೆ ಇದು ಎಚ್ಚರಿಕೆಯೂ ಇರಬಹುದು. ಬುಶ್‌ರ ಭಯೋತ್ಪಾದನೆ ಮೇಲೆ ಯುದ್ಧ' ಭಯೋತ್ಪಾದನೆಯ ಚಕ್ರವನ್ನು ಜಗತ್ತಿನ ಮೇಲೆ ಹರಿಯಬಿಟ್ಟಿದೆ. ಇದು ಯಾವುದೇ ರೀತಿಯಲ್ಲಿ ಜನ-ಪರ ಅಲ್ಲ ಕೃತ್ಯ ಅಲ್ಲ ಎಂದೂ ನೆನಪಿಸಿಕೊಳ್ಳಬಹುದು.

ಹಾಂಗ್‌ಕಾಂಗ್‌ನಲ್ಲಿ ಚೀನಾ-ಪರ ಶಕ್ತಿಗಳಿಗೆ ಜಯ

ಹಾಂಗ್‌ಕಾಂಗ್‌ನಲ್ಲಿ ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ಚೀನಾ-ಪರ ಶಕ್ತಿಗಳು ಪುನಃ ಜಯಗಳಿಸಿವೆ. ಚುನಾವಣೆಯ ಮೊದಲು 'ಪ್ರಜಾಪ್ರಭುತ್ವ-ಪರ' ಶಕ್ತಿಗಳ ಎಂದು ತಮ್ಮನ್ನು ಕರೆದುಕೊಳ್ಳುವ ಪಕ್ಷಗಳು ಬಹುಮತ ಪಡೆಯಲು ವಿಫಲವಾಗಿದೆ. ಆ ಪಕ್ಷಗಳು ಮತ್ತು ಅವರ ಪಾಶ್ಚಿಮಾತ್ಯ ಬೆಂಬಲಿಗರು ತಮ್ಮ ಸೋಲಿಗೆ ಕೊಡುವ ಸರ್ಕಾರದ ಕಾರಣಗಳು, ಅವರ ಜನಬೆಂಬಲ ಕೊರತೆಯನ್ನು ಮುಚ್ಚಲಾರವು. ಸಂಕುಚಿತ ಅನುಪಾತ ಚುನಾವಣಾವ್ಯವಸ್ಥೆ ಚೀನಾ-ಪರ ಶಕ್ತಿಗಳಿಗೆ ಅನುಕೂಲಕರವಾಗಿದೆ ಎಂಬ ಅವರ ವ್ಯಾಖ್ಯಾನ ಹಾಸ್ಯಾಸ್ಪದ.

ಚೀನಾ ಕೇಂದ್ರ ಸರ್ಕಾರದ ಈ ಶಕ್ತಿಗಳು ತಳೆದ ಸಂಘರ್ಷದ ಧೋರಣೆ ಹಾಂಕಾಂಗ್‌ನ ಹಿತಾಸಕ್ತಿಗೆ ಒಳ್ಳೆಯದಲ್ಲ. ಇದು ಹಾಂಕಾಂಗ್‌ನ ಬಹುಸಂಖ್ಯಾತರ ಅಭಿಪ್ರಾಯ ಎಂಬುದನ್ನು ಅವರಿಗೆ ಒಪ್ಪಲು ಸಾಧ್ಯವಾಗುತ್ತಿಲ್ಲ.



ಹಾಂಕಾಂಗ್‌ನಲ್ಲಿರುವುದು ನಿರ್ದೇಶಿತ ಪ್ರಜಾಪ್ರಭುತ್ವ' ಎನ್ನುವ ಪಾಶ್ಚಿಮಾತ್ಯರ ಕುಹಕದ ಮಾತುಗಳನ್ನು ಹಾಂಕಾಂಗ್ ಜನ ತಿರಸ್ಕರಿಸಿದ್ದಾರೆ ಎಂಬುದು ಸ್ಪಷ್ಟ.

ಇರಾಕ್ ಪರಿಸ್ಥಿತಿ ಅಮೇರಿಕದ ಸೈನ್ಯದ ಹತೋಟಿಯಿಂದ ಆಚೆಗೆ ಹೋಗಿದೆ

ಇರಾಕ್‌ನಲ್ಲಿ ಕೈಗೊಂಬೆ ಸರ್ಕಾರ ಸ್ಥಾಪಿಸಿ ಮರ್ಯಾದೆಯಿಂದ ಮನೆಗೆ ಹೋಗುವ ಸಾಧ್ಯತೆ ಇಲ್ಲ. ಸಂಪೂರ್ಣ ಅರಾಜಕತೆ, ತೀರಾ ಅವಮಾನಕಾರಿ ನಿರ್ಗಮನ ಅಥವಾ ಸತತ ಗೆರಿಲ್ಲಾ ಯುದ್ಧ -ಇವು ಮಾತ್ರ ಪರ್ಯಾಯಗಳು ಎಂದು ಅಮೆರಿಕದ ಗೂಢಚಾರ ಸಂಸ್ಥೆಯ ವಿಶ್ಲೇಷಣೆ ಹೇಳಿದೆ.

47 ಕ್ಕೂ ಹೆಚ್ಚು ಜನರನ್ನು ಬಲಿತೆಗೆದುಕೊಂಡ ಅತಿದೊಡ್ಡ ಸ್ಫೋಟ ಮತ್ತು ಇತರ ನರಣಿ ಗೆರಿಲ್ಲಾ ಧಾಳಿಗಳು ಚಿತ್ರವನ್ನು ಪೂರ್ಣ ಬದಲಾಯಿಸಿದೆ. ಇರಾಕ್‌ನಲ್ಲಿ ನಿರ್ಣಾಯಕ ಬದಲಾವಣೆ ಆಗಿದೆ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.



ಜಾಗತಿಕ ನಿರುದ್ಯೋಗ ಸಮಸ್ಯೆ - ಒಂದು ಸವಾಲು

ಪುಟ 9 ರಿಂದ

ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಹಲವು ಪರಿಹಾರೋಪಾಯಗಳನ್ನು ಸೂಚಿಸಿದೆ. ಪ್ರಥಮ ಸಲಹೆಯೆಂದರೆ ಬಡ ಜನರ ಪರವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಏಕೆಂದರೆ ಶಿಕ್ಷಣ, ಆರೋಗ್ಯ ಮತ್ತು ಆಗಾಗ್ಗೆ ಯೋಗ್ಯತಾ ಸಾಮರ್ಥ್ಯಗಳ ಕೊರತೆಯಿಂದಾಗಿ ತಮ್ಮ ಶಕ್ತಿಯನ್ನುಪಯೋಗಿಸಿಕೊಂಡು ತಮ್ಮ ಮತ್ತು ತಮ್ಮ ಕುಟುಂಬಗಳನ್ನು ಬಡತನದಿಂದ ಮೇಲೆತ್ತುವಲ್ಲಿ ಬಡಜನರು ಸೋಲುತ್ತಾರೆ. ಎರಡನೆ ಸಲಹೆಯೆಂದರೆ ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿಯನ್ನು ಉತ್ತೇಜಿಸುವುದು. ಏಕೆಂದರೆ ಉದ್ಯೋಗರಹಿತ ಅಭಿವೃದ್ಧಿಗೇ ಮಾರಕ.


ಯಾವುದಾದರೊಂದು ಕಾಲಘಟ್ಟದಲ್ಲಿ ಇಳಿಮುಖ ಬೇಡಿಕೆಯು ಆರ್ಥಿಕ ಬೆಳವಣೀಗೆಯನ್ನು ಮಿತಗೊಳಿಸುವುದರಿಂದ ಯಾವುದೇ ರಾಷ್ಟ್ರಕ್ಕೆ ದೀರ್ಘಾವಧಿಯಲ್ಲಿ ನಿರುದ್ಯೋಗ ಹೆಚ್ಚಳವನ್ನು ತಡೆದುಕೊಳ್ಳುವ ಸಾಮರ್ಥ್ಯವಿರುವುದಿಲ್ಲ. ಹೀಗೆ, ಹೆಚ್ಚು ಉದ್ಯೋಗ ಸೃಷ್ಟಿಯಿಂದ ಬಡತನ ನಾಶವಾಗುವುದಲ್ಲದೆ, ಅದೇ ವೇಳೆಯಲ್ಲಿ, ಅಭಿವೃದ್ಧಿಗೆ ಬೇಕಾದ ವಾತಾವರಣವನ್ನು ಸೃಷ್ಟಿಸುತ್ತದೆ.

ಜಗತ್ತಿನ ಮುಂದಿರುವ ಸವಾಲೆಂದರೆ ವಿಶ್ವ ಕಾರ್ಮಿಕ ಮಾರುಕಟ್ಟೆಗೆ ಹೊಸ ಪ್ರವೇಶ ಪಡೆದಿರುವ 514 ಮಿಲಿಯನ್ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ನೀಡುವುದು ಮತ್ತು 2015 ನೇ ಇಸವಿಯೊಳಗೆ ಬಡಕೆಲಸಗಾರರ ಸಂಖ್ಯೆಯನ್ನು ಮಿತಗೊಳಿಸುವುದು.

2004ರ ನಂತರದ ವರ್ಷಗಳಲ್ಲಿ ಒಟ್ಟಾರೆ ದೇಶೀಯ ಉತ್ಪನ್ನ (ಜಿ.ಡಿ.ಪಿ) ದ ಬೆಳವಣಿಗೆ ಎಷ್ಟು ಪರಿಣಾಮಕಾರಿಯಾಗಿ ಉತ್ಪಾದನಾ ಶಕ್ತಿಯಾಗಿ ಮತ್ತು ಉದ್ಯೋಗ ಬೆಳವಣಿಗೆಯಾಗಿ ಪರಿವರ್ತನೆಯಾಗುತ್ತದೆ ಎಂಬುದು ಉದ್ಯೋಗ ಯೋಜನೆಗಳ ಮತ್ತು ಆರ್ಥಿಕತೆಯ ಕಾರ್ಯಕ್ರಮಗಳ ಮೇಲೆ ಅವಲಂಭಿತವಾಗಿದೆ. ಆದುದರಿಂದ ಆರ್ಥಿಕ ಕಾರ್ಯಕ್ರಮಗಳು ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಅನುವಾಗಬೇಕೆಂದು ಈ ವರದಿ ತಿಳಿಸುತ್ತದೆ.

ಪುಟಗಳಿಂದ

ವಿನಾಯಕ ದಾಮೋದರ ಸಾವರ್‌ಕರ್ ಸಂಘ ಪರಿವಾರದವರಿಗೆ 'ವೀರ ಸಾವರ್‌ಕರ್' ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ. 'ಮಹಾನ್ ರಾಷ್ಟ್ರೀಯತಾವಾದಿ'. ಆದರೆ ನಿಜ ಸಂಗತಿ ಏನು? ಖ್ಯಾತ ತಜ್ಞ ಎ.ಜಿ.ನೂರಾನಿ ಯವರ ಇತ್ತೀಚಿನ ಸಂಶೋಧನಾತ್ಮಕ ಪುಸ್ತಕದ ಪ್ರಕಾರ ಸ್ವಾತಂತ್ರ್ಯ ಹೋರಾಟಗಾರನಾಗಿ ಸಾವರ್‌ಕರ್ ಪಾತ್ರ ತೀರಾ ಚಿಕ್ಕದು. ಲಂಡನ್‌ನಲ್ಲಿ ಬ್ರಿಟಿಷ್-ವಿರೋಧಿ ಸಂಘಟನೆಯ ಸಂಖ್ಯೆ ಸದಸ್ಯನಾಗಿದ್ದದ್ದು ಅಷ್ಟೇ. ಆದರೆ ಆಮೇಲೆ ಬಂಧಿತರಾಗಿ ಅರ್ಜಿಸಲ್ಲಿಸಿ, ಅಂಗಲಾಚಿ ಜೈಲಿನಿಂದ ಹೊರಬಂದ ಮೇಲೆ ಯಾವುದೇ ರೀತಿಯ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲಿಲ್ಲ. ಮಾತ್ರವಲ್ಲ ಭಾರತ ಧರ್ಮದ ಆಧಾರದ ಮೇಲೆ ಇಬ್ಭಾಗವಾಗಬೇಕು ಎಂದು 'ಎರಡು-ದೇಶ'ಗಳ ಸಿದ್ಧಾಂತ ಮುಂದಿಟ್ಟ ವ್ಯಕ್ತಿ. ರಾಷ್ಟ್ರಪಿತ ಗಾಂಧೀಜಿ ಹತ್ಯಾಕಾಂಡದಲ್ಲಿ ಆರೋಪಿಯಾಗಿದ್ದು ತಾಂತ್ರಿಕ ಕಾರಣದಿಂದ ಮಾತ್ರ ಖುಲಾಸೆಯಾದ ವ್ಯಕ್ತಿ. ಇಂತಹ ವ್ಯಕ್ತಿಯ ಭಾವಚಿತ್ರ ಪಾರ್ಲಿಮೆಂಟಿನಲ್ಲಿರಬೇಕೆ? ಈತನನ್ನು ಪೂಜಿಸಬೇಕೆ? ಮಹಾದೇಶಭಕ್ತನೆಂದು ಹಾಡಿ ಹೊಗಳಬೇಕೆ?



ಬಿಡುಗಡೆಗೆ ಬ್ರಿಟಿಷರನ್ನು ಅಂಗಲಾಚಿದ

ಸಾವರ್‌ಕರ್

ಸ್ವಾತಂತ್ರ್ಯ ಹೋರಾಟಗಾರನೇ ?

ಜನರಿಂದ ಲೋಕಸಭಾ ಚುನಾವಣೆಯಲ್ಲಿ 'ಮಂಗಳಾರತಿ' ಮಾಡಿಸಿಕೊಂಡು ನೂರು ದಿನಗಳು ಕಳೆದಿದೆ. ಆದರೂ ಬಿಜೆಪಿ ದುಷ್ಟಕೂಟದವರಿಗೆ ಅದನ್ನು ಒಪ್ಪಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕಳಂಕಿತ ಮಂತ್ರಿಗಳು ಮತ್ತು 'ವೀರ ಸಾವರ್‌ಕರ್' ಗೆ 'ಅಪಮಾನ' ತೆಗೆದುಕೊಂಡು ಪಾರ್ಲಿಮೆಂಟು 'ಬಂದ್' ಮಾಡುವ ಗದ್ದಲ ಮಾಡಿದರು. ಎರಡರಲ್ಲೂ 'ಹಿಂದುತ್ವವಾದಿ' ರಾಜಕೀಯದ ದಿವಾಳಿಕೋರತನ ಮುಚ್ಚಲು 'ರಾಷ್ಟ್ರೀಯತಾವಾದ ಸೋಗು ಹಾಕಿದ್ದಾರೆ. 'ಹಿಂದುತ್ವವಾದಿ'ಗಳಲ್ಲಿ ಒಬ್ಬ ಸ್ವಾತಂತ್ರ್ಯ ಹೋರಾಟಗಾರನ 'ಆವಿಷ್ಕಾರ' ಮಾಡಿದ್ದಾರೆ. ಆ 'ವೀರ' ಸಾವರ್‌ಕರ್ ಎಷ್ಟು ವೀರ? ಎಷ್ಟರ ಮಟ್ಟಿಗೆ ಸ್ವಾತಂತ್ರ್ಯ ಹೋರಾಟಗಾರ - ಎಂಬುದರ ಬಗ್ಗೆ ಸತ್ಯವನ್ನು ವ್ಯಾಪಕವಾಗಿ ಬಯಲು ಮಾಡಿಸುವ ಸವಾಲು ಸ್ವೀಕರಿಸಬೇಕಾಗಿದೆ.

ಚಾಪೇಕರ್ ಸೋದರರ ಸ್ಫೂರ್ತಿ

ಸಾವರ್‌ಕರ್ ಮಹಾರಾಷ್ಟ್ರದ ನಾಸಕ್ ಜಿಲ್ಲೆಯ ಬಾಗ್ಪುರದಲ್ಲಿ ಜನಿಸಿದರು. 1898 ರಲ್ಲಿ ಪುಣೆಯಲ್ಲಿ ಚಾಫೇಕರ್ ಸೋದರರನ್ನು ಗಲ್ಲಿಗೇರಿಸಲಾಯಿತು. ಅವರು ಬ್ರಿಟಿಷ್ ಅಧಿಕಾರಿಯೊಬ್ಬನನ್ನು ಕೊಲೆ ಮಾಡಿದ್ದರು. ಚಾಫೇಕರ ಸೋದರರ ಮರಣದಂಡನೆಯಿಂದ ಪ್ರಭಾವಿತನಾದ, ಹದಿಹರೆಯದ ಸಾವರ್‌ಕರ್ ಬ್ರಿಟಿಷರ ವಿರುದ್ಧ ಸಶಸ್ತ್ರ ಹೋರಾಟ ನಡೆಸಬೇಕು ಎಂದು ನಿರ್ಧರಿಸಿದ. ಪುಣೆಯ ಫರ್ಗುಸನ್ ಕಾಲೇಜಿನಲ್ಲಿ ಓದುವಾಗ 'ಅಭಿನವ ಭಾರತ ಸೊಸೈಟಿ' ಸ್ಥಾಪಿಸಿದ. 1906 ರಲ್ಲಿ ಬ್ರಿಟನ್‌ಗೆ ಕಾನೂನು ಓದಲು ಸಾವರ್‌ಕರ್ ಲಂಡನ್‌ಗೆ ತೆರಳಿದರು. 'ಫ್ರೀ ಇಂಡಿಯನ್ ಸೊಸೈಟಿ' ಸದಸ್ಯರಾಗಿದ್ದರು. ಈ ಸಮಯದಲ್ಲಿ (1909) ಈ ಸೊಸೈಟಿಯ ಮದನ್‌ಲಾಲ್ ದಿಂಗ್ರಾ, ವಿಲಿಯಂ ಕರ್ಜನ್ ಎಂಬ ಬ್ರಿಟಿಷ್ ಅಧಿಕಾರಿಯ ಕೊಲೆ ಮಾಡಿದ.ಅದೇ ವರ್ಷ ನಾಸಿಕ್ ಕಲೆಕ್ಟರ್‌ನ ಕೊಲೆಯೂ ಆಯಿತ. ಈ ಎರಡೂ ಕೊಲೆಗಳ ಹಿಂದೆ ಸಾವರಕರ್ ಇದ್ದಿದ್ದು ಎಂಬ ಬಗ್ಗೆ ಮಾಹಿತಿ ದೊರೆತಿದೆ. ಆದರೆ ಕರ್ಜನ್ ಕೊಲೆಯ ನಂತರ ಪೊಲೀಸರು ಸೊಸೈಟಿ ಸದಸ್ಯರ ಹಿಂದೆ ಬಿದ್ದಾಗ, ಸಾವರಕರ್ ಭಾರತಕ್ಕೆ ಓಡಿಬಂದರು. ಅವರನ್ನು ಫ್ರಾನ್ಸ್‌ನ ಮೊರ್ಸೆಲಿನ್‌ನಲ್ಲಿ ಬಂಧಿಸಿ, ಭಾರತಕ್ಕೆ ಕಳಿಸಿ ಅಂಡಮಾನ್‌ನ ಜೈಲಿನಲ್ಲಿಡಲಾಯಿತು. ಇದು ನಡೆದದ್ದು 1910 ರಲ್ಲಿ.

> **'ಇಂಗ್ಲೀಷ್ ಸರ್ಕಾರಕ್ಕೆ ವಿಧೇಯನಾಗಿರುತ್ತೇನೆ'**
>
> "..... ಭಾರತ ಮತ್ತು ಮನುಕುಲದ ಒಳಿತು ಬಯಸುವ ಯಾವನೂ ಈ ಮುಳ್ಳಿನ ಹಾದಿಯಲ್ಲಿ ಕುರುಡಾಗಿ ಸಾಗುವುದಿಲ್ಲ. 1906-07 ರ ಭಾರತದಲ್ಲಿದ್ದ ನಿರಾಶಾದಾಯಕ ಸ್ಥಿತಿಯಲ್ಲಿ ಶಾಂತಿ ಮತ್ತು ಪ್ರಗತಿಯ ಹಾದಿಯಿಂದ ನಾವು ದಾರಿ ತಪ್ಪಿದೆವು. ಆದ್ದರಿಂದ ಸರ್ಕಾರ ದೊಡ್ಡ ಮನಸ್ಸು ಮಾಡಿ, ದಯೆ ತೋರಿಸಿ ನನ್ನನ್ನು ಬಿಡುಗಡೆ ಮಾಡಿದರೆ, ಇಂಗ್ಲೀಷ್ ಸರ್ಕಾರಕ್ಕೆ ನಾನು ಯಾವತ್ತೂ ವಿಧೇಯನಾಗಿರುತ್ತೇನೆ. ಇಂಗ್ಲೀಷ್ ಸರ್ಕಾರದ ಅಡಿಯಲ್ಲಿ ಶಾಂತಿ ಮತ್ತು ಸಂವೈಧಾನಿಕ ಪ್ರಗತಿಯ ಪ್ರತಿಪಾದಕನಾಗಿ ಅದರ ಮುಂದುವರಿಕೆಗೆ ದುಡಿಯುತ್ತೇನೆ... ನನಗೆ ಸರಿಯಾದ ವಿಚಾರಣೆ ಮತ್ತು ನ್ಯಾಯಯುತ ಶಿಕ್ಷೆಯಾಗಿದೆ. ಹಿಂದೆ ನಾನು ಅನುಸರಿಸಿದ ಹಿಂಸಾತ್ಮಕ ಕ್ರಮಗಳನ್ನು ಬಿಟ್ಟುಬಿಡುತ್ತೇನೆ. (ಬ್ರಿಟಿಷ್) ಕಾನೂನು ಮತ್ತು ಸಂವಿಧಾನವನ್ನು ಎತ್ತಿ ಹಿಡಿಯಲು ನಾನು ಶಕ್ತಿ ಮೀರಿ ದುಡಿಯುತ್ತೇನೆ....."
>
> - ವಿ.ಡಿ.ಸಾವರ್‌ಕರ್ ಬ್ರಿಟಿಷ್ ಅಧಿಕಾರಿಗಳಿಗೆ ಕೊಟ್ಟ ಅರ್ಜಿ(1913)

ಸಾವರ್‌ಕರ್ 'ವೀರತ್ವ' ಖಾಲಿಯಾದಾಗ!

ಅಂಡಮಾನ್ ಜೈಲಿನಲ್ಲಿ ರಾಜಕೀಯ ಕೈದಿಗಳ ಜೀವನ ದುರ್ಭರವಾಗಿತ್ತು. ಆದರೆ ಸಾವರ್‌ಕರ್ ಹಿಂದೆಯೂ ನಂತರವೂ ಹಲವು ಸ್ವಾತಂತ್ರ್ಯ ಹೋರಾಟಗಾರರು ಈ ನರಕಸದೃಶ್ಯ ಪರಿಸ್ಥಿತಿಯಲ್ಲೂ ಧೃತಿಗೆಡಲಿಲ್ಲ. ಬ್ರಿಟಿಷರಿಗೆ ಶರಣಾಗಲಿಲ್ಲ. ಜೀವನಾದ್ಯಂತ ತಮ್ಮ ಜೀವನ ಸವೆಸಿ, ಸತ್ತವರೂ ಇದ್ದಾರೆ. ಆದರೆ ಸಾವರ್‌ಕರ್ 'ವೀರತ್ವ' ಒಂದೇ ವರ್ಷದಲ್ಲಿ ಖಾಲಿಯಾಯಿತು. 1911 ರಲ್ಲೇ ಸಾವರ್‌ಕರ್ ಬ್ರಿಟಿಷ ಸರ್ಕಾರಕ್ಕೆ ತಮ್ಮನ್ನು ಜೈಲಿನಿಂದ ಬಿಡುಗಡೆ ಮಾಡುವಂತೆ ಕೋರಿಕೆ ಅರ್ಜಿ ಬರೆದರಂತೆ. 1913 ರಲ್ಲಿ ಇನ್ನೊಮ್ಮೆ ಕೋರಿಕೆ ಸಲ್ಲಿಸಿದರಂತೆ. ಈ ಕೋರಿಕೆಅರ್ಜಿ ಓದಿದವರು, ಅದರಲ್ಲಿನ ದೈನ್ಯತೆ ನೋಡಿದವರು ಯಾರೂ ಸಾವರ್‌ಕರರನ್ನು 'ವೀರ' ಎಂದು ಕರೆಯಲಾರರು.

ಸಾವರಕರ್ 'ವೀರತ್ವ' ಖಾಲಿಯಾದ ಬಗ್ಗೆ ಪುರಾವೆಯಾದ ಈ ಅರ್ಜಿಯನ್ನು ಆರ್.ಸಿ.ಮುಜುಂದಾರರ ಪುಸ್ತಕದಲ್ಲಿ ದಾಖಲಾಗಿದೆ. ಈ ಅರ್ಜಿಯ ಪಡಿಯಚ್ಚನ್ನು 'ಫ್ರಂಟ್‌ಲೈನ್' 1995 ರ ಏಪ್ರಿಲ್ ಸಂಚಿಕೆಯಲ್ಲಿ ಮುದ್ರಿಸಿದೆ. ಎ.ಜಿ.ನೂರಾನಿಯವರ ಸಂಶೋಧನಾತ್ಮಕ ಪುಸ್ತಕ 'ಸಾವರ್‌ಕರ್ ಮತ್ತು ಹಿಂದುತ್ವ- ದಿ ಗೋಡ್ಸೆ ಕನೆಕ್ಷನ್' ದಲ್ಲೂ ಇದನ್ನು ವಿವರವಾಗಿ ದಾಖಲಿಸಿದ್ದಾರೆ. ಸಾವರ್‌ಕರ್ ಅರ್ಜಿಯ ಎರಡು ಅತ್ಯಂತ ಹೇಯವಾದ ಎರಡು ಪ್ಯಾರಾಗಳನ್ನು ಬಾಕ್ಸ್‌ನಲ್ಲಿ ಇದೆ ('ಇಂಗ್ಲೀಷ್ ಸರ್ಕಾರಕ್ಕೆ ವಿಧೇಯನಾಗಿರುತ್ತೇನೆ'). ಈ ನಡುವೆ ಸಾವರಕರ್‌ನ್ನು ಬೇಷರತ್ತು ಬಿಡುಗಡೆ ಮಾಡಬೇಕೆಂದು ಕಾಂಗ್ರೆಸ್ ಒತ್ತಾಯಿಸುತ್ತಿತ್ತು. ಇದಕ್ಕೆ ಕಾಯುವುದಕ್ಕೂ ಸಾವರಕರ್‌ಗೆ ಪುರುಸೊತ್ತು ಇರಲಿಲ್ಲ. ಸಾವರಕರ್ ಬಿಡುಗಡೆಗೆ ಬ್ರಿಟಿಷರು ಅವಮಾನಕಾರಿ ಷರತ್ತುಗಳನ್ನು ಹಾಕಿದ್ದರು. ರತ್ನಗಿರಿ ಜಿಲ್ಲೆಯಲ್ಲೇ ಇರಬೇಕು, ಜಿಲ್ಲೆ ಬಿಟ್ಟು ಹೋಗಲು ಸರ್ಕಾರದ ಅನುಮತಿ ತೆಗೆದುಕೊಳ್ಳಬೇಕು, ಖಾಸಗಿಯಾಗಿ, ಸಾರ್ವಜನಿಕವಾಗಿ ಯಾವುದೇ ರೀತಿಯ ಚಟುವಟಿಕೆಯಲ್ಲಿ ಪಾಲುಗೊಳ್ಳಬಾರದು. ಸಾವರಕರ್ ಈ ಷರತ್ತುಗಳನ್ನು ಚಾಚೂ ತಪ್ಪದೆ ಪಾಲಿಸಿದರು. ಇಂತಹವರನ್ನು 'ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ' ಎಂದು ಗುರುತಿಸುವವರು ಕುರುಡರು ಅಷ್ಟೇ.

ಹಿಂದುತ್ವವಾದಿ ರಾಜಕೀಯ

ಸಾವರಕರ್ ಬ್ರಿಟಿಷ್-ವಿರೋಧಿ ಸ್ವಾತಂತ್ರ್ಯ ಹೋರಾಟಗಳಲ್ಲಿ ಭಾಗವಹಿಸಲಿಲ್ಲ. ಮಾತ್ರವಲ್ಲ ಧರ್ಮದ ಆಧಾರದ ಮೇಲೆ ದೇಶವನ್ನು ಒಡೆದು, ತಮ್ಮ ಆಳ್ವಿಕೆ ಮುಂದುವರೆಸುವ ಬ್ರಿಟಿಷ್ ರಾಜಕೀಯ ದಾಳವಾಗಿ ದುಡಿದರು. ಅವರು ಹಿಂದೂ ಮಹಾಸಭಾ ಸೇರಿ ತಮ್ಮ ಬ್ರಿಟಿಷ್ - ಪರ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿದರು. ಈಗಿನ ಸಂಘ ಪರಿವಾರದ 'ಹಿಂದುತ್ವ' ಸಿದ್ಧಾಂತದ ಮೂಲ ಪ್ರತಿಪಾದಕ ಸಾವರಕರ್. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಹಲವು ತೊರೆಗಳಿದ್ದವು. ಆದರೆ ಅವೆಲ್ಲವೂ ಬ್ರಿಟಿಷರು ತೊಲಗಬೇಕು, ಅದಕ್ಕಾಗಿ ಐಕ್ಯ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದವು. ಸಾವರಕರರ ಹಿಂದೂಮಹಾಸಭಾ ಮತ್ತು ಹೆಗಡೆವಾರ್ ಸ್ಥಾಪಿಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘ ಮಾತ್ರ ಇದರಿಂದ ಹೊರಗುಳಿದವು. ಕಾಂಗ್ರೆಸ್, ಕಮ್ಯುನಿಸ್ಟರು ಸಂಘಟಿಸಿದ ಎಲ್ಲಾ ದೊಡ್ಡ ರಾಜಕೀಯ ಚಳುವಳಿಗಳನ್ನು ವಿರೋಧಿಸಿದವು. ಇಂತಹ ಹೋರಾಟಗಳ ಸಮಯದಲ್ಲಿ ಧಾರ್ಮಿಕ ಆಧಾರದ ಮೇಲೆ ಹೋರಾಟ ಮುರಿಯುವ ಹಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದರು. ಕೋಮುಗಲಭೆ ನಡೆಸುವ ಬ್ರಿಟಿಷರ ಪಿತೂರಿಯಲ್ಲಿ ಸಹಕರಿಸುತ್ತಿದ್ದರು. ಹಿಂದೂರಾಷ್ಟ್ರ-ಮುಸ್ಲಿಂ ರಾಷ್ಟ್ರ ಎಂಬ ಎರಡು ರಾಷ್ಟ್ರ ಸಿದ್ಧಾಂತ ಮುಂದಿಟ್ಟವರು - ಸಾವರ್‌ಕರ್. 'ಕ್ವಿಟ್ ಇಂಡಿಯಾ' ಚಳುವಳಿ ಜತೆ ಯಾವುದೇ ರೀತಿಯಲ್ಲಿ ಸಹಕರಿಸಬಾರದು ಎಂದು ತನ್ನ ಸದಸ್ಯರಿಗೆ ಹೇಳಿತ್ತು.

ಗಾಂಧೀಜಿ ಹತ್ಯೆ ಪಿತೂರಿಯಲ್ಲಿ ಸಕ್ರಿಯ ಪಾತ್ರ

ಗಾಂಧೀಜಿ ಹತ್ಯೆಯ ಪಿತೂರಿಯಲ್ಲಿ ಸಾವರ್‌ಕರ್ ಸಕ್ರಿಯ ಪಾತ್ರ ವಹಿಸಿದರು. ಗೋಡ್ಸೆ ಜತೆ ಸಾವರ್‌ಕರ್ ನಿಕಟ ಸಂಪರ್ಕ ಇತ್ತು. ಅವರು ಪಿತೂರಿಯ ಭಾಗವಾಗಿದ್ದರು ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಆರೋಪಿ ಪಟ್ಟಿಯಲ್ಲಿ ಸಾವರ್‌ಕರ್ ಇದ್ದರು. ಬರಿಯ ತಾಂತ್ರಿಕ ಕಾರಣಗಳಿಂದಾಗಿ ಬಿಡುಗಡೆ ಆದರು. ನೂರಾನಿಯವರ ಪುಸ್ತಕ 'ಸಾವರಕರ್ ಮತ್ತು ಹಿಂದೂತ್ವ' ದಲ್ಲಿ ಅವುಗಳನ್ನು ವಿವರವಾಗಿ ದಾಖಲಿಸಿದ್ದಾರೆ.

ಸಾವರ್‌ಕರ್ ಮೊದಲ ದಿನಗಳಲ್ಲಿ ಬ್ರಿಟಿಷ್-ವಿರೋಧಿ ವೈಯಕ್ತಿಕ ಭಯೋತ್ಪಾದನೆಯಲ್ಲಿ ನಂಬಿಕೆಯಿದ್ದ ಸಂಘಟನೆಯ ಸದಸ್ಯರಾಗಿದ್ದದ್ದು ಮಾತ್ರ ಅವರ 'ಹೋರಾಟ'ದ ಅವಧಿ. ಅಲ್ಲಿಯೂ ಮುಂದೆ ನಿಂತು ಹೋರಾಡಿದವರಲ್ಲ. 'ವೀರತ್ವ' ತೋರಿದ್ದೂ ಇಲ್ಲ. ಒಂದೇ ವರ್ಷದಲ್ಲಿ ಜೈಲಿನಲ್ಲಿ 'ವೀರತ್ವ' ಕರಗಿ, ಅವಮಾನಕಾರಿ ಷರತ್ತುಗಳ ಮೇಲೆ ಬಿಡುಗಡೆ ಆಗಿ, ಬ್ರಿಟಿಷ್-ಪರ ರಾಜಕೀಯದಲ್ಲಿ ತೊಡಗಿ, ದೇಶ ವಿಭಜಿಸುವ ಸಿದ್ಧಾಂತ ಪ್ರತಿಪಾದಿಸಿದ, ರಾಷ್ಟ್ರ ಪಿತನ ಹತ್ಯೆಯ ಪಿತೂರಿಯಲ್ಲಿ ಸಕ್ರಿಯ ಪಾತ್ರವಹಿಸಿದ - ಸಾವರ್‌ಕರ್ 'ಸ್ವಾತಂತ್ರ್ಯ ಹೋರಾಟಗಾರ' ಎನ್ನುವುದಕ್ಕಿಂತ ದೊಡ್ಡ ರಾಷ್ಟ್ರದ್ರೋಹ ಬೇರೆ ಇರಲಾರದು.

> **ತಿರಂಗ ಯಾತ್ರೆ**
>
> ಆ ಯಾತ್ರೆ ಈ ಯಾತ್ರೆ ವಂಚಕರ ಜಾತ್ರೆ
> ತುಂಬುವವೆ ಹಸಿದವರ ಒಡಲೆಂಬ ಪಾತ್ರೆ?
> ಹಲವರಿಗೆ ನೀರಿಲ್ಲ ಸೂರಿಲ್ಲ ಇಂದೆ
> ಸಾಗಿಹವು ಮುಗ್ಧರನು ವಂಚಿಸುವ ದಂಡೆ
>
> - ವಿಡಂಬಾರಿ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH